ಮಂಗಳವಾರ, ಆಗಸ್ಟ್ 6, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಭರಣ
ಬೆಂಗಳೂರಿನಲ್ಲಿ ನಡೆದ ಏಷ್ಯಾ ಜ್ಯುವೆಲ್ಸ್ ಪ್ರದರ್ಶನ–2024ರ ಪತ್ರಿಕಾಗೋಷ್ಠಿಯಲ್ಲಿ ರೂಪದರ್ಶಿಯೊಬ್ಬರು ಕಂಡಿದ್ದು ಹೀಗೆ...



‘ಉಸಿರಿರೊವರೆಗೂ ಶ್ರೀಗಳೇ ಪೀಠಾಧಿಪತಿ’

ದಾವಣಗೆರೆಯಲ್ಲಿ ನಡೆದ ಸಭೆ ಅನಧಿಕೃತ, ನಿವೃತ್ತಿ ಘೋಷಣೆ ಬೇಡ; ತರಳಬಾಳು ಬೃಹನ್ಮಠದ ಭಕ್ತರ ಒಕ್ಕೊರಲ ಒತ್ತಾಯ

ಪ್ರಜಾವಾಣಿ ವಾರ್ತೆ



ಚಿತ್ರದುರ್ಗ ತಾಲ್ಲೂಕಿನ ಸಿರಿಗೆರೆಯ ತರಳಬಾಳು ಬೃಹನ್ಮಠದ ಆವರಣದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಭಾಗವಹಿಸಿದ್ದ ಭಕ್ತ ಸಮೂಹ

ಚಿತ್ರದುರ್ಗ: ‘ಕೊನೆ ಉಸಿರು ಇರುವವರೆಗೂ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯೇ ಸಿರಿಗೆರೆ ತರಳ ಬಾಳು ಬೃಹನ್ಮಠದ ಪೀಠಾಧಿಪತಿಯಾಗಿ ಮುಂದುವರಿಯ ಬೇಕು. ಶ್ರೀಗಳ ನಿವೃತ್ತಿ ಘೋಷಣೆಗೆ ಒತ್ತಾಯಿಸಿ ಶಾಸಕ ಶಾಮನೂರು ಶಿವಶಂಕರಪ್ಪ ನೇತೃತ್ವದಲ್ಲಿ ದಾವಣಗೆರೆಯಲ್ಲಿ ನಡೆದ ಸಭೆ ಅನಧಿಕೃತ. ನಿವೃತ್ತಿಗೆ ಒತ್ತಾಯಿಸಿದವರು ಕೂಡಲೇ ಶ್ರೀಗಳ ಪದತಲಕ್ಕೆ ಬಂದು ಕ್ಷಮೆ ಕೋರಬೇಕು’ ಎಂದು ಮಠದ ಭಕ್ತರು ಒಕ್ಕೊರಲಿನಿಂದ ಒತ್ತಾಯಿಸಿದರು.

ದಾವಣಗೆರೆಯಲ್ಲಿ ಭಾನುವಾರ ನಡೆದಿದ್ದ ಸಾಧು ಲಿಂಗಾಯತ ಮುಖಂಡರ ಸಭೆಗೆ ಪ್ರತಿಯಾಗಿ ಸೋಮವಾರ ತಾಲ್ಲೂಕಿನ ಸಿರಿಗೆರೆ ಮಠದಲ್ಲಿ ಭಕ್ತರ ಸಭೆ ನಡೆಯಿತು. ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಸಾವಿರಕ್ಕೂ ಹೆಚ್ಚು ಮಂದಿ ಭಾವುಕರಾಗಿ ಪ್ರತಿಕ್ರಿಯಿಸಿದರು. ದಾವಣಗೆರೆ ಸಭೆಯಲ್ಲಿ ಪಾಲ್ಗೊಂಡಿದ್ದ ಮುಖಂಡರ ವಿರುದ್ಧ ಘೋಷಣೆ ಕೂಗಿದರು. ಸಮಾಜ ಒಡೆಯಲು ಯತ್ನಿಸುತ್ತಿರುವ ಸ್ವಾರ್ಥಿಗಳನ್ನು ಮಠದಿಂದ ಬಹಿಷ್ಕರಿಸಬೇಕು ಎಂದು ಆಗ್ರಹಿಸಿದರು.

‘ಶ್ರೀಗಳು ಗ್ರಾಮೀಣ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿ ಮಾಡಿದ್ದಾರೆ. ಅವರ ಪ್ರಯತ್ನದಿಂದಾಗಿ ಈ ಭಾಗದ 45ಕ್ಕೂ ಹೆಚ್ಚು ಕೆರೆಗಳಿಗೆ ನೀರು ಬಂದಿದೆ. ಅವರು ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸಿದ್ದಾರೆ. 188 ದೇಶಗಳಲ್ಲಿ ಸಿರಿಗೆರೆ ಮಠದ ಕೀರ್ತಿ ಸಾರಿದ್ದಾರೆ. ಶ್ರೀಗಳು ಎರಡನೇ ವಿವೇಕಾನಂದ ಇದ್ದಂತೆ. ಅವರ ವಿರುದ್ಧ ಮತ್ತೆ ಹಗುರವಾಗಿ ಮಾತನಾಡಿದರೆ ಅವರೆಲ್ಲರ ಮನೆ ಮುಂದೆ ಪ್ರತಿಭಟನೆ ನಡೆಸುತ್ತೇವೆ. ಈ ಸಭೆ ಕೇವಲ ಸಾಂಕೇತಿಕ. ಮುಂದೆ ದೊಡ್ಡ ಮಟ್ಟದಲ್ಲಿ ಹೋರಾಟ ರೂಪಿಸಲಾಗುವುದು’ ಎಂದು ಎಚ್ಚರಿಸಿದರು.

‘ಶ್ರೀಗಳಿಗೆ ದೃಷ್ಟಿ ದೋಷವಿಲ್ಲ, ಆರೋಗ್ಯ ಕೆಟ್ಟಿಲ್ಲ. ಆರೋಗ್ಯವಂತರಾಗಿರುವ ಅವರನ್ನು ಪೀಠ ತ್ಯಾಗ ಮಾಡುವಂತೆ ಯಾರೂ ಕೇಳಕೂಡದು. ಏನೇ ಅಸಮಾಧಾನಗಳಿದ್ದರೂ ಮಠದ ಆವರಣಕ್ಕೆ ಬಂದು ಕೇಳಲಿ. ಅದನ್ನು ಬಿಟ್ಟು ಖಾಸಗಿ ರೆಸಾರ್ಟ್‌ನಲ್ಲಿ ಕುಳಿತು ಪ್ರಶ್ನಿಸಿದರೆ ನಾವು ಸುಮ್ಮನಿರಬೇಕಾ’ ಎಂದು ಪ್ರಶ್ನಿಸಿದರು.

‘ಆದಿಚುಂಚನಗಿರಿ ಮಠ, ಪೇಜಾವರ ಮಠ, ಸಿದ್ಧಗಂಗಾ ಮಠದ ಹಲವು ಶ್ರೀಗಳು ಪೀಠಾಧಿಪತಿಯಾಗಿಯೇ ಐಕ್ಯರಾಗಿದ್ದಾರೆ. ಅದೇ ರೀತಿ ಶಿವಮೂರ್ತಿ ಶಿವಾಚಾರ್ಯರೂ ಮುಂದುವರಿಯಬೇಕು. ಸ್ವಾಮೀಜಿ ಬಯಸಿದರೆ ಎಷ್ಟಾದರೂ ಮರಿ ಸ್ವಾಮಿಗಳನ್ನು ನೇಮಕ ಮಾಡಿಕೊಳ್ಳಲಿ’ ಎಂದರು.

‘ಶಾಸಕ ಶಾಮನೂರು ಶಿವಶಂಕರಪ್ಪ ಬಾಪೂಜಿ ವಿದ್ಯಾಸಂಸ್ಥೆ ಹೇಗೆ ಪಡೆದರು ಎಂಬುದು ಗೊತ್ತಿದೆ. ಹಲವು ಬಾರಿ ಶಾಸಕ, ಸಚಿವರಾಗಿದ್ದಾರೆ. ಅವರೇಕೆ ನಿವೃತ್ತಿ ಘೋಷಣೆ ಮಾಡುವುದಿಲ್ಲ? ಶಾಸಕರು, ಸಚಿವರೇ ಶೈಕ್ಷಣಿಕ ಸಂಸ್ಥೆ ಮಾಡಿಕೊಂಡು ಸೀಟುಗಳನ್ನು ಮಾರಾಟ ಕ್ಕಿಟ್ಟಿದ್ದಾರೆ. ಹೀಗಿರುವಾಗ ಮಠದ ಶಾಲೆಗಳು ಸೊರಗುತ್ತಿವೆ ಎಂದು ಪ್ರಶ್ನಿಸುವುದು ಎಷ್ಟು ಸರಿ’ ಎಂದು ಕಿಡಿಕಾರಿದರು.

ವೇದಿಕೆಯಲ್ಲಿ ಸಾಧು ಸದ್ಧರ್ಮ ವೀರಶೈವ ಸಂಘದ ಪದಾಧಿಕಾರಿಗಳು ಹಾಜರಿದ್ದರು. 13 ಜಿಲ್ಲೆಗಳಿಂದ ಬಂದಿದ್ದ ಭಕ್ತರು ಭಾಗವಹಿಸಿದ್ದರು. ಮಠದ ಆವರಣದಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

‘ನಿವೃತ್ತಿ ಘೋಷಿಸಲು ಸರ್ಕಾರಿ ನೌಕರನಲ್ಲ’



ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

‘ಕೆಲವರು ಹೇಳಿದ ಕೂಡಲೇ ನಿವೃತ್ತಿ ಘೋಷಣೆ ಮಾಡಲು ನಾನು ಸರ್ಕಾರಿ ನೌಕರನಲ್ಲ. ಸರ್ಕಾರ ನನ್ನನ್ನು ನೇಮಿಸಿಲ್ಲ. 60 ವರ್ಷವಾದ ನಂತರ ನಿವೃತ್ತಿ ಘೋಷಣೆ ಮಾಡಬೇಕು ಎಂದು ಬೈಲಾ ಹೇಳಿಲ್ಲ. ನನಗೆ ಗಡುವು ನೀಡಲು ಅವರು ಯಾರು? ರೆಸಾರ್ಟ್‌ನಲ್ಲಿ ನಡೆಸಿದ ಸಭೆಗೆ ನಾನು ಪ್ರಾಮುಖ್ಯ ನೀಡುವುದಿಲ್ಲ. ಆ.18ರಂದು ಪಾದಯಾತ್ರೆಯಲ್ಲಿ ಬಂದರೂ ನಾನು ಅವರನ್ನು ಖಾಸಗಿಯಾಗಿ ಭೇಟಿಯಾಗುವುದಿಲ್ಲ’ ಎಂದು ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಪ್ರತಿಕ್ರಿಯಿಸಿದರು.

‘ದೊಡ್ಡಗುರುಗಳಾದ ಶಿವಕುಮಾರ ಸ್ವಾಮೀಜಿಗಳ ಮುಂದೆ ಸಮಸ್ಯೆ ಬೆಟ್ಟದಷ್ಟಿತ್ತು. ವೈಯಕ್ತಿಕ ಕಾರಣ ನೀಡಿ ಅವರು 60ನೇ ವಯಸ್ಸಿಗೆ ಪೀಠ ತ್ಯಾಗ ಮಾಡಿದರು. ಆದರೆ ನನ್ನ ಮುಂದೆ ಗುಲಗಂಜಿಯಷ್ಟೂ ಸಮಸ್ಯೆ ಇಲ್ಲ. 1923ರಲ್ಲಿ ಆಗಿರುವ ಬೈಲಾ ಸಾಧು ಸದ್ಧರ್ಮ ವೀರಶೈವ ಸಂಘದ ಬೈಲಾ, ಅದು ಮಠದ ಬೈಲಾ ಅಲ್ಲ’ ಎಂದರು.

‘1977ರಲ್ಲಿ ದೊಡ್ಡಗುರುಗಳು ಬೈಲಾ ಪರಿಷ್ಕರಣೆ ಮಾಡಿದರು. ಅದರಂತೆ ಪೀಠಾಧಿಪತಿ ಬದಲಾವಣೆಗೆ ಹೆಚ್ಚು ಪ್ರಸರಣವುಳ್ಳ ಕನ್ನಡ ದಿನಪತ್ರಿಕೆಗೆ ಜಾಹೀರಾತು ನೀಡಿ, ಸಂದರ್ಶನ ಮಾಡಿ ಶ್ರೀಗಳನ್ನು ಆಯ್ಕೆ ಮಾಡಬೇಕು ಎಂದು ಪರಿಷ್ಕರಿಸಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಅದು ಸಾಧ್ಯವೇ? ಹಾಗೆ ಮಾಡಿದರೆ ಯಾರೆಲ್ಲಾ ಅರ್ಜಿ ಹಾಕಬಹುದು ಎಂದು ನೀವೇ ಯೋಚಿಸಿ. ಹೀಗಾಗಿ ಆ ಅಂಶವನ್ನು ಮಾತ್ರ ತಿದ್ದುಪಡಿ ಮಾಡುವ ಅವಶ್ಯಕತೆ ಇದೆ’ ಎಂದರು.

‘ಮಠದ ಚಟುವಟಿಕೆಗಳನ್ನು ತೆರಿಗೆ ವಿನಾಯಿತಿ ವ್ಯಾಪ್ತಿಗೆ ತರುವ ಉದ್ದೇಶದಿಂದ 1990ರಲ್ಲಿ ಡೀಡ್ ಮಾಡಲಾಯಿತು. ಅದನ್ನು ಆಡಳಿತ ಮಂಡಳಿ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದರೂ ಅದನ್ನು ಪ್ರಶ್ನಿಸುತ್ತಿರುವುದು ಏಕೆ? ಏನೇ ಅಸಮಾಧಾನವಿದ್ದರೂ ಸದ್ಧರ್ಮ ವೀರಶೈವ ಸಂಘಕ್ಕೆ ದೂರು ಕೊಡಲಿ. ಅದನ್ನು ಬಿಟ್ಟು ಖಾಸಗಿ ರೆಸಾರ್ಟ್‌ನಲ್ಲಿ ಮಾತನಾಡುವುದಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ


ಲಕ್ಷ ಲಕ್ಷ ದುಡ್ಡುಕೊಟ್ಟವರಿಗೆ ಮಾತ್ರ ಹುದ್ದೆ: ಪರಶುರಾಮ್ ಪತ್ನಿ ಶ್ವೇತಾ

ರಾಯಚೂರು: ‘ಯಾದಗಿರಿ ಪಿಎಸ್ಐ ಪರಶುರಾಮ್ ಅವರ ಸಾವಿಗೆ ಭ್ರಷ್ಟಾಚಾರವೇ ಕಾರಣ. ಲಂಚ ಕೊಟ್ಟವರಿಗೆ ಮಾತ್ರ ಪತ್ರ ಕೊಡುತ್ತಾರೆ. ನಂತರವೇ ಪೋಸ್ಟಿಂಗ್ ಕೊಡಲಾಗುತ್ತದೆ. ಯಾದಗಿರಿಯಲ್ಲಿ ಎಲ್ಲ ಪೊಲೀಸ್ ಅಧಿಕಾರಿಗಳು ಲಂಚ ಕೊಟ್ಟೇ ಹುದ್ದೆಗಳನ್ನು ಪಡೆದಿದ್ದಾರೆ’ ಎಂದು ಪರಶುರಾಮ್ ಅವರ ಪತ್ನಿ ಶ್ವೇತಾ ಗಂಭೀರ ಆರೋಪ ಮಾಡಿದರು.

ಜೆಡಿಎಸ್ ಜಿಲ್ಲಾ ಘಟಕದ ನಿಯೋಗವು ಮಂಗಳವಾರ ಶ್ವೇತಾ ಅವರ ನಿವಾಸಕ್ಕೆ ಭೇಟಿ ಮಾಡಿ ಸಾಂತ್ವನ ಹೇಳಿದ ನಂತರ ಅವರು ಪೊಲೀಸ್ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರ ವ್ಯವಸ್ಥೆಯನ್ನು ವಿವರಿಸಿದರು.

‘ಯಾದಗಿರಿ ನಗರ ಠಾಣೆಯಲ್ಲಿ ಪಿಎಸ್ಐ ಹುದ್ದೆಯನ್ನು ಕೊಟ್ಟಿಲ್ಲವೆಂದರೂ ಅಪರಾಧ ವಿಭಾಗದಲ್ಲಾದರೂ ಅವಕಾಶ ಮಾಡಿಕೊಡುವಂತೆ ಪರಶುರಾಮ್ ಕೇಳಿದ್ದರು. ಆದರೆ, ನೀವು ಯಾದಗಿರಿಯಲ್ಲೇ ಇರಬಾರದು ಎಂದು ಶಾಸಕರ ಕಡೆಯವರು ಒತ್ತಡ ಹಾಕಿದ್ದರು. ಇದರಿಂದ ಪರಶುರಾಮ್ ತೀವ್ರ ಒತ್ತಡಕ್ಕೆ ಒಳಗಾಗಿದ್ದರು. ಯಾದಗಿರಿ ಜಿಲ್ಲೆಯಲ್ಲಿ ಲಕ್ಷ ಲಕ್ಷ ಹಣ ಕೊಟ್ಟ ನಂತರವೇ ಅಧಿಕಾರಿಗಳಿಗೆ ಹುದ್ದೆಗಳನ್ನು ಕೊಡಲಾಗಿದೆ’ ಎಂದು ಆರೋಪಿಸಿದರು.

‘ಡಿವೈಎಸ್‌ಪಿ, ಸಿಪಿಐ ದುಡ್ಡು ಕೊಟ್ಟೇ ಇಲ್ಲಿದ್ದಾರೆ. ದುಡ್ಡು ಕೊಡದಿದ್ದರೆ ತೆಗೆದು ಬಿಸಾಕುತ್ತಾರೆ. ದುಡ್ಡು ಕೊಟ್ಟ ನಂತರವೇ ಎಲ್ಲರಿಗೂ ಆದೇಶಪತ್ರ ಕೊಡಲಾಗಿದೆ. ಐಜಿ ಕಚೇರಿಯಲ್ಲಿ ಕೇಳಿದರೆ ಎಲ್ಲವೂ ಗೊತ್ತಾಗುತ್ತದೆ’ ಎಂದು ಹೇಳಿದರು.



ಪೊಲೀಸರಿಂದ ಹಣ ಕೇಳಿಲ್ಲ: ಶಾಸಕ

ಬೆಂಗಳೂರು: ‘ಪಿಎಸ್‌ಐ ಪರಶುರಾಮ್ ಸಾವಿಗೆ ನಾನು ಮತ್ತು ನನ್ನ ಪುತ್ರ ಕಾರಣ ಎಂಬ ಆರೋಪ ಸತ್ಯಕ್ಕೆ ದೂರವಾದುದು. ನಾನು ಯಾವ ಪೊಲೀಸರಿಂದಲೂ ಹಣ ಕೇಳಿಲ್ಲ’ ಎಂದು ಯಾದಗಿರಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಚನ್ನಾರೆಡ್ಡಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪರಶುರಾಮ್ ಸಾವಿನ ಪ್ರಕರಣವನ್ನು ಸರ್ಕಾರ ಸಿಐಡಿಗೆ ವಹಿಸಿದೆ. ತನಿಖೆಯ ಮೂಲಕ ಸತ್ಯಾಸತ್ಯತೆ ಹೊರಗೆ ಬರಲಿ. ಕಾನೂನಿಗೆ ನಾನು ತಲೆ ಬಾಗುತ್ತೇನೆ’ ಎಂದರು.

‘ಈ ಪ್ರಕರಣದಲ್ಲಿ ತಂದೆ, ಮಕ್ಕಳನ್ನು ಸೇರಿಸಬೇಕು ಎಂದು ಷಡ್ಯಂತ್ರ ಮಾಡಲಾಗುತ್ತಿದೆ’ ಎಂದು ಆರೋಪಿಸಿದ ಚನ್ನಾರೆಡ್ಡಿ, ‘ಸಿಐಡಿ ಅವರು ಕರೆ ಮಾಡಿದ ತಕ್ಷಣ ಹೋಗಿ ತನಿಖೆ ಸಹಕರಿಸುತ್ತೇನೆ. ತನಿಖಾ ವರದಿ ಬಂದ ಬಳಿಕ ಇದು ಷಡ್ಯಂತ್ರವೊ, ಸತ್ಯವೊ, ಅಸತ್ಯವೊ ಎನ್ನುವುದು ಗೊತ್ತಾಗಲಿದೆ’ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಎಫ್‌ಐಆರ್ ದಾಖಲಿಸಲು ವಿಳಂಬದ ವಿಚಾರ ಪೊಲೀಸರಿಗೆ ಬಿಟ್ಟಿದ್ದು. ಅದರಲ್ಲಿ ನಾನು ಭಾಗಿ ಆಗಿಲ್ಲ. ಆ ಕುರಿತು ಯಾರ ಜೊತೆಗೂ ಮಾತನಾಡಿಲ್ಲ’ ಎಂದರು.

‘ಮುಖ್ಯಮಂತ್ರಿಯನ್ನು ಭೇಟಿ ಮಾಡಿದ್ದೇನೆ. ನಾವೆಲ್ಲರೂ ಜೊತೆಗಿರುತ್ತೇವೆ, ಧೈರ್ಯವಾಗಿರುವಂತೆ ಅವರು ಹೇಳಿದರು. ಹಾಗೆಂದು, ಯಾವ ವಿಚಾರವನ್ನು ಅವರಿಗೆ ನಾನು ತಿಳಿಸಿಲ್ಲ. ಗುಪ್ತಚರ ಇಲಾಖೆಯಿಂದ ಅವರಿಗೆ ಮಾಹಿತಿ ಹೋಗಿರುತ್ತದೆ’ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್ *	124.80	123.27	14,013	6,532
ಹಾರಂಗಿ	2,859	2,854.55	5,171	6,000
ಕಬಿನಿ	2,284.00	2,282.35	12,225	4,892
ಹೇಮಾವತಿ	2,922	2,921.25	12,889	5,575
ಲಿಂಗನಮಕ್ಕಿ	1,819	1,816.60	31,051	3,599
ಸೂಪಾ (ಮೀ)	564	557.56	27,164	434.19
ಮಾಣಿ	595	588.15	3,393	-
ತುಂಗಭದ್ರಾ	1,633	1,631.26	1,24,376	1,13,171
ಮಲಪ್ರಭಾ	2,079.5	2,076.25	6,794	6,794
ಘಟಪ್ರಭಾ	2175	2,171.00	30,188	26,792
ಭದ್ರಾ *	186	180	16,071	15,551
ಆಲಮಟ್ಟಿ (ಮೀ)	519.6	516.46	3,03,608	2,52,555
ನಾರಾಯಣಪುರ (ಮೀ)	492.25	490.96	2,10,000	1,89,700

* ನೆಲಮಟ್ಟದಿಂದ

‘ಉತ್ತರ ಕೊಟ್ಟು ಹೆಜ್ಜೆ ಹಾಕಿ’

ಪ್ರಜಾವಾಣಿ ವಾರ್ತೆ



ಮಂಡ್ಯ ಜಿಲ್ಲೆ ಮದ್ದೂರು ಪಟ್ಟಣದಲ್ಲಿ ಕಾಂಗ್ರೆಸ್ ವತಿಯಿಂದ ಸೋಮವಾರ ನಡೆದ ‘ಜನಾಂದೋಲನ ಸಮಾವೇಶ’ವನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಸಚಿವರಾದ ಶಿವಾನಂದ ಪಾಟೀಲ, ದಿನೇಶ್ ಗುಂಡೂರಾವ್, ಎಚ್.ಕೆ.ಪಾಟೀಲ, ಮಧು ಬಂಗಾರಪ್ಪ, ಎನ್‌.ಚಲುವರಾಯಸ್ವಾಮಿ, ರಾಮಲಿಂಗಾರೆಡ್ಡಿ ಹಾಗೂ ಶಾಸಕರು, ಮಾಜಿ ಸಚಿವರು ಇದ್ದಾರೆ –ಪ್ರಜಾವಾಣಿ ಚಿತ್ರ

ಮದ್ದೂರು (ಮಂಡ್ಯ ಜಿಲ್ಲೆ): ‘ವಿಜಯೇಂದ್ರ, ಅಶೋಕ, ಕುಮಾರಸ್ವಾಮಿ ಅವರೇ ಸುಮ್ಮನೆ ಪಾದಯಾತ್ರೆ ಮಾಡುವುದಲ್ಲ, ನಮ್ಮ ಪ್ರಶ್ನೆಗಳಿಗೆ ಉತ್ತರಕೊಟ್ಟು ಹೆಜ್ಜೆ ಹಾಕಿ. ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ಅವರನ್ನು ಮುಟ್ಟುವುದು ನಿಮ್ಮ ಹಣೆಯಲ್ಲಿ ಬರೆದಿಲ್ಲ. ಹಿಂದುಳಿದ ವರ್ಗದ ನಾಯಕ 2ನೇ ಬಾರಿ ಮುಖ್ಯಮಂತ್ರಿಯಾಗಿರುವುದನ್ನು ನಿಮಗೆ ಸಹಿಸಲು ಆಗುತ್ತಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಾಗ್ದಾಳಿ ನಡೆಸಿದರು.

ಸೋಮವಾರ ಇಲ್ಲಿ ಕಾಂಗ್ರೆಸ್‌ನ ‘ಜನಾಂದೋಲನ ಸಮಾವೇಶ’ ಉದ್ಘಾಟಿಸಿ ಮಾತನಾಡಿ, ಕುಮಾರಸ್ವಾಮಿ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದರು.

‘10 ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ತೆಗೆಯುವುದಾಗಿ ಎಚ್‌.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ನಮ್ಮದು 10 ವರ್ಷಗಳ ಸರ್ಕಾರ’ ಎಂದರು.

‘ಡಿನೋಟಿಫಿಕೇಶನ್ ಪ್ರಕರಣದಲ್ಲಿ ಬಿ.ಎಸ್.ಯಡಿಯೂರಪ್ಪ ಅವರನ್ನು ಜೈಲಿಗೆ ಕಳುಹಿಸಿದ್ದು ಯಾರು? ನೀವು ಧರ್ಮಸ್ಥಳಕ್ಕೆ ಹೋಗಿ ಆಣೆ ಮಾಡಿದ ನಂತರ ಏನಾಯಿತು? ಎಂಬುದನ್ನು ನೀವೇ ಚರ್ಚಿಸಿಕೊಳ್ಳಿ. ಶಿವಕುಮಾರ್ ಅಪ್ಪ ಅಮ್ಮನಿಗೆ ಹುಟ್ಟಿಲ್ಲ ಎಂದು ಹೇಳಿದ್ದ ಕುಮಾರಸ್ವಾಮಿ ಸಾತನೂರಿಗೆ ಬಂದು ಕ್ಷಮೆ ಕೇಳಿದ್ದ. ನಿಮ್ಮ ಪಾದಯಾತ್ರೆಗಳಿಗೆಲ್ಲ ಹೆದರುವ ಮಗ ನಾನಲ್ಲ’ ಎಂದು ತಿರುಗೇಟು ನೀಡಿದರು.

‘ಕುಮಾರಸ್ವಾಮಿ, ನಾವು ನಿಮ್ಮ ಪೆನ್ ಡ್ರೈವ್ ವಿಚಾರಕ್ಕೆ ಬಂದಿದ್ದೇವೆಯೇ? ನೀನುಂಟು ನಿಮ್ಮ ಅಣ್ಣ, ತಮ್ಮಂದಿರು ಉಂಟು. ಪೆನ್ ಡ್ರೈವ್ ಹಿಂದೆ ಮಹಾನಾಯಕ ಇದ್ದಾರೆ ಎಂದು ಹೇಳಿದ್ದ ನೀನು ಮಾತಿಗೆ ಬದ್ಧನಾಗಿರಬೇಕಿತ್ತು. ನನ್ನ ಬಗ್ಗೆ ಮಾತನಾಡಲಿಲ್ಲ ಅಂದರೆ ನಿನಗೆ ನಿದ್ರೆ ಬರುವುದಿಲ್ಲ ಎನ್ನುವುದು ಗೊತ್ತಿದೆ. 1985ರಿಂದ ನಿಮ್ಮ ಕುಟುಂಬದ ಹಾಗೂ ನನ್ನ ನಡುವೆ ತಿಕ್ಕಾಟ ನಡೆಯುತ್ತಿದೆ’ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕುಮಾರಸ್ವಾಮಿ ನನ್ನ ಸವಾಲನ್ನು ಸ್ವೀಕರಿಸಿ, ಚರ್ಚಿಸಲು ದಿನಾಂಕ ನಿಗದಿಪಡಿಸಲಿ. ಅವರು ಅಸೆಂಬ್ಲಿಗೆ ಬರೋಕೆ ಆಗಲ್ಲ. ಅವರ ಸಹೋದರನನ್ನು ಚರ್ಚೆಗೆ ಕಳುಹಿಸಲಿ’ ಎಂದು ಆಹ್ವಾನಿಸಿದರು. ‘ನಾನು ಯಾವುದೇ ದಲಿತ ಕುಟುಂಬವನ್ನು ಹಾಳು ಮಾಡಿಲ್ಲ. ಬೇಕಾದರೆ ಪಟ್ಟಿ ಕೊಡಲಿ’ ಎಂದು ಟೀಕೆಗೆ ಉತ್ತರಿಸಿದರು.

‘ಲೂಟಿ, ಹಗರಣಕ್ಕೆ ಉತ್ತರ ಕೊಡಿ’

‘ನನ್ನ, ನಿನ್ನ ಆಸ್ತಿಯ ಪಟ್ಟಿಯಿದೆ. ನಿನ್ನ ಬೇನಾಮಿಯಾದ ಸಹೋದರನ ಆಸ್ತಿಯ ಪಟ್ಟಿ ಕೊಡಪ್ಪ ಕುಮಾರಣ್ಣ, ನೀನು ಅಧಿಕಾರದಲ್ಲಿದ್ದಾಗ ಕನಕಪುರ ಸೇರಿದಂತೆ ಇತರೆಡೆ ಮಾಡಿರುವ ಪಟ್ಟಿ ಹೇಳಿದ್ದೇನೆ. ನೀನು ಒಂದು ಪಟ್ಟಿ ಕೊಡು ಹಾಗೂ ಮೊದಲು ಪಾದಯಾತ್ರೆ ಏಕೆ ಬೇಡ ಎಂದು ಹೇಳಿದೆ? ನಂತರ ಏಕೆ ಒಪ್ಪಿಕೊಂಡೆ? ಇದಕ್ಕೆ ಮೊದಲು ಉತ್ತರಿಸು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

‘ಯಡಿಯೂರಪ್ಪ, ಬೊಮ್ಮಾಯಿ ಕಾಲದಲ್ಲಿ ಎಪಿಎಂಸಿಯಿಂದ ₹47 ಕೋಟಿ ಲೂಟಿ. ಭೋವಿ ಅಭಿವೃದ್ಧಿ ನಿಗಮದಲ್ಲಿ ₹87 ಕೋಟಿ, ದೇವರಾಜು ಅರಸು ಟ್ರಕ್ ಟರ್ಮಿನಲ್ ₹50 ಕೋಟಿ, ಗಂಗಾ ಕಲ್ಯಾಣ ಯೋಜನೆಯಲ್ಲಿ ₹430 ಕೋಟಿ, ಪಿಎಸ್‌ಐ ಹಗರಣ, ಪರಶುರಾಮ ಪ್ರತಿಮೆ ಹಗರಣ ಸೇರಿದಂತೆ ಹಲವಾರು ಹಗರಣಗಳು ನಡೆದಿವೆ’ ಎಂದರು.

‘ಯಡಿಯೂರಪ್ಪ ಅವರ ಆಪ್ತ ಉಮೇಶ್ ಮನೆಯಲ್ಲಿ ₹700 ಕೋಟಿಗೂ ಹೆಚ್ಚು ಅಕ್ರಮ ಹಣದ ದಾಖಲೆಗಳು ದೊರೆಯಿತು. ಕೋವಿಡ್ ಸಮಯದಲ್ಲಿ ಹೆಣದ ಮೇಲೆ ಹಣ ಮಾಡಿದರು. ಈ ಎಲ್ಲ ಲೂಟಿ, ಹಗರಣಗಳಿಗೆ ಮೊದಲು ಉತ್ತರಿಸಿ’ ಎಂದು ಆಗ್ರಹಿಸಿದರು.

‘ದಲಿತರ ಹಣ ಲೂಟಿಗೈದ ಸಿ.ಎಂ’

ಪ್ರಜಾವಾಣಿ ವಾರ್ತೆ



ಬಿಜೆಪಿ–ಜೆಡಿಎಸ್ ಪಾದಯಾತ್ರೆ ಚನ್ನಪಟ್ಟಣ ತಲುಪಿದಾಗ ಒಟ್ಟಿಗೆ ಕಾಣಿಸಿಕೊಂಡಾಗ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಬಿಜೆಪಿಯ ವಿರೋಧ ಪಕ್ಷದ ನಾಯಕ ಆರ್‌. ಅಶೋಕ, ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ, ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಶಾಸಕ ಡಾ. ಸಿ.ಎನ್‌. ಅಶ್ವತ್ಥ ನಾರಾಯಣ ಒಟ್ಟಿಗೆ ಹೆಜ್ಜೆ ಹಾಕಿದರು

ಚನ್ನಪಟ್ಟಣ (ರಾಮನಗರ): ದಲಿತರ ಹೆಸರಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಪರಿಶಿಷ್ಟರ ಅನುದಾನವನ್ನೇ ಲೂಟಿ ಹೊಡೆದಿದ್ದಾರೆ. ಸಂವಿಧಾನ ಉಳಿಸುತ್ತೇವೆ ಎಂದು ಸಂವಿಧಾನ ವಿರೋಧಿ ಆಡಳಿತ ನಡೆಸುತ್ತಿದ್ದಾರೆ. ಕನಕಪುರದಲ್ಲಿ ಎಷ್ಟೋ ದಲಿತ ಕುಟುಂಬಗಳನ್ನು ಹಾಳು ಮಾಡಿರುವ ಡಿ.ಕೆ ಸಹೋದರರು ಅನೇಕ ಹೆಣ್ಣು ಮಕ್ಕಳ ಕಣ್ಣೀರು ಹಾಕಿಸಿದ್ದಾರೆ...

– ಮುಡಾ ಹಗರಣ ವಿರೋಧಿಸಿ ಬಿಜೆಪಿ–ಜೆಡಿಎಸ್ ಹಮ್ಮಿಕೊಂಡಿರುವ ‘ಮೈಸೂರು ಚಲೋ’ ಪಾದಯಾತ್ರೆ ಮೂರನೇ ದಿನ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಸೋಮವಾರ ಚನ್ನಪಟ್ಟಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಹರಿಹಾಯ್ದ ರೀತಿ ಇದು.

‘ದಲಿತರನ್ನು ರಕ್ಷಿಸುತ್ತೇವೆ ಎಂದಿದ್ದ ಸಿದ್ದರಾಮಯ್ಯ ಸರ್ಕಾರದ ವರ್ಗಾವಣೆ ದಂಧೆಗೆ ಯಾದಗಿರಿಯ ಪಿಎಸ್‌ಐ, ಪರಿಶಿಷ್ಟ ಸಮುದಾಯದ ಪರಶುರಾಮ ಬಲಿಯಾಗಿದ್ದಾರೆ. ಯಾದಗಿರಿ ಕಾಂಗ್ರೆಸ್ ಶಾಸಕ ಮತ್ತು ಪುತ್ರನನ್ನು ಬಂಧಿಸುವ ಬದಲು ಮುಖ್ಯಮಂತ್ರಿ ಇಬ್ಬರನ್ನೂ ಮನೆಗೆ ಕರೆಸಿಕೊಂಡು ಮಾತನಾಡಿದ್ದಾರೆ’ ಎಂದು ಟೀಕಿಸಿದರು.

‘ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿರುವ ಸಿದ್ದರಾಮಯ್ಯ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದರೋಡೆ ಮಾಡಿದರು. ಮೈಸೂರಿನ ಮುಡಾದಲ್ಲಿ 14 ನಿವೇಶನ ಗುಳುಂ ಮಾಡಿದರು. ಅಹಿಂದ ನಾಯಕ ಎಂದು ಬಿಂಬಿಸಿಕೊಂಡು ಎಲ್ಲಾ ಅಕ್ರಮ ಮಾಡಿದರು’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿಯೊಬ್ಬರು ಮುಡಾದಲ್ಲಿ 14 ನಿವೇಶನ ಪಡೆದ ನಿದರ್ಶನ ರಾಜ್ಯದ ಇತಿಹಾಸದಲ್ಲಿಯೇ ಇಲ್ಲ. ಸಿದ್ದರಾಮಯ್ಯ ರಾಜ್ಯದಲ್ಲಿ ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಕೂಡಲೇ ಅವರ ರಾಜೀನಾಮೆ ಪಡೆಯಲಿ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಒತ್ತಾಯಿಸಿದರು.

ಆಣೆ, ಪ್ರಮಾಣದ ಸವಾಲು

ಅಮಾಯಕರಿಗೆ ಗನ್ ತೋರಿಸಿ ಬೆದರಿಸಿ ಆಸ್ತಿ ಬರೆಯಿಸಿಕೊಂಡ ಡಿ.ಕೆ. ಶಿವಕುಮಾರ್ ತಮ್ಮ ಆಸ್ತಿಯನ್ನು ಎರಡು ಸಾವಿರ ಪಟ್ಟು ಹೆಚ್ಚಿಸಿಕೊಂಡಿದ್ದಾರೆ. ಈ ಅನಾಚಾರಗಳ ಬಗ್ಗೆ ನೊಣವಿನಕೆರೆ ಅಜ್ಜಯ್ಯನ ಮುಂದೆ ಬಂದು ಪ್ರಮಾಣ ಮಾಡಲಿ. ಬಿಜೆಪಿ ಹಗರಣಗಳ ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ ಎಂದು ಕುಮಾರಸ್ವಾಮಿ ಸವಾಲು ಹಾಕಿದರು.

ನನಗೆ ರಾಜಕೀಯ ಶಕ್ತಿ ಕೊಟ್ಟಿದ್ದು ಬಿಜೆಪಿ, ಯಡಿಯೂರಪ್ಪ ಅವರ ನಾಯಕತ್ವ. ನಂತರ ನಮ್ಮ ನಡುವೆ ಭಿನ್ನಾಭಿಪ್ರಾಯ ಬಂದಿರಬಹುದು. ಈಗ ಎಲ್ಲಾ ಮರೆತು ಒಂದಾಗಿದ್ದೇವೆ
ಎಚ್‌.ಡಿ. ಕುಮಾರಸ್ವಾಮಿ
ಕೇಂದ್ರ ಸಚಿವ

‘ನನ್ನ ಆಸ್ತಿ ಕುರಿತು ಶಿವಕುಮಾರ್ ಪ್ರಶ್ನಿಸುತ್ತಾರೆ. ಕೇತಗಾನಹಳ್ಳಿಯಲ್ಲಿ 20 ಟನ್ ಕೊಬ್ಬರಿ ಬೆಳೆದಿದ್ದೇನೆ. ಬಾಳೆ, ಅಡಿಕೆಯಲ್ಲಿ ₹50 ಲಕ್ಷ ಸಂಪಾದಿಸಿದ್ದೇನೆ’ ಎಂದರು.

‘ಕೆಂಪೇಗೌಡರ ವಂಶಸ್ಥರು ಎಂದು ಡಿ.ಕೆ. ಸಹೋದರರು ಹೇಳಿಕೊಳ್ಳುತ್ತಾರೆ. ಇವರ ತಂದೆ ಕನಕಪುರದಲ್ಲಿ ಚಿನ್ನ ಅಳೆಯೋಕೆ ಹೋಗುತ್ತಿದ್ದರಂತೆ. ವಿಜಯನಗರದ ಕೃಷ್ಣದೇವರಾಯ ಇವರ ಬಳಿ ಬಂದು ಚಿನ್ನ ಖರೀದಿಸುತ್ತಿದ್ದರು ಎನಿಸುತ್ತದೆ’ ಎಂದು ವ್ಯಂಗ್ಯವಾಡಿದರು. ಆಗ ಜನರು ‘ಚಿನ್ನವಲ್ಲ, ಕಡಲೆಕಾಯಿ ಅಳೆಯುತ್ತಿದ್ದರು’ ಎಂದು ಕೂಗಿದರು. ಅದಕ್ಕೆ ಎಚ್‌ಡಿಕೆ ‘ಇರಬಹುದು’ ಎಂದು ನಕ್ಕರು.

ಯತ್ನಾಳ ಆರೋಪಗಳಿಗೆ ಉತ್ತರಿಸಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮಗೆ ಪ್ರಶ್ನೆ ಕೇಳುವ ಮೊದಲು ನಿಮ್ಮದೇ ಪಕ್ಷದ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ್ ಅವರು ನಿರಂತರವಾಗಿ ಪಕ್ಷದ ಅಧ್ಯಕ್ಷರಾದ ಬಿ.ವೈ. ವಿಜಯೇಂದ್ರ ಅವರ ವಿರುದ್ಧ ಮಾಡುತ್ತಿರುವ ಗಂಭೀರ ಸ್ವರೂಪದ ಆರೋಪಗಳಿಗೆ ಉತ್ತರಿಸುವ ಧೈರ್ಯ ತೋರಿಸಿ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿರೋಧ ಪಕ್ಷದ ನಾಯಕ ಆರ್. ಅಶೋಕಗೆ ಎದಿರೇಟು ನೀಡಿದ್ದಾರೆ.

ಹಗರಣ ಕುರಿತು ತಾವು ಕೇಳಿದ ಪ್ರಶ್ನೆಗಳಿಗೆ ಇದುವರೆಗೂ ಮುಖ್ಯಮಂತ್ರಿ ಉತ್ತರ ನೀಡಿಲ್ಲ ಎಂಬ ಅಶೋಕ ಅವರ ಹೇಳಿಕೆಗೆ ‘ಎಕ್ಸ್’ನಲ್ಲೇ ಪ್ರತಿಕ್ರಿಯೆ ನೀಡಿರುವ ಅವರು, ‘ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿದೆ. ನಿಮಗೆ ಇಲ್ಲವೇ ನಿಮ್ಮ ಪಕ್ಷಕ್ಕೆ ಏನಾದರೂ ಹೇಳುವುದಿದ್ದರೆ, ಕೇಳುವುದಿದ್ದರೆ ತನಿಖಾ ತಂಡವನ್ನು ಭೇಟಿಯಾಗಿ’ ಎಂದಿದ್ದಾರೆ.

ಕಾನೂನಾತ್ಮಕ ಹೋರಾಟ ಮುಂದುವರಿಕೆ: ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ

‘ಮುಡಾ: ರಾಹುಲ್ ಗಾಂಧಿ ಜತೆ ಚರ್ಚೆಗೆ ಸಿದ್ಧ’

ಪ್ರಜಾವಾಣಿ ವಾರ್ತೆ



ಟಿ.ಜೆ. ಅಬ್ರಹಾಂ

ಮೈಸೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಪಾರ್ವತಿ ಅವರಿಗೆ ನೀಡಿರುವ 14 ನಿವೇಶನಗಳನ್ನು ವಾಪಸ್ ಪಡೆಯಬೇಕು’ ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಅವರು ಮುಡಾ ಆಯುಕ್ತ ರಘುನಂದನ್ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅಬ್ರಹಾಂ, 'ಮೈಸೂರಿನ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464 ರಲ್ಲಿ 2001ರಲ್ಲಿಯೇ ಮುಡಾ ನಿವೇಶನಗಳನ್ನು ರಚಿಸಿ, ನಂತರದಲ್ಲಿ 19 ಫಲಾನುಭವಿಗಳಿಗೆ ಹಂಚಿದೆ. 2004ರಲ್ಲಿ ಸಿದ್ದರಾಮಯ್ಯ ಭಾಮೈದ ಮಲ್ಲಿಕಾರ್ಜುನಸ್ವಾಮಿ ಅದೇ ಜಮೀನನ್ನು ಖರೀದಿಸಿದ್ದಾರೆ. ಆ ಖರೀದಿಯೇ ಅಕ್ರಮವಾಗಿರುವುದರಿಂದ, ಅವರಿಗೆ ಬದಲಿ ನಿವೇಶನ ನೀಡಲು ಅವಕಾಶವೇ ಇಲ್ಲ. ಹೀಗಾಗಿ ಮುಡಾದಿಂದ ಹಂಚಿಕೆಯಾಗಿರುವ ನಿವೇಶನಗಳನ್ನು ವಾಪಸ್ ಪಡೆಯಬೇಕು ಎಂದು ಮನವಿ ಮಾಡಿದ್ದೇನೆ’ ಎಂದರು.

‘ಮುಡಾ ಹಗರಣಕ್ಕೂ ಸಿದ್ದರಾಮಯ್ಯನವರಿಗೂ ಸಂಬಂಧವೇ ಇಲ್ಲ. ಹಗರಣ ಸಾಬೀತಾದರೆ ಬಸವರಾಜ ಬೊಮ್ಮಾಯಿ, ಅಂದಿನ ಮುಡಾ ಅಧ್ಯಕ್ಷ ಜೈಲಿಗೆ ಹೋಗಬೇಕಾಗುತ್ತದೆ’
ಎನ್‌.ಚಲುವರಾಯಸ್ವಾಮಿ
ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ

‘ಸಿದ್ದರಾಮಯ್ಯ ಪತ್ನಿಗೆ ಬದಲಿ ನಿವೇಶನ ನೀಡುವ ಸಂಬಂಧ ನಡೆದಿದ್ದ ಮುಡಾ ಸಭೆಯಲ್ಲಿ ಅಂದಿನ ಶಾಸಕ ಡಾ. ಯತೀಂದ್ರ ಅವರೂ ಇದ್ದರು’ ಎಂದರು.

'ಮುಡಾ ವಿಚಾರದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಜೊತೆಗೆ ಚರ್ಚೆಗೆ ಸಿದ್ಧ. ಕಾಂಗ್ರೆಸ್ ನಾಯಕರು ಸಮಯ ಕೊಡಿಸುತ್ತಾರೆಯೇ’ ಎಂದರು.

ತಮ್ಮನ್ನು ಬ್ಲಾಕ್‌ಮೇಲರ್ ಎಂದು ಕರೆದಿರುವ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ ‘ಈ ಹಿಂದೆ ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್ ವಿರುದ್ಧ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾಗ ಅದೇ ಸಿದ್ದರಾಮಯ್ಯ ಸದನದಲ್ಲೇ ನನ್ನ ಹೆಸರು ಹೇಳಿ ಬೆನ್ನು ತಟ್ಟಿದ್ದರು. ಈಗ ಬ್ಲಾಕ್‌ಮೇಲರ್ ಆದೆನೇ' ಎಂದು ಪ್ರಶ್ನಿಸಿದರು.

‘ನನ್ನ ದೂರು ಆಧರಿಸಿ ರಾಜ್ಯಪಾಲರು ಮುಖ್ಯಮಂತ್ರಿಗೆ ನೋಟಿಸ್ ನೀಡಿದ್ದಾರೆ. ಪ್ರಾಸಿಕ್ಯುಶನ್‌ಗೆ ಅನುಮತಿ ಸಿಗುವ ನಿರೀಕ್ಷೆ ಇದೆ. ಕಾನೂನಾತ್ಮಕವಾಗಿ ಹೋರಾಟ ಮುಂದುವರಿಸುತ್ತೇನೆ’ ಎಂದರು.

‘ಮೂರೂ ಪಕ್ಷದವರು ನಿವೇಶನ ಪಡೆದಿದ್ದಾರೆ’

‘ಮೈಸೂರು: ‘ ಕೇವಲ ಸಿದ್ದರಾಮಯ್ಯ ಮಾತ್ರವಲ್ಲ, ಮೂರು ಪಕ್ಷದವರೂ ಮುಡಾದಲ್ಲಿ ನಿವೇಶನ ಪಡೆದಿದ್ದಾರೆ. ಜೆಡಿಎಸ್‌ನವರೇ ಹೆಚ್ಚಿದ್ದಾರೆ. ಎಲ್ಲವೂ ತನಿಖೆಯಾಗಲಿ ಪ್ರಕರಣವನ್ನು ಸಿಬಿಐಗೆ ವಹಿಸಿ ಸತ್ಯಾಂಶ ಹೊರತೆಗೆಯಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಎಚ್‌. ವಿಶ್ವನಾಥ್ ಹೇಳಿದರು.

‘ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮುಡಾದಿಂದ ಬೇರೆಡೆಗೆ ನಿಯೋಜನೆಗೊಂಡಿದ್ದ ಅಧಿಕಾರಿಗಳು ಮತ್ತೆ ಅದೇ ಜಾಗದಲ್ಲಿ ವಕ್ಕರಿಸಿ ರಾತ್ರಿಯಿಡೀ ದಾಖಲೆಗಳನ್ನು ತಿದ್ದುತ್ತಿದ್ದಾರೆ. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಹತ್ವದ ದಾಖಲೆಗಳನ್ನು ಈಗಾಗಲೇ ವಿಮಾನದಲ್ಲಿ ಹೊತ್ತೊಯ್ದಿದ್ದಾರೆ. ಈಗ ಉಳಿದ ದಾಖಲೆಗಳನ್ನು ಹಾಳುಗೆಡವುತ್ತಿದ್ದು, ಅದಕ್ಕೆಂದೇ ಮುಡಾದಲ್ಲಿನ ಸಿಸಿಟಿವಿ ಕ್ಯಾಮೆರಾಗಳನ್ನು ಕಿತ್ತು ಹಾಕಲಾಗಿದೆ’ ಎಂದು ಆರೋಪಿಸಿದರು.

‘ದಾಖಲೆ ತಿದ್ದಲೆಂದೇ ತಮಗೆ ಬೇಕಾದವರನ್ನು ಆಯುಕ್ತರ ಜಾಗಕ್ಕೆ ತಂದು ಕೂರಿಸಿದ್ದಾರೆ. ಹೀಗಿರುವಾಗ ದೇಸಾಯಿ ಆಯೋಗ ಬಂದು ಏನು ತನಿಖೆ ಮಾಡಲು ಸಾಧ್ಯ?’ ಎಂದು ಪ್ರಶ್ನಿಸಿದರು.

ಪಾದಯಾತ್ರೆ ಹೆಸರಿನಲ್ಲಿ ಮಾನ ಹರಾಜು: ‘ಪಾದಯಾತ್ರೆ, ಜನಾಂದೋಲನದ ಹೆಸರಿನಲ್ಲಿ ಮೂರೂ ಪಕ್ಷಗಳು ರಾಜ್ಯದ ಮಾನ ಹರಾಜು ಮಾಡುತ್ತಿದ್ದು, ಸಾರ್ವಜನಿಕ ಹಿತಾಸಕ್ತಿಗಿಂತ ಕೌಟುಂಬಿಕ ಹಿತಾಸಕ್ತಿಯೇ ಹೆಚ್ಚಾಗಿದೆ’ ಎಂದು ಅವರು ಟೀಕಿಸಿದರು.

‘ಹುಬ್ಬಳ್ಳಿ ಮೇಲ್ಸೇತುವೆ ಕಾಮಗಾರಿ: ನಕ್ಷೆ ಬದಲಿಸಿರಬಹುದು’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಮೇಲ್ಸೇತುವೆ ಯೋಜನೆಯ ಮೂಲ ನೀಲನಕ್ಷೆಯಲ್ಲಿ ಈದ್ಗಾ ಕಾಂಪೌಂಡ್ ತೆರವು ಇರಲಿಲ್ಲ. ಈಗ ನಕ್ಷೆಯನ್ನೇ ಬದಲಿಸಿ, ಕಾಂಪೌಂಡ್ ತೆರವಿಗೆ ನಿರ್ಧರಿಸಿರಬಹುದು’ ಎಂದು ಮುಸ್ಲಿಂ ಸಮುದಾಯದ ಮುಖಂಡ ಅಲ್ತಾಫ್ ಹಳ್ಳೂರ ಹೇಳಿದ್ದಾರೆ.

‘ಮೇಲ್ಸೇತುವೆ ಕಾಮಗಾರಿಗಾಗಿ ರಾಣಿ ಚನ್ನಮ್ಮ ವೃತ್ತದ ಬಳಿಯಿರುವ ಈದ್ಗಾ ಮೈದಾನದ ಕಾಂಪೌಂಡ್ ಭಾಗಶಃ ತೆರವು ಆಗಲಿದೆ ಎಂಬ ಮಾಹಿತಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಆದರೆ, ಮೂಲ ನೀಲನಕ್ಷೆಯಲ್ಲಿ ಇರದ ತೆರವು ಅಂಶ ಈಗ ಏಕಾಏಕಿ ಹೇಗೆ ಉದ್ಭವಿಸಿತು ಎಂದು ತಿಳಿಯುತ್ತಿಲ್ಲ’ ಎಂದು ಅವರು ಸೋಮವಾರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಈ ಬೆಳವಣಿಗೆ ಹಿನ್ನೆಲೆಯಲ್ಲಿ ಅಂಜುಮನ್ ಸಂಸ್ಥೆಯ ಪದಾಧಿಕಾರಿಗಳ ಸಭೆ ತುರ್ತು ಕರೆಯಲಾಗುವುದು. ಹೆದ್ದಾರಿ ಪ್ರಾಧಿಕಾರದಿಂದ ಸಂಪೂರ್ಣ ಮಾಹಿತಿ ಪಡೆದು, ಮುಂದಿನ ನಿರ್ಧಾರ ತಿಳಿಸಲಾಗುವುದು’ ಎಂದರು.

‘ಈದ್ಗಾ ಮೈದಾನ ಧಾರ್ಮಿಕ ಸ್ಥಳವಾಗಿದ್ದು, ಅಲ್ಲಿನ ಕಟ್ಟಡಕ್ಕೆ ತೊಂದರೆ ಆಗಬಾರದು ಎಂಬುದು ನಮ್ಮ ಮನವಿ. ಕೋಮು ಸೌಹಾರ್ದಕ್ಕೆ ಧಕ್ಕೆಯಾಗದ ರೀತಿ ಅಭಿವೃದ್ಧಿ ಕಾರ್ಯ ನಡೆಯಲಿ. ಈದ್ಗಾ ಮೈದಾನ ಸುತ್ತಮುತ್ತ ಯಾವುದೆಲ್ಲ ಸ್ವರೂಪದಲ್ಲಿ ಕಾಮಗಾರಿ ನಡೆಯಲಿದೆ ಎಂಬ ಬಗ್ಗೆ ವಿವರಣೆ ನೀಡುವಂತೆ ಸಚಿವ ಸಂತೋಷ ಲಾಡ್ ಅವರಿಗೆ ಮತ್ತೊಮ್ಮೆ ಕೋರಲಾಗುವುದು’ ಎಂದು ಅಂಜುಮನ್ ಸಂಸ್ಥೆ ಶಿಕ್ಷಣ ಮಂಡಳಿ ಸದಸ್ಯ ನವೀದ್ ಮುಲ್ಲಾ ಹೇಳಿದರು.

‘ಪಾಲಿಕೆ ಆಸ್ತಿಯಾದ ಕಾರಣ ಪಾಲಿಕೆಗೆ ಮತ್ತು ಭೂಸ್ವಾಧೀನ ಪ್ರಾಧಿಕಾರಕ್ಕೆ ಪತ್ರ ಬರೆದಿದ್ದೇವೆ. ಅಲ್ಲಿಂದ ಕ್ರಮ ಜರುಗಲಿದೆ. ಇದರಲ್ಲಿ ನಮ್ಮ ಪಾತ್ರವಿಲ್ಲ’ ಎಂದು ಅಧಿಕಾರಿಗಳು ಹೇಳಿದ್ದಾರೆಂದು ಗೊತ್ತಾಗಿದೆ.

ಗುಡಿಬಂಡೆ: ಮಗನಿಂದ ತಾಯಿ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಗುಡಿಬಂಡೆ (ಚಿಕ್ಕಬಳ್ಳಾಪುರ): ತಾಲ್ಲೂಕಿನ ಉಲ್ಲೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದಲ್ಲಿ ಭಾನುವಾರ ರಾತ್ರಿ ಮದ್ಯದ ಅಮಲಿನಲ್ಲಿ ಮಗನೇ ತಾಯಿಯ ಮೇಲೆ ಅತ್ಯಾಚಾರ ಎಸಗಿದ್ದಾನೆ.

ಅಲ್ಲದೆ ತಂದೆ ಮತ್ತು ತಾಯಿಯ ಮೇಲೆ ತೀವ್ರವಾಗಿ ಹಲ್ಲೆ ನಡೆಸಿ ಅವರನ್ನು ಮನೆ ಹಿಂಭಾಗದ ತಿಪ್ಪೆಗುಂಡಿಗೆ ಎಸೆದು ಪರಾರಿ ಆಗಿದ್ದಾನೆ. ನೆರೆಹೊರೆಯವರು ಈ ವಿಚಾರವನ್ನು ಪೊಲೀಸರಿಗೆ ತಲುಪಿಸಿದ್ದಾರೆ. ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಆರೋಪಿಗೆ ವಿವಾಹವಾಗಿದ್ದು ಆತನ ಪತ್ನಿ ದೂರವಿದ್ದಾಳೆ ಎನ್ನಲಾಗುತ್ತಿದೆ. ಈತ ತಂದೆ, ತಾಯಿಯ ಜೊತೆ ವಾಸಿಸುತ್ತಿದ್ದ. ಸಂತ್ರಸ್ತೆಯ ಹೇಳಿಕೆಯನ್ನು ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಸೋಮವಾರ ರಾತ್ರಿ ಗುಡಿಬಂಡೆ ಠಾಣೆಗೆ ಡಿವೈಎಸ್‌ಪಿ ಶಿವಕುಮಾರ್ ಭೇಟಿ ನೀಡಿ ಪ್ರಕರಣದ ಮಾಹಿತಿ ಪಡೆದರು. ಆಸ್ಪತ್ರೆಗೂ ಭೇಟಿ ನೀಡಿ ಆರೋಪಿಯ ತಂದೆಯಿಂದ ಮಾಹಿತಿ ಕಲೆ ಹಾಕಿದರು.

ಸಿ.ಎಂ ಪತ್ನಿಗೆ ನೀಡಿದ ನಿವೇಶನ ಹಿಂಪಡೆಯಲಿ: ಸ್ವಾಮೀಜಿ

ಪ್ರಜಾವಾಣಿ ವಾರ್ತೆ



ಕಾಗಿನೆಲೆ ಕನಕ ಗುರುಪೀಠ ವತಿಯಿಂದ ನಗರದಲ್ಲಿ ಸೋಮವಾರ ಆಯೋಜಿಸಿದ್ದ ಸಮಾರಂಭದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ‘ಕನಕ ಚೇತನ‘ ಪ್ರಶಸ್ತಿ ನೀಡಿ ಗೌರವಿಸಲಾಯಿತು

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ ಹಂಚಿಕೆ ಮಾಡಿರುವ 14 ಬದಲಿ ನಿವೇಶನಗಳನ್ನು ಮುಡಾ ಹಿಂಪಡೆಯಲಿ’ ಎಂದು ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಹೊಸದುರ್ಗ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ಹೇಳಿದರು.

ಕಾಗಿನೆಲೆ ಕನಕ ಗುರುಪೀಠದ ಚಂದ್ರಾಲೇಔಟ್ ಶಾಖಾ ಮಠದ ವತಿಯಿಂದ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸೋಮವಾರ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ. ಯಾರ್‍ಯಾರು ಎಷ್ಟು ಆಸ್ತಿ ಮಾಡಿದ್ದಾರೆ ಎಂಬುದನ್ನು ಅವರೇ ಹೇಳಿಕೊಳ್ಳುತ್ತಿದ್ದಾರೆ. ಆದರೆ ಸಿದ್ದರಾಮಯ್ಯ ಆಸ್ತಿ ಮಾಡಿದ್ದಾರೆ ಎಂದು ಯಾರೂ ಹೇಳಿಲ್ಲ. ಅವರು ನಾಡಿನ ಮತ್ತು ಸಮಾಜದ ಆಸ್ತಿ. ಒಂದು ವಾರದಿಂದ ಅವರು ಸಂಕಷ್ಟದಲ್ಲಿದ್ದಾರೆ. ಅವರಿಗೆ ಕಪ್ಪುಚುಕ್ಕೆ ಇಡಲು ಪ್ರಯತ್ನಿಸಿದರೆ, ಅದನ್ನು ದೃಷ್ಟಿಬೊಟ್ಟಾಗಿ ಪರಿವರ್ತಿಸಿ ಕಾಪಾಡಿಕೊಳ್ಳುತ್ತೇವೆ’ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್‌.ಎಂ.ರೇವಣ್ಣ, ‘ನಿವೇಶನಗಳನ್ನು ಮುಡಾಗೆ ವಾಪಸ್ ಕೊಡುವ ಅಗತ್ಯವಿಲ್ಲ. ಕಾನೂನು ಪ್ರಕಾರವೇ ಹಂಚಿಕೆ ಮಾಡಲಾಗಿದೆ’ ಎಂದರು.

ತಿಂಥಿಣಿ ಬ್ರಿಜ್ ಶಾಖಾ ಮಠದ ಸಿದ್ದರಾಮಾನಂದಪುರಿ ಸ್ವಾಮೀಜಿ, ಕೆ.ಆರ್. ನಗರ ಶಾಖಾ ಮಠದ ಶಿವಾನಂದಪುರಿ ಸ್ವಾಮೀಜಿ, ಶಾಸಕ ಜಿ.ಎಚ್‌.ಶ್ರೀನಿವಾಸ್, ಮಾಜಿ ಮೇಯರ್ ಹುಚ್ಚಪ್ಪ, ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿ ಎಂ.ರಾಮಯ್ಯ, ರಾಜ್ಯ ಪರಿಸರ ಮೌಲ್ಯಮಾಪನ ಸಮಿತಿ ಅಧ್ಯಕ್ಷ ಎ.ಎನ್‌. ಮಹೇಶ್, ಲಗ್ಗೆರೆ ನಾರಾಯಣಸ್ವಾಮಿ, ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಎಂ.ಈರಣ್ಣ ಉಪಸ್ಥಿತರಿದ್ದರು.

ವೇದಿಕೆಯಲ್ಲಿ ಕಣ್ಣೀರಿಟ್ಟ ಸ್ವಾಮೀಜಿ

‘ಮಠ ಆರ್ಥಿಕ ಸಂಕಷ್ಟದಲ್ಲಿದ್ದು, ನೆರವು ಕೋರಿ ಬರುವ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಾಯ ನೀಡಲು ಆಗುತ್ತಿಲ್ಲ’ ಎಂದು ಸಮಾರಂಭದಲ್ಲಿ ಮಾತನಾಡುವ ವೇಳೆ ಈಶ್ವರನಾಂದಪುರಿ ಸ್ವಾಮೀಜಿ ಕಣ್ಣೀರು ಹಾಕಿದರು.

‘ಜೋಳಿಗೆ ಹಿಡಿದು ಮನೆಗೆ ಬರುತ್ತೇನೆ. ₹ 10 ಕೋಟಿ ಸಂಗ್ರಹಿಸಿ, ಅದನ್ನು ಠೇವಣಿ ಇರಿಸಿ ಬಂದ ಬಡ್ಡಿ ಹಣದಲ್ಲಿ ಮಕ್ಕಳ ಶಿಕ್ಷಣಕ್ಕೆ ಬಳಸಲಾಗುವುದು. ಸಾಧ್ಯವಾದಷ್ಟು ನೆರವು ನೀಡಿ, ಶಕ್ತಿ ತುಂಬಿ’ ಎಂದು ಮನವಿ ಮಾಡಿದರು.

ಮಂಗಳವಾರ, ಆಗಸ್ಟ್ 6, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 218 | ಪುಟ 16
● www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕ್ಷೇಮ ಕುಶಲ
ವೈರಾಣು ಜ್ವರಗಳ ಹಾವಳಿ ಹೆಚ್ಚುತ್ತಿದೆ; ಎಚ್ಚರವಾಗಿರಿ..

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,759	24,055	₹72,300 (ಬೆಂಗಳೂರು)	₹85,300 (ಬೆಂಗಳೂರು)	84.09

ಪಶ್ಚಿಮಘಟ್ಟ: ಪ್ರತ್ಯೇಕ ಅಧಿಸೂಚನೆ ಹೊರಡಿಸಲು ಕೇಂದ್ರ ಚಿಂತನೆ

ರಾಜ್ಯವಾರು ಸೂಕ್ಷ್ಮತೆ ಗುರುತು

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮಘಟ್ಟದ ಇಡೀ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ ಹೊರಡಿಸಿರುವ ಕರಡು ಅಧಿಸೂಚನೆಗೆ ಸಂಬಂಧಪಟ್ಟ ರಾಜ್ಯಗಳು ಒಪ್ಪಿಗೆ ಸೂಚಿಸದಿದ್ದಲ್ಲಿ, ರಾಜ್ಯವಾರು ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಲು ಕೇಂದ್ರ ಸರ್ಕಾರ ಮುಂದಾಗಬಹುದು ಎಂದು ಪರಿಸರ ಸಚಿವಾಲಯದ ಉನ್ನತ ಮೂಲಗಳು ಸೋಮವಾರ ತಿಳಿಸಿವೆ.

ರಾಜ್ಯವಾರು ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸುವುದರಿಂದ 2014ರಿಂದಲೂ ಬಾಕಿ ಉಳಿದಿರುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಮೂಲಗಳು ಹೇಳಿವೆ. ಕರಡು ಅಧಿಸೂಚನೆಯಲ್ಲಿ ಗುರುತಿಸಲಾದ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಲು ಪಶ್ಚಿಮಘಟ್ಟದ ವ್ಯಾಪ್ತಿಗೆ ಬರುವ ರಾಜ್ಯಗಳು ಒಪ್ಪಿಗೆ ನೀಡಿಲ್ಲ.


ಪರಿಸರ ಸೂಕ್ಷ್ಮ ಪ್ರದೇಶಗಳ ರಾಜ್ಯವಾರು ಗುರುತಿಸುವಿಕೆ ಪ್ರಕ್ರಿಯೆಯು ಹಂತ–ಹಂತವಾಗಿ ಅಥವಾ ಒಂದೇ ಅಧಿಸೂಚನೆ ಮೂಲಕ ನಡೆಯುವ ಸಾಧ್ಯತೆಯಿದೆ.

ಕೇಂದ್ರ ಪರಿಸರ ಸಚಿವಾಲಯದ ಮಾಜಿ ಮಹಾನಿರ್ದೇಶಕ (ಅರಣ್ಯ) ಸಂಜಯ್ ಕುಮಾರ್ ನೇತೃತ್ವದ ಸಮಿತಿಯು ಹಲವು ವರ್ಷಗಳಿಂದ ಕಗ್ಗಂಟಾಗಿ ಉಳಿದುಕೊಂಡಿರುವ ಸಮಸ್ಯೆ ಬಗೆಹರಿಸುವುದಕ್ಕಾಗಿ ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳ ಜತೆ ಚರ್ಚೆ ನಡೆಸುತ್ತಿದೆ.

'ಒಂದು ರಾಜ್ಯದ ವ್ಯಾಪ್ತಿಯಲ್ಲಿರುವ ಪರಿಸರ ಸೂಕ್ಷ್ಮ ಪ್ರದೇಶವನ್ನು ಗುರುತಿಸಿ ಅಧಿಸೂಚನೆ ಹೊರಡಿಸಿದರೆ ಅದು ಸಹಜವಾಗಿ ಇನ್ನೊಂದು ರಾಜ್ಯದ ಮೇಲೆ ಒತ್ತಡ ಹೇರಲಿದೆ' ಎಂದು ಮೂಲವೊಂದು ತಿಳಿಸಿದೆ.

ವಯನಾಡ್ ದುರಂತದ ಬೆನ್ನಲ್ಲೇ ಕೇಂದ್ರ ಪರಿಸರ ಸಚಿವಾಲಯವು ಆರು ರಾಜ್ಯಗಳಲ್ಲಿ ವ್ಯಾಪಿಸಿರುವ ಪಶ್ಚಿಮ ಘಟ್ಟ ಪ್ರದೇಶದ 56,826 ಚದರ ಕಿ.ಮೀ. ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ ಕರಡು ಅಧಿಸೂಚನೆ ಹೊರಡಿಸಿತ್ತು. ಅದಕ್ಕೂ ಮುನ್ನ ಐದು ಬಾರಿ ಕರಡು ಅಧಿಸೂಚನೆ ಹೊರಡಿಸಲಾಗಿತ್ತು.

ಆದರೆ, ರಾಜ್ಯ ಸರ್ಕಾರಗಳ ವಿರೋಧದಿಂದಾಗಿ ಪಶ್ಚಿಮ ಘಟ್ಟ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಲು ಇನ್ನೂ ಸಾಧ್ಯವಾಗಿಲ್ಲ. ಇದೀಗ ವಯನಾಡ್ ಭೂಕುಸಿತ ದುರಂತದ ನಂತರ ಕೆಲವು ರಾಜ್ಯಗಳಲ್ಲಿ ಪಶ್ಚಿಮ ಘಟ್ಟ ಉಳಿಸುವ ಸಂಬಂಧ ಜಾಗೃತಿ ಹೆಚ್ಚಿದೆ.



36 ಎಕರೆ ಅರಣ್ಯ ಭೂಮಿ ಒತ್ತುವರಿ ತೆರವು

ಚಿಕ್ಕಮಗಳೂರು: ಪಶ್ಚಿಮಘಟ್ಟ ಅರಣ್ಯ ಒತ್ತುವರಿ ತೆರವು ಕಾರ್ಯಪಡೆ ರಚನೆ ಮಾಡಿದ ಮೊದಲ ದಿನವೇ ಕೊಪ್ಪ ತಾಲ್ಲೂಕಿನ 36 ಎಕರೆ ಅರಣ್ಯ ಒತ್ತುವರಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ತೆರವುಗೊಳಿಸಿದ್ದಾರೆ.

ಕೊಪ್ಪ ತಾಲ್ಲೂಕಿನ ತನೂಡಿ ಸರ್ವೆ ನಂಬರ್ 9, 21, 22,23, 72 ಮತ್ತು 97 ಸೇರಿ ಒಟ್ಟು 36 ಎಕರೆ ಅರಣ್ಯ ಭೂಮಿಯನ್ನು ಅದರಲ್ಲಿದ್ದ ಕಾಫಿ ಗಿಡಗಳನ್ನು ಕತ್ತರಿಸಿಸುವಂತೆ ಸೂಚಿಸಿ ಅರಣ್ಯ ಇಲಾಖೆ ಅಧಿಕಾರಿಗಳು ತೆರವು ಮಾಡಿದರು. ಅರಣ್ಯ ರಕ್ಷಣೆಗೆ ಕಾರ್ಯಪಡೆ ಇದೆ. ಆದರೆ, ವಿಶೇಷವಾಗಿ ಪಶ್ಚಿಮಘಟ್ಟದ ಅರಣ್ಯ ಒತ್ತುವರಿ ತೆರವಿಗೆ ಸ್ಥಳೀಯವಾಗಿ ಕಾರ್ಯಪಡೆ ರಚನೆಯಾಗಬೇಕಿದೆ. ಮೊದಲ ದಿನ ತೆರವು ಕಾರ್ಯ ನಡೆಸಿರುವ ಅಧಿಕಾರಿಗಳು, ಸರ್ಕಾರದಿಂದ ಬರುವ ಮಾರ್ಗಸೂಚಿಗಾಗಿ ಕಾಯುತ್ತಿದ್ದಾರೆ.

ಇನ್ನೂ ಹಲವೆಡೆ ತೆರವು ಕಾರ್ಯಾಚರಣೆ ನಡೆಸಲು ಜಾಗ ಗುರುತಿಸುವ ಕೆಲಸ ಆರಂಭವಾಗಿದೆ. ಒಟ್ಟು 69 ಎಕರೆ ತೆರವುಗೊಳಿಸಲು ಸಿದ್ಧತೆಯನ್ನು ಅಧಿಕಾರಿಗಳು ನಡೆಸಿದ್ದರು. ಸೋಮವಾರ 36 ಎಕರೆ ತೆರವಾಗಿದ್ದು, ಬಾಕಿ ಒತ್ತುವರಿ ತೆರವು ಮಂಗಳವಾರ ಆಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ನೂರಾರು ಎಕರೆ ಅರಣ್ಯ ಭೂಮಿ ಒತ್ತುವರಿಯಾಗಿದ್ದು, ಕೊಪ್ಪ ಉಪ ಅರಣ್ಯ ವ್ಯಾಪ್ತಿಯಲ್ಲಿ ತೆರವು ಕಾರ್ಯ ಆರಂಭ ವಾಗಿದೆ. ಚಿಕ್ಕಮಗಳೂರು ಉಪ ಅರಣ್ಯ ವ್ಯಾಪ್ತಿಯಲ್ಲೂ ಕಾರ್ಯಾಚರಣೆ ಆರಂಭಿಸಲು ಅಧಿಕಾರಿಗಳು ತಯಾರಿ ನಡೆಸಿದ್ದಾರೆ.

ನಡೆದಿಲ್ಲ ತೆರವು (ಮಂಗಳೂರು/ಉಡುಪಿ ವರದಿ): ಮಂಗಳೂರು ವೃತ್ತದ ವ್ಯಾಪ್ತಿಯ ಕುಂದಾಪುರ ವಿಭಾಗ, ಕುದುರೆಮುಖ ವನ್ಯಜೀವಿ ವಿಭಾಗ ಹಾಗೂ ಮಂಗಳೂರು ವಿಭಾಗಗಳಲ್ಲಿ ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿ ಅಕ್ರಮ ಹೋಮ್‌ಸ್ಟೇ ಅಥವಾ ಅಕ್ರಮ ರೆಸಾರ್ಟ್‌ಗಳ ತೆರವು ಕಾರ್ಯ ಸೋಮವಾರ ನಡೆದಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ರೆಸಾರ್ಟ್ ಮಾಲೀಕರು ಕೋರ್ಟ್ ಮೊರೆ

ಹಾಸನ: 'ಜಿಲ್ಲೆಯ ಯಸಳೂರು ಮತ್ತು ಸಕಲೇಶಪುರ ಭಾಗದಲ್ಲಿರುವ ಕೆಲವು ಅನಧಿಕೃತ ರೆಸಾರ್ಟ್ ಮತ್ತು ಹೋಂ ಸ್ಟೇಗಳ ಮಾಲೀಕರು ಕೋರ್ಟ್ ಮೊರೆ ಹೋಗಿರುವುದರಿಂದ, ಸನ್ನಿವೇಶಕ್ಕೆ ತಕ್ಕಂತೆ ತೆರವು ಕ್ರಮ ಕೈಗೊಳ್ಳಲು ವಲಯ ಅರಣ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಡಿಸಿಎಫ್ ಸೌರಭ್‌ಕುಮಾರ್ ತಿಳಿಸಿದ್ದಾರೆ.

'ಅಧಿಕಾರಿಗಳ ಸಭೆ ನಡೆಸಿದ್ದು, ಅನಧಿಕೃತ ರೆಸಾರ್ಟ್ ಮತ್ತು ಹೋಮ್‌ಸ್ಟೇಗಳ ಪಟ್ಟಿಯನ್ನು ತಯಾರಿಸಲು ಸೂಚಿಸಲಾಗಿದೆ' ಎಂದಿದ್ದಾರೆ.

(ಕೊಡಗು ವರದಿ): 'ಕೊಡಗು ಜಿಲ್ಲೆಯಲ್ಲಿ 2015ಕ್ಕೂ ಮುಂಚೆ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವವರಿಗೆ ನೋಟಿಸ್ ನೀಡಲಾಗುತ್ತಿದೆ' ಎಂದು ಡಿಸಿಎಫ್ ಭಾಸ್ಕರ್ ತಿಳಿಸಿದ್ದಾರೆ.

'ಸುಮಾರು 5 ಸಾವಿರ ಎಕರೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು, ಕಾಫಿತೋಟಗಳನ್ನಾಗಿ ಮಾಡಲಾಗಿದ್ದು, ಅಂತಹವರಿಗೆ ನೋಟಿಸ್ ನೀಡಲಾಗುತ್ತಿದೆ. 2015ರ ನಂತರ ಒತ್ತುವರಿ ಮಾಡಿಕೊಂಡು ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಕರಣಗಳು ಅತಿ ವಿರಳವಾಗಿವೆ. ಅಂಥವುಗಳನ್ನು ತೆರವುಗೊಳಿಸಲು ಕಾರ್ಯಪಡೆ ರಚಿಸಿರುವ ಕುರಿತು ಮಾಹಿತಿ ಬಂದಿಲ್ಲ' ಎಂದಿದ್ದಾರೆ.

ಸೋಮವಾರ ಹಾಸನ, ಕೊಡಗಿನಲ್ಲಿ ತೆರವು ಕಾರ್ಯಾಚರಣೆ ನಡೆದಿಲ್ಲ.



ಶೇಖ್ ಹಸೀನಾ ಅವರ ಅಧಿಕೃತ ನಿವಾಸಕ್ಕೆ ಸೋಮವಾರ ನುಗ್ಗಿ ಲೂಟಿ ಮಾಡಿದ ಪ್ರತಿಭಟನಕಾರರು, ರಾಷ್ಟ್ರಧ್ವಜ ಪ್ರದರ್ಶಿಸಿದರು —ಎಎಫ್‌ಪಿ ಚಿತ್ರ

ಬಾಂಗ್ಲಾದಲ್ಲಿ ಬಿಕ್ಕಟ್ಟು ● ಸೇನೆಯಿಂದ ಮಧ್ಯಂತರ ಸರ್ಕಾರ

ಪ್ರಧಾನಿ ಹಸೀನಾ ರಾಜೀನಾಮೆ

ಢಾಕಾ (ಪಿಟಿಐ/ಎಎಫ್‌ಪಿ): ಬಾಂಗ್ಲಾದೇಶದಲ್ಲಿ ಭಾರಿ ಹಿಂಸಾಚಾರ ನಡೆದ ಬೆನ್ನಲ್ಲೇ ಪ್ರಧಾನಿ ಶೇಖ್ ಹಸೀನಾ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿ, ದೇಶ ತೊರೆದಿದ್ದಾರೆ. ಈ ಮೂಲಕ ಅವರ ಸತತ 15 ವರ್ಷಗಳ ಸುದೀರ್ಘ ಆಡಳಿತ ಅಂತ್ಯವಾಗಿದೆ. ಅದಾದ ಬಳಿಕ, ದೇಶದ ಸೇನೆ 'ಮಧ್ಯಂತರ ಸರ್ಕಾರ' ರಚಿಸುವುದಾಗಿ ಘೋಷಿಸಿದೆ.



ಹಸೀನಾ ಅವರು ತಮ್ಮ ತಂಗಿ ಶೇಖ್ ರೆಹಾನಾ ಅವರೊಂದಿಗೆ ಸೇನಾ ವಿಮಾನದ ಮೂಲಕ ದೇಶ ತೊರೆದ ಸುದ್ದಿ ಬಿತ್ತರವಾದ ಕೂಡಲೇ ಸಾವಿರಾರು ಸಂಖ್ಯೆಯ ಪ್ರತಿಭಟನಕಾರರು ಪ್ರಧಾನಿ ಅವರ ಅಧಿಕೃತ ನಿವಾಸಕ್ಕೆ 'ಗಾನಾಭವನ್'ಗೆ ನುಗ್ಗಿ ಲೂಟಿ ಮಾಡಿದರು. ಮನೆಯ ಆವರಣದಲ್ಲಿದ್ದ ಶೇಖ್ ಮುಜಿಬುರ್ ರೆಹಮಾನ್ ಅವರ ಪ್ರತಿಮೆಯನ್ನು ಪುಡಿಗಟ್ಟಿದರು.

ಧನ್ಮೋಂಡಿ ಮತ್ತು ಢಾಕಾದಲ್ಲಿನ ಅವಾಮಿ ಲೀಗ್ ಪಕ್ಷದ ಕಚೇರಿಗಳಿಗೂ ಬೆಂಕಿ ಹಚ್ಚುವ ಮೂಲಕ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

8ನೇ ಪುಟ ನೋಡಿ

ಸಾವಿನ ಸಂಖ್ಯೆ 156ಕ್ಕೆ ಏರಿಕೆ

ಬಾಂಗ್ಲಾದೇಶದ ಮೀಸಲು ನಿಯಮವನ್ನು ವಿರೋಧಿಸಿ ಮತ್ತು ಪ್ರಧಾನಿ ಶೇಖ್ ಹಸೀನಾ ಅವರ ರಾಜೀನಾಮೆಗೆ ಆಗ್ರಹಿಸಿ ದೇಶದಾದ್ಯಂತ ಸೋಮವಾರವು ಪ್ರತಿಭಟನೆ ಮುಂದುವರಿದಿದ್ದು, 56 ಜನರು ಮೃತಪಟ್ಟಿದ್ದಾರೆ. ಇದರಿಂದ ಎರಡು ದಿನಗಳಿಂದ ನಡೆಯುತ್ತಿರುವ ಹಿಂಸಾಚಾರದಲ್ಲಿ ಮೃತಪಟ್ಟವರ ಸಂಖ್ಯೆ 156ಕ್ಕೆ ಏರಿಕೆಯಾಗಿದೆ.

8ನೇ ಪುಟ ನೋಡಿ

- ಭಾರತ– ಬಾಂಗ್ಲಾದೇಶದ ಗಡಿಯುದ್ದಕ್ಕೂ (4,096 ಕಿ.ಮೀ) ಬಿಎಸ್‌ಎಫ್ 'ಹೈ ಅಲರ್ಟ್' ಘೋಷಿಸಿದೆ.
- 'ಕೋಲ್ಕತ್ತ–ಢಾಕಾ–ಕೋಲ್ಕತ್ತ' ಮೈತ್ರಿ ಎಕ್ಸ್‌ಪ್ರೆಸ್‌ನ ಮಂಗಳವಾರದ ಸಂಚಾರವನ್ನು ಭಾರತ ಸರ್ಕಾರ ರದ್ದುಗೊಳಿಸಿದೆ.

ಮಹಿಳೆಗೆ ಮುತ್ತಿಟ್ಟು ಪರಾರಿ: ಕ್ಯಾಬ್ ಚಾಲಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಬಳಿ ವಾಯು ವಿಹಾರ ಮಾಡುತ್ತಿದ್ದ ಮಹಿಳೆಯನ್ನು ಹಿಂಬಾಲಿಸಿ, ತಬ್ಬಿಕೊಂಡು ಮುತ್ತಿಟ್ಟು ಪರಾರಿಯಾಗಿದ್ದ ಕ್ಯಾಬ್ ಚಾಲಕನನ್ನು ಕೋಣನಕುಂಟೆ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.



ಸುರೇಶ್

ಕೋಣನಕುಂಟೆಯ ಕೃಷ್ಣಾ ನಗರದಲ್ಲಿ ಆಗಸ್ಟ್ 2ರಂದು ಬೆಳಿಗ್ಗೆ 5.15ರ ಸುಮಾರಿಗೆ ಕೊತ್ತನೂರು ದಿಣ್ಣೆಯ ನಿವಾಸಿ ಕ್ಯಾಬ್ ಚಾಲಕ ಸುರೇಶ್ (25) ಕೃತ್ಯ ಎಸಗಿದ್ದ. ಘಟನೆಯಿಂದ ಭಯಗೊಂಡಿದ್ದ ಮಹಿಳೆ ಪೊಲೀಸರಿಗೆ ದೂರು ನೀಡಿರಲಿಲ್ಲ.

ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿ, ಜಾಲತಾಣದಲ್ಲಿ ಹರಿದಾಡಿತ್ತು. ಭಾನುವಾರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರಿಂದ ಮಾಹಿತಿ ಪಡೆದು, ಆರೋಪಿಗಾಗಿ ಹುಡುಕಾಟ ನಡೆಸಿದ್ದರು. ಪೊಲೀಸರ ಸೂಚನೆಯಂತೆ ಮಹಿಳೆ ದೂರು ನೀಡಿದ್ದರು. ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಆರೋಪಿ ವಿರುದ್ಧ ಎಫ್‌ಐಆರ್ ದಾಖಲಿಸಿ, ಬಂಧಿಸಲಾಗಿದೆ.

ಮೂವರ ಅಮಾನತು: ಮಾಹಿತಿ ಇದ್ದರೂ ಮಹಿಳೆಯಿಂದ ದೂರು ಪಡೆಯದೆ ಕರ್ತವ್ಯಲೋಪ ಎಸಗಿದ ಆರೋಪದಲ್ಲಿ ಠಾಣೆಯ ಸಹಾಯಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಮತ್ತು ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಡಿಸಿಪಿ ಲೋಕೇಶ್ ಅಮಾನತುಗೊಳಿಸಿದ್ದಾರೆ.

ಸಿಸಿಬಿ ಇನ್‌ಸ್ಪೆಕ್ಟರ್ ಸಾವು

ಪ್ರಜಾವಾರ್ತೆ

ರಾಮನಗರ: ಬೆಂಗಳೂರಿನ ಸಿಸಿಬಿ ಇನ್‌ಸ್ಪೆಕ್ಟರ್ ತಿಮ್ಮೇಗೌಡ ಅವರ ಶವ ತಾಲ್ಲೂಕಿನ ಕಗ್ಗಲಿಪುರ ಬಳಿಯ ಖಾಸಗಿ ಜಮೀನಿನ ಮರವೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಸೋಮವಾರ ಪತ್ತೆಯಾಗಿದೆ.



ತಿಮ್ಮೇಗೌಡ

ಯಾದಗಿರಿಯಲ್ಲಿ ಪಿಎಸ್‌ಐ ಪರಶುರಾಮ್ ಸಾವಿನ ಬೆನ್ನಿಗೇ ಸಿಸಿಬಿ ಇನ್‌ಸ್ಪೆಕ್ಟರ್ ಆತ್ಮಹತ್ಯೆ ಚರ್ಚೆಗೆ ಗ್ರಾಸವಾಗಿದೆ. ಘಟನೆಗೆ ಸಂಬಂಧಿಸಿದಂತೆ ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಅನುಮಾನಾಸ್ಪದ ಸಾವು ಪ್ರಕರಣ ದಾಖಲಾಗಿದೆ.

'ಬೆಳಿಗ್ಗೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಸ್ಥಳೀಯರು ನೇಣು ಬಿಗಿದ ಸ್ಥಿತಿಯಲ್ಲಿ ವ್ಯಕ್ತಿಯೊಬ್ಬರ ಶವ ಕಂಡು ಪೊಲೀಸ್ ಠಾಣೆಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಸಿಬ್ಬಂದಿ ತೆರಳಿ ಪರಿಶೀಲನೆ ನಡೆಸಿದಾಗ ಅದು ಸಿಸಿಬಿ ಇನ್‌ಸ್ಪೆಕ್ಟರ್ ತಿಮ್ಮೇಗೌಡ ಎಂಬುದು ಗೊತ್ತಾಯಿತು. ಸ್ಥಳದಲ್ಲಿ ಯಾವುದೇ ಮರಣಪತ್ರ ಕಂಡುಬಂದಿಲ್ಲ. ಕುಟುಂಬದವರು ಸಾವಿನ ಕುರಿತು ಶಂಕೆ ವ್ಯಕ್ತಪಡಿಸಿದ್ದು, ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ಎಲ್ಲಾ ಆಯಾಮದಿಂದಲೂ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದ್ದಾರೆ.

ಸಚಿವರು ಬರಲೆಂದು ಪಟ್ಟು: ವಿಷಯ ತಿಳಿದು ಸ್ಥಳಕ್ಕೆ ಬಂದ ತಿಮ್ಮೇಗೌಡ ಅವರ ಸಂಬಂಧಿಯೊಬ್ಬರು, ತಿಮ್ಮೇಗೌಡರ ಸಾವಿನ ಬಗ್ಗೆ ಅನುಮಾನವಿದೆ. ಸ್ಥಳಕ್ಕೆ ಗೃಹ ಸಚಿವರು ಬರುವವರೆಗೆ ಶವವನ್ನು ಸ್ಥಳಾಂತರಿಸಬಾರದು ಎಂದು ಪಟ್ಟು ಹಿಡಿದರು. ಅವರನ್ನು ಸಮಾಧಾನ ಪಡಿಸಿದ ಪೊಲೀಸರು ಮಧ್ಯಾಹ್ನದ ಹೊತ್ತಿಗೆ ಶವವನ್ನು ಮರದಿಂದ ಇಳಿಸಿ ರಾಜರಾಜೇಶ್ವರಿ ಆಸ್ಪತ್ರೆಗೆ ಸಾಗಿಸಿದರು.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ, ಡಿವೈಎಸ್‌ಪಿ ದಿನಕರ ಶೆಟ್ಟಿ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚನ್ನಪಟ್ಟಣ ತಾಲ್ಲೂಕಿನ ಕರಲಹಳ್ಳಿಯವರಾದ ತಿಮ್ಮೇಗೌಡ ಅವರು 1998ರಲ್ಲಿ ಪೊಲೀಸ್ ಇಲಾಖೆ ಸೇರಿದರು. ಇನ್‌ಸ್ಪೆಕ್ಟರ್ ಆಗಿ ಬಡ್ತಿ ಪಡೆದಿದ್ದ ಅವರು ಹಾಸನ, ರಾಮನಗರ, ಬೆಂಗಳೂರು ಜಿಲ್ಲೆ ಸೇರಿದಂತೆ ವಿವಿಧೆಡೆ ಕಾರ್ಯನಿರ್ವಹಿಸಿದ್ದರು. ಅವರ ಕುಟುಂಬ ಮೈಸೂರಿನಲ್ಲಿ ನೆಲೆಸಿತ್ತು.

ತಿಮ್ಮೇಗೌಡ ಅವರು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ ಬಿಡದಿಯಲ್ಲಿದ್ದ ಬಾಡಿಗೆ ಮನೆಯಿಂದಲೇ ಓಡಾಡುತ್ತಿದ್ದರು. ಅವರಿಗೆ ಪತ್ನಿ, ಪುತ್ರಿ ಹಾಗೂ ಇಬ್ಬರು ಪುತ್ರರಿದ್ದಾರೆ. ಪುತ್ರಿ ಪಿಯು ಓದುತ್ತಿದ್ದಾಳೆ. ಒಬ್ಬ ಪುತ್ರ ಎಂಟನೇ ತರಗತಿಯಲ್ಲಿ, ಮತ್ತೊಬ್ಬ ಪುತ್ರ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದಾನೆ ಎಂದು ಮೂಲಗಳು ತಿಳಿಸಿವೆ.

ವಿಶೇಷ ತಂಡದಿಂದ ಪರಿಶೀಲನೆ

'ಘಟನಾ ಸ್ಥಳಕ್ಕೆ ಬೆಂಗಳೂರಿನಿಂದ ವಿಶೇಷ ಪೊಲೀಸ್ ತಂಡವು ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಜೊತೆಗೆ, ತಿಮ್ಮೇಗೌಡರ ಮನೆಗೂ ಹೋಗಿ ಕುಟುಂಬದವರನ್ನು ವಿಚಾರಣೆ ನಡೆಸಿ ಮನೆಯನ್ನೂ ಪರಿಶೀಲಿಸಿದೆ. ವಿಧಿ ವಿಜ್ಞಾನ ತಂಡದ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ವರದಿ ಬಂದ ಬಳಿಕ ಸಾವಿನ ಕುರಿತು ಖಚಿತವಾಗಿ ಗೊತ್ತಾಗಲಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದರು

ಆತ್ಮಹತ್ಯೆ ಸಾಧ್ಯತೆ: ಶವ ಪತ್ತೆಯಾದ ರೀತಿಯನ್ನು ಗಮನಿಸಿದರೆ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆ ಇದೆ. ಭಾನುವಾರ ರಾತ್ರಿಯೇ ಹಗ್ಗದೊಂದಿಗೆ ಬಂದು ಮರಕ್ಕೆ ನೇಣು ಹಾಕಿಕೊಂಡಿರುವ ಅನುಮಾನವಿದ್ದು, ಆ ದಿಕ್ಕಿನಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ..

> **ಪತ್ನಿ ನೀಡಿದ ದೂರಿನ ಮೇರೆಗೆ ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ಎಲ್ಲಾ ಆಯಾಮದಿಂದಲೂ ತನಿಖೆ ನಡೆಸಲಾಗುತ್ತಿದೆ**
> **ಕಾರ್ತಿಕ್ ರೆಡ್ಡಿ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಭೋವಿ ಅಭಿವೃದ್ಧಿ ನಿಗಮದಿಂದ ಲೆಕ್ಕ ಪರಿಶೋಧನೆ ● ಹಣ ದುರ್ಬಳಕೆ ಬಹಿರಂಗ

₹42 ಕೋಟಿ ಅಕ್ರಮ ಬಹಿರಂಗ?

● ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ 2021–22ನೇ ಸಾಲಿನ ಸಂಪೂರ್ಣ ಅನುದಾನವನ್ನು ಸಾಂಸ್ಥಿಕ ಕೋಟಾದಡಿ ಸಚಿವರು ಮತ್ತು ನಿಗಮದ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಜಿಲ್ಲೆಗಳಿಗೆ ಹಂಚಿಕೆ ಮಾಡಿದ ಕಾರಣ ಸುಮಾರು ₹42.58 ಕೋಟಿ ಅಕ್ರಮ ನಡೆದಿದೆ ಎಂದು ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ ಬಿಚ್ಚಿಟ್ಟಿದೆ.

ನಿಗಮದಲ್ಲಿ ನಡೆದ ಅವ್ಯವಹಾರದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಮತ್ತು ಸಿಐಡಿ ತನಿಖೆ ನಡೆಸುತ್ತಿರುವ ಮಧ್ಯೆಯೇ, ನಿಗಮವು ಸ್ವತಂತ್ರ ಲೆಕ್ಕ ಪರಿಶೋಧನಾ ಕಂಪನಿಯಿಂದ ಲೆಕ್ಕ ಪರಿಶೋಧನೆ ನಡೆಸಿದೆ. ಅನುದಾನ ಹರಿವಿನ ಸಂಪೂರ್ಣ ವಿವರಗಳನ್ನೂ ಈ ಲೆಕ್ಕ ಪರಿಶೋಧನಾ ವರದಿಯು ಬಹಿರಂಗ ಪಡಿಸಿದೆ. ಈ ಅವಧಿಯಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿತ್ತು. ಕೋಟ ಶ್ರೀನಿವಾಸ ಪೂಜಾರಿ ಸಮಾಜಕಲ್ಯಾಣ ಸಚಿವರಾಗಿದ್ದರು.

ನಿಗಮಕ್ಕೆ ಪ್ರತಿವರ್ಷ ನಿಗದಿಪಡಿಸುವ ಅನುದಾನದಲ್ಲಿ ಶೇ 80ರಷ್ಟನ್ನು ವಿಧಾನಸಭಾ ಕ್ಷೇತ್ರವಾರು ಶಾಸಕರ ಅಧ್ಯಕ್ಷತೆಯ ಸಮಿತಿ ಮೂಲಕ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುತ್ತದೆ. ಉಳಿದಂತೆ, ವಿವಿಧ ಯೋಜನೆಗಳಿಗೆ ಸಾಂಸ್ಥಿಕ ಕೋಟಾದಲ್ಲಿ ಸರ್ಕಾರದ ಕೋಟಾದಡಿ (ಸಮಾಜ ಕಲ್ಯಾಣ ಸಚಿವರು) ಶೇ 15, ಮಂಡಳಿಯ ಕೋಟಾದಡಿ (ನಿಗಮದ ಅಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ) ಶೇ 5ರಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಿ ಸೌಲಭ್ಯ ಒದಗಿಸಲಾಗುತ್ತದೆ. ಈ ನಿಯಮವನ್ನು ಉಲ್ಲಂಘಿಸಿ 2021–22ನೇ ಸಾಲಿನಲ್ಲಿ ಜಿಲ್ಲೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ ಎಂದು ವರದಿಯಲ್ಲಿದೆ. ಈ ಹಣ ಹಂಚಿಕೆಯ ಕುರಿತು ಸಕ್ಷಮ ಪ್ರಾಧಿಕಾರವು ಸಮಗ್ರವಾದ ತನಿಖೆ ನಡೆಸಿದರೆ, ಜಿಲ್ಲಾಮಟ್ಟದಲ್ಲಿ ನಡೆದಿರಬಹುದಾದ ಅವ್ಯವಹಾರವನ್ನು ಪತ್ತೆ ಮಾಡಲು ಸಾಧ್ಯ ಎಂದೂ ವರದಿಯಲ್ಲಿದೆ.

ಈ ಅವ್ಯವಹಾರಗಳಲ್ಲಿ ಹಿಂದಿನ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಆರ್. ಲೀಲಾವತಿ, ಪ್ರಧಾನ ವ್ಯವಸ್ಥಾಪಕರಾಗಿದ್ದ ಬಿ.ಕೆ. ನಾಗರಾಜಪ್ಪ, ಹಿಂದಿನ ಕಚೇರಿ ಅಧೀಕ್ಷಕ ಪಿ.ಡಿ. ಸುಬ್ಬಪ್ಪ, ವಿಜಯಪುರ ಜಿಲ್ಲಾ ಅಭಿವೃದ್ಧಿ ಅಧಿಕಾರಿಯಾಗಿದ್ದ ಶಂಕರ ಜು. ದೇವರಮನಿ, ಕಲಬುರಗಿ ಜಿಲ್ಲಾ ಅಭಿವೃದ್ಧಿ ಅಧಿಕಾರಿಯಾಗಿದ್ದ ಕೆ.ಎಸ್. ನಾಗಮೂರ್ತಿ ಆರೋಪಿಗಳು.

ಆರೋಪಿಗಳ ಪೈಕಿ, ಲೀಲಾವತಿ ಅವರನ್ನು ಸಚಿವಾಲಯದ ವಿಶೇಷ ಕಾರ್ಯದರ್ಶಿ ಹುದ್ದೆಗೆ (ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ) ವಾಪಸ್ ಕಳುಹಿಸಲಾಗಿತ್ತು. ಅವರು ಮತ್ತು ಪಿ.ಡಿ. ಸುಬ್ಬಪ್ಪ ವಯೋನಿವೃತ್ತಿಯಾಗಿದ್ದಾರೆ.

9ನೇ ಪುಟ ನೋಡಿ

ವರದಿಯಲ್ಲಿರುವ ಅಂಶಗಳು

- ವೈದ್ಯಕೀಯ ಕಿಟ್‌ಗಳ ಪೂರೈಕೆಗೆ ಶ್ರೀ ಸಾಯಿ ಥೆರಪ್ಯೂಟಿಕ್ಸ್ (ಇಂಡಿಯಾ) ಪ್ರೈವೆಟ್ ಲಿ. ಸಂಸ್ಥೆಗೆ ಪಾವತಿಸಿದ ₹1.78 ಕೋಟಿ ಮುಂಗಡ ಹಣದ ದಾಖಲೆಗಳೇ ಇಲ್ಲ
- ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ನೀಡಿದ್ದ ₹10.95 ಕೋಟಿಯ ವೆಚ್ಚದ ವಿವರಗಳಿಲ್ಲ
- ಬೆಂಗಳೂರು ನಗರ ಜಿಲ್ಲೆಗೆ ನೀಡಿದ್ದ ₹27.13 ಕೋಟಿ ಖರ್ಚು ವೆಚ್ಚದ ವಿವರಗಳಿಲ್ಲ
- ವಿಜಯಪುರ ಜಿಲ್ಲೆಗೆ ನೀಡಿದ್ದ ₹2.70 ಕೋಟಿ ವೆಚ್ಚದ ವಿವರವೂ ಲಭ್ಯವಿಲ್ಲ

ಭೋವಿ ನಿಗಮ– ಹಣಕಾಸು ವಿವರ (₹ ಕೋಟಿಗಳಲ್ಲಿ)

ಆರ್ಥಿಕ ವರ್ಷ	ಲಭ್ಯ ಮೊತ್ತ (ಹಿಂದಿನ ಬಾಕಿ ಸೇರಿ)	ವೆಚ್ಚ
2016-17	60	12.50
2017-18	72.50	23.80
2018-19	155.12	22.09
2019-20	190.70	44.91
2020-21	196.53	82.48
2021-22	159.90	76.26
2022-23	83.64	22.17

'ನಯಾ ಪೈಸೆ ವಶಪಡಿಸಿಕೊಂಡಿಲ್ಲ'



ಭೋವಿ ಅಭಿವೃದ್ಧಿ ನಿಗಮದಲ್ಲಿ 2021–22ನೇ ಸಾಲಿನಲ್ಲಿ ಒಟ್ಟು ₹88.74 ಕೋಟಿ ಮೊತ್ತದ ಅವ್ಯವಹಾರ ಆಗಿದೆ ಎಂದು ಆಂತರಿಕ ಲೆಕ್ಕ ಪರಿಶೋಧಕರು ಪತ್ತೆ ಹಚ್ಚಿರುವ ಮಾಹಿತಿಯನ್ನು ಸಮಾಜ ಕಲ್ಯಾಣ ಇಲಾಖೆ ನೀಡಿದೆ. ಆದರೆ, ದುರ್ಬಳಕೆ ಆಗಿರುವ ಮೊತ್ತದಲ್ಲಿ ನಯಾ ಪೈಸೆ ಈವರೆಗೆ ವಶಪಡಿಸಿಕೊಂಡಿಲ್ಲ ಎಂದೂ ಇಲಾಖೆ ಹೇಳಿದೆ. ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಾದ ನೂರಾರು ಕೋಟಿ ಹಣ ಈ ರೀತಿ ಭ್ರಷ್ಟರ ಪಾಲಾಗುವುದನ್ನು ತಡೆಯಲು ರಾಜ್ಯ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಎಚ್.ಪಿ. ಸುಧಾಮ್ ದಾಸ್, ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ

ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ರೂಪಾಯಿ ಮೌಲ್ಯ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು 37 ಪೈಸೆ ಕುಸಿತ ದಾಖಲಿಸಿರುವ ರೂಪಾಯಿ ಮೌಲ್ಯವು, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಸೋಮವಾರದ ವಹಿವಾಟಿನ ಅಂತ್ಯಕ್ಕೆ ₹84.09ಕ್ಕೆ ತಲುಪಿದೆ. ಅಮೆರಿಕದ ಡಾಲರ್ ಎದುರು ರೂಪಾಯಿಯ ಸಾರ್ವಕಾಲಿಕ ಕನಿಷ್ಠ ಮೌಲ್ಯ ಇದಾಗಿದೆ.



ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಬಿಕ್ಕಟ್ಟು ಮತ್ತು ಅಮೆರಿಕದಲ್ಲಿನ ಆರ್ಥಿಕ ಹಿಂಜರಿತದ ಆತಂಕದ ನಡುವೆ ಜಾಗತಿಕ ಮಾರುಕಟ್ಟೆಗಳಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಈ ಬೆಳವಣಿಗೆ ದಾಖಲಾಗಿದೆ.

ಭಾರತೀಯ ಷೇರು ಮಾರುಕಟ್ಟೆಗಳಲ್ಲಿನ ತೀವ್ರ ಕುಸಿತ ಮತ್ತು ಭಾರತೀಯ ಬಂಡವಾಳ ಮಾರುಕಟ್ಟೆಗಳಿಂದ ವಿದೇಶಿ ನಿಧಿಯ ಗಮನಾರ್ಹ ಹೊರಹರಿವಿನ ಜತೆಗೆ ದೇಶೀಯ ಘಟಕದಲ್ಲಿನ ಕುಸಿತವು ರೂಪಾಯಿ ಮೌಲ್ಯ ಕಳೆದುಕೊಳ್ಳಲು ಕಾರಣವಾಯಿತು ಎಂದು ವಿದೇಶಿ ವಿನಿಮಯ ವ್ಯಾಪಾರಿಗಳು ಹೇಳಿದ್ದಾರೆ.

ಒಳಪುಟಗಳಲ್ಲಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಭೂಕುಸಿತಕ್ಕೆ ಒಳಗಾದ ಚಹಾತೋಟದ ನಡುವೆ ದೇಹ, ಅಂಗಾಂಗಗಳ ಅಂತ್ಯಸಂಸ್ಕಾರ

ನಲುಗಿದ ನೆಲದಲ್ಲಿ 'ಅಪರಿಚಿತರ' ಚಿರನಿದ್ರೆ

● ವಿಕ್ರಂ ಕಾಂತಿಕೆರೆ

ಕಲ್ಪೆಟ್ಟ (ವಯನಾಡ್ ಜಿಲ್ಲೆ): ಎಂದೋ ಒಮ್ಮೆ ಇವರು ಪರಸ್ಪರ ಕಂಡಿರಬಹುದು, ನಸುನಗೆ ವಿನಿಮಯ ಮಾಡಿಕೊಂಡಿರಬಹುದು, ಮಾತನಾಡಿರಲೂಬಹುದು, ಸುಂದರ ಸಂಜೆಗಳಲ್ಲಿ ಗೂಡಂಗಡಿಯಲ್ಲಿ ಕುಳಿತು ಚಹಾ ಸೇವಿಸಿರಬಹುದು. ಇವರು ನೆರೆಹೊರೆಯ ನಿವಾಸಿಗಳೂ ಆಗಿರಬಹುದು. ಆದರೆ ಇಲ್ಲಿ ಎಲ್ಲರೂ ಅಪರಿಚಿತರು. ಇವರೆಲ್ಲರೂ ಜೊತೆಯಾಗಿ ಚಿರನಿದ್ರೆಗೈಯ್ಯುತ್ತಿರುವ ಚಹಾ ತೋಟದ ಸುಂದರ ತಾಣವಿನ್ನು ದುರಂತದ ಸ್ಮಾರಕ.

ಮೇಪ್ಪಾಡಿ ಗ್ರಾಮ ಪಂಚಾಯಿತಿಯ ಚೂರಲ್‌ಮಲ, ಮುಂಡಕ್ಕೈ ಮತ್ತು ಪುಂಜಿರಿಮಟ್ಟಂ ಪ್ರದೇಶಗಳಲ್ಲಿ ಕಳೆದ ಮಂಗಳವಾರ ಮಧ್ಯರಾತ್ರಿ ಪ್ರಕೃತಿ ತಾಂಡವವಾಡಿ ಕೆಸರು ನೀರಿನಲ್ಲಿ ಎಳೆದುಕೊಂಡು ಹೋಗಿ ಒಂದಿನಿತೂ ಗುರುತು ಸಿಗದ ಮೃತದೇಹಗಳು ಕೊನೆಗೂ ಪುತ್ತುಮಲದ ಮಣ್ಣಿನಲ್ಲಿ ಲೀನವಾಗಿವೆ.

ಹ್ಯಾರಿಸನ್ಸ್ ಮಲಯಾಳಂ ಚಹಾ ತೋಟದ ಮಾಲೀಕರು ಉಚಿತವಾಗಿ ನೀಡಿದ 64 ಸೆಂಟ್ ಜಾಗ ಈಗ ಸರ್ವಧರ್ಮದ ಸ್ಮಶಾನವಾಗಿದ್ದು, ಗುರುತು ಪತ್ತೆಯಾಗದ 35 ಮೃತದೇಹಗಳನ್ನು ಭಾನುವಾರ ಮತ್ತು ಸೋಮವಾರ ಹೂಳಲಾಗಿದೆ. ದೇಹದ ಭಾಗಗಳನ್ನು ಕೂಡ ಇಲ್ಲಿ ಮಣ್ಣು ಮಾಡಲಾಗಿದೆ. ನಾಪತ್ತೆಯಾದವರ ಸಂಬಂಧಿಕರು ಈ 'ಅಪರಿಚಿತರಲ್ಲಿ' ತಮ್ಮವರು ಇರುವರು ಎಂಬ ಭಾವದಿಂದ ಇನ್ನು ಇಲ್ಲಿ ಅಂತಿಮ ವಿದಾಯ ಹೇಳಬಹುದಾಗಿದೆ.

5ನೇ ಪುಟ ನೋಡಿ



ಭೂಕುಸಿತದಿಂದ ಸಾವಿಗೀಡಾದವರ ಪೈಕಿ ಗುರುತು ಪತ್ತೆಯಾಗದ ಮೃತದೇಹಗಳ ಸಾಮೂಹಿಕ ಅಂತ್ಯಕ್ರಿಯೆ ನಡೆಯಿತು —ಪ್ರಜಾವಾಣಿ ಚಿತ್ರ–ಫಕ್ರುದ್ದೀನ್ ಎಚ್.

ದುರಂತದ ನೆಲದಿಂದ

ಕಳ್ಳರ ಕಾಟ: ಸೇವೆಗೆ ಬಂದವರ ನೋಂದಣಿ


ದುರಂತಭೂಮಿಯಲ್ಲಿ ಕಳ್ಳರ ಕಾಟ ಹೆಚ್ಚಿದ್ದು ಸ್ವಯಂಸೇವಕರ ಹೆಸರಿನಲ್ಲಿ ಹಣ ಸಂಗ್ರಹ ಮಾಡುತ್ತಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ 'ಸೇವೆ'ಗೆ ಜಿಲ್ಲಾಡಳಿತ ನಿಯಂತ್ರಣ ಹೇರಿದೆ.

ಆರಂಭದ ಕೆಲವು ದಿನ ಮೃತದೇಹಗಳ ಹುಡುಕಾಟದಲ್ಲಿ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಮತ್ತು ವೈಯಕ್ತಿಕವಾಗಿ ಕೆಲವರು ತೊಡಗಿಸಿಕೊಂಡಿದ್ದರು. ಈ ನಡುವೆ ಕೆಲವರು ಮೃತದೇಹಗಳಿಂದ ಆಭರಣ ಮತ್ತು ಅಳಿದುಳಿದ ಮನೆಗಳಿಂದ ಹಣ, ವಸ್ತುಗಳನ್ನು ತೆಗೆದುಕೊಂಡು ಹೋಗುವುದು ಗಮನಕ್ಕೆ ಬಂದಿತ್ತು. ಕೆಲವರನ್ನು ಊರವರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಪ್ರತಿ ಊರಿನಲ್ಲಿ ಅಪರಿಚಿತರನ್ನು ಕಂಡರೆ ಸ್ಥಳೀಯರೇ ತಡೆದುನಿಲ್ಲಿಸಿ ಮಾಹಿತಿ ಕೇಳಿ ಕಳುಹಿಸುತ್ತಿದ್ದರು. ಈ ಎಲ್ಲ ಘಟನೆಗಳ ಹಿನ್ನೆಲೆಯಲ್ಲಿ ಹೆಸರು ನೊಂದಾಯಿಸಿಕೊಂಡೇ ಸೇವಾಕಾರ್ಯಕ್ಕೆ ಇಳಿಯಲು ವ್ಯವಸ್ಥೆ ಮಾಡಲಾಗಿದೆ.

'ಡಿಸಾಸ್ಟರ್ ಟೂರಿಸಂ'ಗೆ ನಿಯಂತ್ರಣ

ದುರಂತ ನಡೆದ ಚೂರಲ್‌ಮಲ ಮತ್ತು ಮುಂಡಕ್ಕೈ ಪ್ರದೇಶಗಳನ್ನು ನೋಡಲು ಶನಿವಾರದಿಂದ ಕೆಲವು ಜನರು ಹೋಗಿದ್ದರು. ನೂರಾರು ಜನರು ಪ್ರಾಣ ಕಳೆದುಕೊಂಡ ಮತ್ತು ಬಂಡೆಕಲ್ಲುಗಳು ಉರುಳಿ ಬಿದ್ದ ಜಾಗಗಳಲ್ಲಿ ನಿಂತು ಸೆಲ್ಫಿ ತೆಗೆದು ಸಾಮಾಜಿಕ ತಾಣಗಳಿಗೆ ಅಪ್‌ಲೋಡ್ ಮಾಡತೊಡಗಿದ್ದರು. ಭಾನುವಾರ ಈ ಸ್ಥಳಗಳು 'ಡಿಸಾಸ್ಟರ್ ಟೂರಿಸಂ' ತಾಣದಂತಾಗಿತ್ತು. ಇದನ್ನು ಮನಗಂಡ ಜಿಲ್ಲಾಡಳಿತ ಅನವಶ್ಯಕವಾಗಿ ಜನರು ಅತ್ತ ಹೋಗದಂತೆ ನಿರ್ಬಂಧ ಹೇರಿದೆ.

ಎರಡನೇ ವಿಮಾನ ನಿಲ್ದಾಣಕ್ಕೆ 7 ಸ್ಥಳ ಗುರುತು



ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯ ಸಮೀಪ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಏಳು ಸ್ಥಳಗಳನ್ನು ಗುರುತಿಸಲಾಗಿದ್ದು, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಶೀಘ್ರ ಪ್ರಸ್ತಾವ ಸಲ್ಲಿಸಲು ನಿರ್ಧರಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಹೇಳಿದರು.

ವಿಧಾನಸೌಧದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಐಡೆಕ್ ಮತ್ತು ಬೋಸ್ಟನ್ ಕನ್ಸಲ್ಟೆನ್ಸಿ ಸಂಸ್ಥೆಗಳು ಸಿದ್ಧಪಡಿಸಿದ್ದ ಪ್ರಾತ್ಯಕ್ಷಿಕೆಯನ್ನು ವೀಕ್ಷಿಸಿದ ನಂತರ ಮಾತನಾಡಿದ ಅವರು, ಎರಡನೇ ನಿಲ್ದಾಣಕ್ಕೆ ಒಂಬತ್ತು ಸ್ಥಳಗಳನ್ನು ಗುರುತಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಎರಡು ಸ್ಥಳ ಕೈಬಿಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸಿದ ನಂತರ ಪ್ರಾಧಿಕಾರಕ್ಕೆ ಪ್ರಸ್ತಾವ ಕಳುಹಿಸಲಾಗುವುದು ಎಂದರು.

ನಿಲ್ದಾಣಕ್ಕೆ ಸ್ಥಳ ಆಯ್ಕೆಯಲ್ಲಿ ರಾಜಕೀಯಕ್ಕೆ ಅವಕಾಶ ನೀಡದೆ ಪ್ರಾಧಿಕಾರದ 15 ಮಾನದಂಡಗಳಿಗೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.


ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಹಿರಿಯ ಬಲಿಷ್ಠ ನಾಯಕರು ಹಾಗೂ
ಕರ್ನಾಟಕ ಸರ್ಕಾರದ ಮಾನ್ಯ ಗೃಹ ಮಂತ್ರಿಗಳಾದ ಸನ್ಮಾನ್ಯ
ಶ್ರೀ. ಡಾ.ಜಿ.ಪರಮೇಶ್ವರ್ ಜೀ ರವರಿಗೆ
ಹುಟ್ಟುಹಬ್ಬದ ಹಾರ್ದಿಕ
ಶುಭಾಶಯಗಳು
ಶ್ರೀ. ಎ.ಸಿ ಶ್ರೀನಿವಾಸ್ ರವರು
ಶಾಸಕರು
ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ ಹಾಗೂ
ಬಿ.ಡಿ.ಎ. ಸದಸ್ಯರು

ಪಿಜಿಗಳಿಗೆ ಸದ್ಯವೇ ಮಾರ್ಗಸೂಚಿ ಪ್ರಕಟ: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್

ಸ್ವಚ್ಛತೆ ಇಲ್ಲದ ಖಾಲಿ ನಿವೇಶನಗಳಿಗೆ ದಂಡ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಸ್ವಚ್ಛತೆ ಇಲ್ಲದ ಖಾಲಿ ನಿವೇಶನಗಳ ಮಾಲೀಕರಿಗೆ ನೋಟಿಸ್ ನೀಡಿ, ದಂಡ ವಿಧಿಸಿ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಲಯ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ಅವರು, 'ಆಯಾ ವಲಯ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳನ್ನು ಪಟ್ಟಿ ಮಾಡಬೇಕು. ಸ್ವಚ್ಛತೆ ಕಾಪಾಡದ ಖಾಲಿ ನಿವೇಶನಗಳ ಮಾಲೀಕರಿಗೆ ನೋಟಿಸ್ ಜಾರಿಗೊಳಿಸಬೇಕು. ಪಾಲಿಕೆಯಿಂದ ಸ್ವಚ್ಛತೆ ಮಾಡಿ, ಮಾಲೀಕರಿಗೆ ದಂಡ ವಿಧಿಸಿ, ಇದು ಮರುಕಳಿಸದಂತೆ ಎಚ್ಚರಿಕೆ ನೀಡಬೇಕು' ಎಂದು ಹೇಳಿದರು.

ಖಾಲಿ ನಿವೇಶನಗಳು ಆಸ್ತಿ ತೆರಿಗೆ ವ್ಯಾಪ್ತಿಯಲ್ಲಿವೆಯೆ ಎಂಬುದನ್ನೂ ಪರಿಶೀಲಿಸಬೇಕು. ಇಲ್ಲದಿದ್ದರೆ, ಕೂಡಲೇ ಆಸ್ತಿ ತೆರಿಗೆ ವ್ಯಾಪ್ತಿಗೆ ತರಲು ವಲಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಅನಧಿಕೃತ ಜಾಹೀರಾತುಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ವಲಯ ವ್ಯಾಪ್ತಿಯ ಮುದ್ರಣಾಲಯಗಳಿಗೆ ನೋಟಿಸ್ ನೀಡಬೇಕು. ಅನಧಿಕೃತ ಜಾಹೀರಾತು ಮುದ್ರಿಸದಂತೆ ಹಾಗೂ ಪರಿಸರ ಸಂರಕ್ಷಣಾ ಕಾಯ್ದೆ ಉಲ್ಲಂಘನೆ ಮಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಉಲ್ಲಂಘಿಸಿದವರ ಮೇಲೆ ಕಾನೂನು ಕ್ರಮ ಜರುಗಿಸಬೇಕು. ಎಲ್ಲಿಯೂ ಅನಧಿಕೃತ ಜಾಹೀರಾತುಗಳು ಅಳವಡಿಸದಂತೆ ಕಟ್ಟೆಚ್ಚರ ವಹಿಸಬೇಕು ಎಂದು ಹೇಳಿದರು.

ವೈಟ್ ಟಾಪಿಂಗ್ ಕಾಮಗಾರಿಗಳನ್ನು ತ್ವರಿತವಾಗಿ ಪ್ರಾರಂಭಿಸಬೇಕು. ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳ ಸಹಯೋಗದೊಂದಿಗೆ ಕಾಮಗಾರಿ ಪ್ರಾರಂಭಿಸಿ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕೆಂದು ಸೂಚಿಸಿದರು.

ವಿದ್ಯುತ್ ವಿಭಾಗದ ಸಿಬ್ಬಂದಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ಹಾಗೂ ಸಂಜೆ 5ರಿಂದ ರಾತ್ರಿ 8.30ರವರೆಗೆ ಕಾರ್ಯನಿರ್ವಹಿಸಬೇಕಿದೆ. ಬೀದಿ ದೀಪಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಾಗರಿಕರ ದೂರುಗಳಿಗೆ ಕೂಡಲೇ ಸ್ಪಂದಿಸಬೇಕು. ಎಲ್ಲೆಲ್ಲಿ ಬೀದಿದೀಪಗಳಿಲ್ಲವೋ ಅಲ್ಲೆಲ್ಲ ದೀಪ ಅಳವಡಿಸಲು ಕ್ರಮ ಕೈಗೊಳ್ಳಲು ಹೇಳಿದರು.

ನಗರದಲ್ಲಿರುವ ಪಿಜಿಗಳಿಗೆ (ಪೇಯಿಂಗ್ ಗೆಸ್ಟ್) ಕೆಲವು ಮಾರ್ಗಸೂಚಿ ಹೊರಡಿಸಲಾಗುತ್ತಿದೆ. ವಸತಿ ಪ್ರದೇಶದಲ್ಲಿ ಪಿಜಿಗಳಿಗೆ ಅವಕಾಶ ನೀಡಲಾಗಿದ್ದು, ಭದ್ರತೆ, ಸಿಸಿ ಟಿವಿ ಕ್ಯಾಮೆರಾ ಸೇರಿದಂತೆ ರಾಷ್ಟ್ರೀಯ ಭದ್ರತಾ ನೀತಿಯ ಅನುಸಾರ ಸೌಲಭ್ಯ ಒದಗಿಸಬೇಕು ಎಂದು ಸೂಚಿಸಲಾಗಿದೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಶಿವಾನಂದ್ ಕಲ್ಕೆರೆ, ಅವಿನಾಶ್ ಮೆನನ್ ರಾಜೇಂದ್ರನ್, ವಲಯ ಆಯುಕ್ತರಾದ ರಮೇಶ್, ಶಿವಾನಂದ್, ಕರೀಗೌಡ, ರಮ್ಯಾ, ವಿನೋತ್ ಪ್ರಿಯಾ, ಪ್ರೀತಿ ಗೆಹ್ಲೋಟ್ ಉಪಸ್ಥಿತರಿದ್ದರು.

'1 ಸಾವಿರ ರಸ್ತೆ ಗುಂಡಿ ಬಾಕಿ'



ತುಷಾರ್ ಗಿರಿನಾಥ್

'ನಗರದಲ್ಲಿ ಇನ್ನೂ ಒಂದು ಸಾವಿರಕ್ಕೂ ಹೆಚ್ಚು ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸ ಬಾಕಿ ಉಳಿದಿದೆ. ಒಂದು ವಾರದಲ್ಲಿ ಆ ಕಾಮಗಾರಿ ಮುಗಿಸಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಸ್ತೆ ಗುಂಡಿ ಗಮನ' ಆ್ಯಪ್‌ನಲ್ಲಿ ನಾಗರಿಕರು ಈವರೆಗೆ 807 ದೂರು ಸಲ್ಲಿಸಿದ್ದಾರೆ. ನಮ್ಮ ಅಧಿಕಾರಿಗಳು ಗುರುತಿಸಿರುವ 328 ರಸ್ತೆ ಗುಂಡಿ ಮುಚ್ಚಬೇಕಿದೆ. ಇದಲ್ಲದೆ ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲೂ ಸುಮಾರು 160 ಗುಂಡಿಗಳಿವೆ' ಎಂದು ಮಾಹಿತಿ ನೀಡಿದರು.

ನಾಗರಿಕರು ದೂರು ಸಲ್ಲಿಸಿದ 72 ಗಂಟೆಯೊಳಗೆ ರಸ್ತೆ ಗುಂಡಿಗಳನ್ನು ಮುಚ್ಚಬೇಕು ಎಂದು ಸೂಚಿಸಲಾಗಿದೆ. ಆದರೆ, ಹಿಂಬಾಕಿಯಲ್ಲಿ ಸಾಕಷ್ಟು ಗುಂಡಿಗಳ ದುರಸ್ತಿ ಬಾಕಿ ಇರುವುದರಿಂದ ವಾರದಲ್ಲಿ ಎಲ್ಲ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಬೊಮ್ಮನಹಳ್ಳಿ ವಲಯದಲ್ಲಿ ಅತಿಹೆಚ್ಚು ಅಂದರೆ 144 ರಸ್ತೆ ಗುಂಡಿಗಳಿವೆ. ಪೂರ್ವದಲ್ಲಿ 120 ಹಾಗೂ ದಕ್ಷಿಣ ವಲಯದಲ್ಲಿ 60 ರಸ್ತೆ ಗುಂಡಿಗಳಿವೆ. ಎಲ್ಲ ವಲಯಗಳಲ್ಲಿ ಕಳೆದ ಒಂದು ವಾರದಲ್ಲಿ ಒಟ್ಟಾರೆ 160 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ತಿಳಿಸಿದರು.

'ಡೆಂಗಿ ಪ್ರಕರಣ ಇಳಿಕೆ'

ಬಿಬಿಎಂಪಿ ವ್ಯಾಪ್ತಿಯಲ್ಲಿ ಡೆಂಗಿ ಪ್ರಕರಣಗಳು ಇಳಿಕೆಯಾಗುತ್ತಿದ್ದು, ಪ್ರತಿನಿತ್ಯ ಸುಮಾರು 160 ಪ್ರಕರಣಗಳು ದಾಖಲಾಗುತ್ತಿವೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಡೆಂಗಿ ಪ್ರಕರಣಗಳ ಸಂಖ್ಯೆ ಕಳೆದ ವಾರ 200ಕ್ಕೂ ಹೆಚ್ಚಿದ್ದವು. ಈಗ ಇಳಿಕೆಗತಿಯಲ್ಲಿವೆ. ರಾಜರಾಜೇಶ್ವರಿ ನಗರ ಹಾಗೂ ದಕ್ಷಿಣ ವಲಯ ಹೊರತುಪಡಿಸಿ-ದಂತೆ ಇತರೆ ಆರು ವಲಯಗಳಲ್ಲಿ ಡೆಂಗಿ ಪರೀಕ್ಷಾ ಪ್ರಮಾಣವನ್ನು ಹೆಚ್ಚಿಸಲಾಗಿದೆ. ದೃಢಪಟ್ಟ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿವೆ. ಆದರೂ, ಮುನ್ನೆಚ್ಚರಿಕೆ ಕ್ರಮವನ್ನು ಮುಂದುವರಿಸಿದ್ದೇವೆ ಎಂದರು.

600 ಫಾಗಿಂಗ್ ಯಂತ್ರ, 618 ಸ್ಪ್ರೇಯರ್‌ಗಳನ್ನು ಬಳಸಿ, ಲಾರ್ವಾ ನಾಶಪಡಿಸಲಾಗುತ್ತಿದೆ. ನರ್ಸಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಯುತ್ತಿರುವುದರಿಂದ 25 ಲಕ್ಷ ಮನೆಗಳಿಗೆ ತೆರಳಿ ಜಾಗೃತಿ ಮೂಡಿಸುವ ಕೆಲಸಕ್ಕೆ ಹಿನ್ನಡೆಯಾಗಿದೆ ಎಂದು ಹೇಳಿದರು.

ಕೆಐಎಡಿಬಿ: ಒಂದೇ ಹುದ್ದೆಗೆ ಇಬ್ಬರ ಕಿತ್ತಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವಿಶೇಷ ಭೂಸ್ವಾಧೀನಾಧಿಕಾರಿ–2 ಹುದ್ದೆಗೆ ಇಬ್ಬರು ಕೆಎಎಸ್ ಅಧಿಕಾರಿಗಳು ಕಿತ್ತಾಟ ನಡೆಸುತ್ತಿದ್ದಾರೆ. ಒಂದೇ ಕಚೇರಿಯಲ್ಲಿ ಇಬ್ಬರೂ ಕುಳಿತು ಕೆಲಸ ಮಾಡುತ್ತಿದ್ದಾರೆ.

ವಿಶೇಷ ಭೂಸ್ವಾಧೀನಾಧಿಕಾರಿ–2 ಹುದ್ದೆಯಲ್ಲಿದ್ದ ಎಸ್.ಎಂ. ಶಿವಕುಮಾರ್ ಅವರನ್ನು ಜುಲೈ 4ರಂದು ಬಿಬಿಎಂಪಿ ಉಪ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿತ್ತು. ಶಿವೇಗೌಡ ಅವರನ್ನು ವಿಶೇಷ ಭೂ ಸ್ವಾ ಧೀ ನಾ ಧಿ ಕಾ ರಿ – 2 ಹುದ್ದೆಗೆ ಅದೇ ದಿನ ವರ್ಗಾವಣೆ ಮಾಡಲಾಗಿತ್ತು. ಜುಲೈ 5ರಂದು ಶಿವೇಗೌಡ ಕೆಐಎಡಿಬಿ ಕಚೇರಿಗೆ ಹಾಜರಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರು.



ವರ್ಗಾವಣೆ ಪ್ರಶ್ನಿಸಿ ಶಿವಕುಮಾರ್ ಅವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಗೆ (ಕೆಎಟಿ) ಅರ್ಜಿ ಸಲ್ಲಿಸಿದ್ದರು. ಆರಂಭದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿದ್ದ ನ್ಯಾಯಮಂಡಳಿ, ಅರ್ಜಿ ತಿರಸ್ಕರಿಸಿ ಆದೇಶ ಹೊರಡಿಸಿತ್ತು. ಕೆಎಟಿ ಆದೇಶ ಪ್ರಶ್ನಿಸಿ ಶಿವಕುಮಾರ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಯಥಾಸ್ಥಿತಿ ಕಾಯ್ದುಕೊಳ್ಳಲು ನ್ಯಾಯಾಲಯ ಮಧ್ಯಂತರ ಆದೇಶ ನೀಡಿದ್ದು, ಅಂತಿಮ ಆದೇಶ ಪ್ರಕಟಣೆ ಬಾಕಿ ಇದೆ.

ವಿಶೇಷ ಭೂಸ್ವಾಧೀನಾಧಿಕಾರಿ–2 ಕಚೇರಿಯಲ್ಲಿ ಶಿವಕುಮಾರ್ ಕುಳಿತು ಕೆಲಸ ಮಾಡುತ್ತಿದ್ದರೆ, ಅದೇ ಕಚೇರಿಯ ವ್ಯವಸ್ಥಾಪಕರ ಕಚೇರಿಯಲ್ಲಿ ಕುಳಿತು ಶಿವೇಗೌಡ ಕೆಲಸ ಮಾಡುತ್ತಿದ್ದಾರೆ. ಕಡತವನ್ನು ಯಾರ ಮುಂದೆ ಮಂಡಿಸಬೇಕು ಎಂಬ ಗೊಂದಲದಲ್ಲಿ ಕಚೇರಿ ಸಿಬ್ಬಂದಿ ಮುಳುಗಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಶಿವೇಗೌಡ, 'ಸರ್ಕಾರದ ಆದೇಶದಂತೆ ನಾನು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದೇನೆ. ನಾನು ಕರ್ತವ್ಯದಲ್ಲಿರುವಾಗಲೇ ಯಥಾಸ್ಥಿತಿ ಆದೇಶ ಬಂದಿದೆ. ಹೀಗಾಗಿ ಮುಂದುವರಿದಿದ್ದೇನೆ. ಸಮಸ್ಯೆ ಪರಿಹರಿಸುವುದಾಗಿ ಮಂಡಳಿಯ ಹಿರಿಯ ಅಧಿಕಾರಿಗಳು ಭರವಸೆ ನೀಡಿದ್ದಾರೆ' ಎಂದರು.

ಶಿವಕುಮಾರ್ ಅವರಿಂದ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಆದರೆ ಅವರು ಮೊಬೈಲ್ ಕರೆಯನ್ನು ಸ್ವೀಕರಿಸಲಿಲ್ಲ.

89 ಪ್ಯಾಕೇಜ್‌ಗಳಿಗೆ ಕೂಡಲೇ ಕಾರ್ಯಾದೇಶ ನೀಡಲು ಆಗ್ರಹ

ತ್ಯಾಜ್ಯ: ಹೋರಾಟಕ್ಕೆ ಗುತ್ತಿಗೆದಾರರ ನಿರ್ಧಾರ

ಪ್ರಜಾವಾಣಿ ವಾರ್ತೆ



ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು, ಗುತ್ತಿಗೆದಾರರ ಸಂಘದ ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರು

ಬೆಂಗಳೂರು: ಘನತ್ಯಾಜ್ಯ ನಿರ್ವಹಣೆಗೆ ಹೊಸದಾಗಿ ಯೋಜಿಸಲಾಗಿರುವ 89 ಪ್ಯಾಕೇಜ್‌ಗಳಿಗೆ ಶೀಘ್ರ ಕಾರ್ಯಾದೇಶ ನೀಡದಿದ್ದರೆ ಹೋರಾಟ ನಡೆಸಲು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು, ಗುತ್ತಿಗೆದಾರರ ಸಂಘ ನಿರ್ಧರಿಸಿದೆ.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮತ್ತೊಮ್ಮೆ ಮನವಿ ಸಲ್ಲಿಸಿ, ನಂತರ ಹೋರಾಟದ ಕಾರ್ಯಸೂಚಿ ರೂಪಿಸಲು ಸೋಮವಾರ ನಡೆದ ಸಂಘದ ಸಭೆಯಲ್ಲಿ ಸದಸ್ಯರು ತೀರ್ಮಾನಿಸಿದ್ದಾರೆ.

'ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಲಿಮಿಟೆಡ್ (ಬಿಎಸ್‌ಡಬ್ಲ್ಯುಎಂಎಲ್) ಘನತ್ಯಾಜ್ಯ ನಿರ್ವಹಣೆಗಾಗಿ 89 ಪ್ಯಾಕೇಜ್‌ಗಳ ಟೆಂಡರ್ ಅನ್ನು 2022ರಲ್ಲಿ ಕರೆದಿದೆ. ಹೈಕೋರ್ಟ್‌ನಲ್ಲಿ ಈ ಪ್ಯಾಕೇಜ್ ಅತ್ಯುತ್ತಮವಾಗಿದೆ ಎಂದು ಹೇಳಿಕೊಂಡಿದೆ. ಆದರೆ, ಎಲ್ಲ ರೀತಿಯ ಪ್ರಕ್ರಿಯೆ ಮುಗಿದಿದ್ದರೂ ಕಾರ್ಯಾದೇಶ ನೀಡುತ್ತಿಲ್ಲ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ತಿಳಿಸಿದರು.

'ನಗರದಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಸುಮಾರು ₹561 ಕೋಟಿ ವೆಚ್ಚ ಮಾಡಲಾಗುತ್ತಿದೆ. ಈ ದರ ನಿಗದಿಯಾಗಿದ್ದಾಗ ಡೀಸೆಲ್ ದರ ಪ್ರತಿ ಲೀಟರ್‌ಗೆ ₹66 ಇತ್ತು. ಇಂದು ಲೀಟರ್‌ಗೆ ₹89 ಆಗಿದೆ. ಕಾರ್ಯಾಚರಣೆ ವೆಚ್ಚವೆಲ್ಲವೂ ಹೆಚ್ಚಾಗಿವೆ. ದರ ಹೆಚ್ಚಿಸಲು ಕೇಳಿದರೆ, 'ಹೊಸ ಪ್ಯಾಕೇಜ್‌ಗಳಾಗುತ್ತಿವೆ. ಅದರಲ್ಲಿ ಎಲ್ಲ ಸರಿಹೋಗುತ್ತದೆ' ಎಂದಿದ್ದರು. ಆದರೆ, ಎರಡು ವರ್ಷದಿಂದ ಪ್ಯಾಕೇಜ್‌ಗಳ ಅನುಷ್ಠಾನವನ್ನು ಮುಂದೂಡುತ್ತಲೇ ಬರುತ್ತಿದ್ದಾರೆ' ಎಂದು ಆರೋಪಿಸಿದರು.

'89 ಪ್ಯಾಕೇಜ್‌ಗಳ ಬದಲು 'ಸಮಗ್ರ ಘನತ್ಯಾಜ್ಯ ನಿರ್ವಹಣೆ' ಎಂಬ ಯೋಜನೆ ಆರಂಭಿಸಲು ಮುಂದಾಗಿದ್ದಾರೆ. ಇದರಿಂದ ಪಾಲಿಕೆಗೆ ಹೆಚ್ಚಿನ ಹೊರೆ ಬೀಳುತ್ತದೆ. 89 ಪ್ಯಾಕೇಜ್‌ಗಳನ್ನು ಅನುಷ್ಠಾನಗೊಳಿಸಿದರೆ, ಆರ್ಥಿಕ ಹೊರೆ ಆಗುವುದಿಲ್ಲ. ಆದರೆ, ಪಾಲಿಕೆಯ ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಗುತ್ತಿಗೆದಾರರು ಹಾಗೂ ಸರ್ಕಾರದ ಮಧ್ಯೆ ಕಂದಕ ನಿರ್ಮಾಣ ಮಾಡುತ್ತಿದ್ದಾರೆ' ಎಂದು ದೂರಿದರು.

'ಮುಖ್ಯ ಆಯುಕ್ತರು ಸ್ಪಂದಿಸದಿದ್ದರೆ, ಘನತ್ಯಾಜ್ಯ ಸಾಗಣೆ ಗುತ್ತಿಗೆದಾರರು ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ' ಎಂದು ಎಸ್.ಎನ್. ಬಾಲಸುಬ್ರಮಣಿಯಂ ಎಚ್ಚರಿಸಿದರು.

₹55 ಲಕ್ಷ ದೇಣಿಗೆ

ಕೇರಳದ ವಯನಾಡ್‌ನಲ್ಲಿ ಸಂಭವಿಸಿರುವ ಪ್ರಕೃತಿ ವಿಕೋಪದ ಸಂತ್ರಸ್ತರಿಗೆ ಪರಿಹಾರ ನೀಡಲು ಸುಮಾರು ₹55 ಲಕ್ಷ ದೇಣಿಗೆ ನೀಡಲು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು, ಗುತ್ತಿಗೆದಾರರ ಸಂಘ ನಿರ್ಧರಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯಲ್ಲಿ ಮನೆಮನೆಗಳಿಂದ ತ್ಯಾಜ್ಯ ಸಂಗ್ರಹಿಸಿ, ಸಂಸ್ಕರಣೆ ಘಟಕಕ್ಕೆ ಸಾಗಣೆ ಮಾಡುತ್ತಿರುವ ಗುತ್ತಿಗೆದಾರರ ಜೂನ್ ತಿಂಗಳ ಬಿಲ್ಲಿನಲ್ಲಿ ಶೇ 1ರಷ್ಟು ಮೊತ್ತವನ್ನು ಮೂಲದಲ್ಲೇ ಕಟಾವು ಮಾಡಿಕೊಳ್ಳಬೇಕು ಎಂದು ಮುಖ್ಯ ಆಯುಕ್ತರಿಗೆ ಪತ್ರ ಬರೆಯಲಾಗಿದೆ.

ಈ ಮೊತ್ತವನ್ನು ಮುಖ್ಯಮಂತ್ರಿ ಅವರ ಪರಿಹಾರ ನಿಧಿಗೆ ತಲುಪಿಸಿ, ಆ ಮೂಲಕ ಸಂತ್ರಸ್ತರಿಗೆ ನೆರವಾಗಲು ಸಂಘದ ಸಭೆಯಲ್ಲಿ ನಿರ್ಧರಿಸಲಾಗಿದೆ.

ನಗರ ಸ್ಥಳೀಯ ಸಂಸ್ಥೆ ಅಧ್ಯಕ್ಷ ಉಪಾಧ್ಯಕ್ಷ ಮೀಸಲಾತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 61 ನಗರಸಭೆ, 123 ಪುರಸಭೆ ಹಾಗೂ 117 ಪಟ್ಟಣ ಪಂಚಾಯಿತಿಗಳು ಸೇರಿ 301 ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಮೀಸಲಾತಿಯನ್ನು ನಿಗದಿ ಮಾಡಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಹಿಂದಿನ ಸರ್ಕಾರದ ಅವಧಿಯಲ್ಲಿ ನಿಗದಿ ಮಾಡಿದ್ದ ಅಧ್ಯಕ್ಷ, ಉಪಾಧ್ಯಕ್ಷ ಮೀಸ-ಲಾತಿಯಲ್ಲಿನ ಲೋಪ, ಪುನರಾವರ್ತನೆ ಪ್ರಶ್ನಿಸಿ ಕೆಲವರು ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರು. ರಾಜ್ಯ ಸರ್ಕಾರ ತಾನು ನಿಗದಿ ಮಾಡಿದ್ದ ಮೀಸಲಾತಿ ಪಟ್ಟಿಯನ್ನು 2022ರ ಸೆಪ್ಟೆಂಬರ್‌ನಲ್ಲಿ ಪ್ರಮಾಣಪತ್ರದ ಮೂಲಕ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿತ್ತು.

ರಾಷ್ಟ್ರೀಯ ಮಾಹಿತಿ ಕೇಂದ್ರ ಅಭಿವೃದ್ಧಿಪಡಿಸಿದ ಸಾಫ್ಟ್‌ವೇರ್ ಮೂಲಕ ಮೀಸಲಾತಿ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಮೀಸಲಾತಿಯ ಪುನರಾವರ್ತನೆಗೆ ಅವಕಾಶ ಇಲ್ಲ ದಂತೆ ನಿಯಮದ ಅನುಸಾರವೇ ಎಲ್ಲ ವರ್ಗಗಳಿಗೂ ನ್ಯಾಯ ಒದಗಿಸಲಾಗಿದೆ ಎಂದು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡಿ ಕೊಟ್ಟಿತ್ತು. ಕೋರ್ಟ್ ಸಮ್ಮತಿ ಬೆನ್ನಲ್ಲೇ ನಗರಾಭಿವೃದ್ಧಿ ಇಲಾಖೆ ಪಟ್ಟಿ ಬಿಡುಗಡೆ ಮಾಡಿದೆ.

ಸಂತ್ರಸ್ತರಿಗೆ ದಿನಸಿ ಕಿಟ್ ನೀಡಿದ ಅಕ್ಷಯ ಪಾತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದ ವಯನಾಡ್‌ನಲ್ಲಿ ಸಂಭವಿಸಿರುವ ಪ್ರವಾಹ ಹಾಗೂ ಭೂಕುಸಿತದ ಸಂತ್ರಸ್ತರಿಗೆ ಅಕ್ಷಯ ಪಾತ್ರ ಫೌಂಡೇಷನ್ ವತಿಯಿಂದ ದಿನಸಿ ಕಿಟ್‌ಗಳನ್ನು ವಿತರಿಸಲಾಗುತ್ತಿದೆ.

ಭೂಕುಸಿತ ಮತ್ತು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಒಂದು ಸಾವಿರ ದಿನಸಿ ಕಿಟ್‌ಗಳನ್ನು ವಿತರಿಸಲಾಗಿದೆ. ಇನ್ನೂ ಒಂಬತ್ತು ಸಾವಿರ ಕಿಟ್ ತಲುಪಿಸಲು ಸಿದ್ಧತೆ ನಡೆಸಲಾಗಿದೆ. ಈ ದಿನಸಿ ಕಿಟ್‌ನಲ್ಲಿ ಅಕ್ಕಿ, ಗೋಧಿ ಹಿಟ್ಟು, ಕಡಲೆಕಾಯಿ, ಅಡುಗೆ ಎಣ್ಣೆ, ಸಾಂಬಾರ್ ಪುಡಿ, ಅರಿಶಿನ ಪುಡಿ, ಸಕ್ಕರೆ, ಉಪ್ಪು, ಬಿಸ್ಕತ್ತುಗಳು ಮತ್ತು ಓಆರ್‌ಎಸ್ ಪ್ಯಾಕೆಟ್‌ಗಳಂತಹ ಅಗತ್ಯ ವಸ್ತುಗಳನ್ನು ನೀಡಲಾಗುತ್ತಿದೆ ಎಂದು ಅಕ್ಷಯ ಪಾತ್ರ ಫೌಂಡೇಷನ್‌ನ ಉಪಾಧ್ಯಕ್ಷ ಚಂಚಲಪತಿ ದಾಸ ತಿಳಿಸಿದ್ದಾರೆ.

'ಕಲ್ಪೆಟ್ಟಾದ ಸೇಂಟ್ ಜೋಸೆಫ್ ಕಾನ್ವೆಂಟ್ ಶಾಲೆಯಲ್ಲಿ ಫೌಂಡೇಷನ್‌ನ ತಂಡ ಬೀಡು ಬಿಟ್ಟಿದ್ದು, ಎಲ್ಲಾ ಕಾರ್ಯಾಚರಣೆಗಳನ್ನು ಅಲ್ಲಿಂದಲೇ ನಡೆಸುತ್ತಿದೆ. ಜಿಲ್ಲಾಧಿಕಾರಿಗಳು, ಸ್ಥಳೀಯ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಫಲಾನುಭವಿಗಳಿಗೆ ದಿನಸಿ ಕಿಟ್ ವಿತರಣೆ ಮಾಡಲಾಗುತ್ತಿದೆ. ಇದರ ಜೊತೆಗೆ ಕಷ್ಟ-ದಲ್ಲಿರುವವರಿಗೆ ನೆರವಾಗಲು ಬೇಯಿಸಿದ ಊಟವನ್ನು ನೀಡುವ ಕುರಿತಾಗಿ ಅಕ್ಷಯ ಪಾತ್ರ ಫೌಂಡೇಷನ್ ದಾರಿ ಹುಡುಕುತ್ತಿದೆ' ಎಂದಿದ್ದಾರೆ.

ಕ್ಷೇಮ ಕುಶಲ

ವೈರಾಣು ಜ್ವರ ಹೈರಾಣಾದ ಜನ

ಡಾ. ಶ್ರೀನಿವಾಸ ಹರಪನಹಳ್ಳಿ

ಈ ವರ್ಷ ಮುಂಗಾರು ಕಳೆಗಟ್ಟಿದೆ. ಎಲ್ಲಿ ನೋಡಿದರೂ ನದಿ-ತೊರೆಗಳು ಉಕ್ಕೇರಿ ಹರಿಯುತ್ತಿವೆ. ಬಿಸಿಲಿನ ಬೇಗೆಯಿಂದ ತತ್ತರಿಸಿದ್ದ ಭೂಮಿ ಈಗ ಹಸಿರಿನಿಂದ ಮೈದುಂಬಿ ಕಂಗೊಳಿಸುತ್ತಿದೆ. ವಾತಾವರಣದಲ್ಲಿನ ಈ ಬದಲಾವಣೆ ಬರಿ ಸಹಜವಷ್ಟೇ ಅಲ್ಲ, ಅನಿವಾರ್ಯ ಕೂಡ. ವರುಣನಾಗಮನ ಕೃಷಿವರ್ಗಕ್ಕೆ ಹುಮ್ಮಸ್ಸನ್ನು ತಂದರೆ ನಗರವಾಸಿಗಳಿಗೆ ರೇಜಿಗೆಯನ್ನುಂಟುಮಾಡುತ್ತಿದೆ. ಬಡಾವಣೆಗಳ ಸಂದಿ-ಗೊಂದಿಗಳಲ್ಲಿ ನೀರು ನಿಂತು ಅಬಾಲವೃದ್ಧರಾದಿಯಾಗಿ ಎಲ್ಲರಿಗೂ ಇರಿಸು-ಮುರಿಸು ಉಂಟುಮಾಡುತ್ತಿದೆ. ಇದರೊಂದಿಗೆ ಮೋಡ ಕವಿದ ವಾತಾವರಣ, ಕುಳಿರ್ಗಾಳಿ ಮತ್ತು ಮನೆಯ ಅಕ್ಕಪಕ್ಕದ ಪ್ರದೇಶಗಳಲ್ಲಿ ನಿಂತ ನೀರು ಜನರಲ್ಲಿ ಅನಾರೋಗ್ಯದ ಭೀತಿಯನ್ನು ತಂದಿದೆ.

ಈ ಸಂದರ್ಭದಲ್ಲಂತೂ ಎಲ್ಲೆಡೆ ಹರಡುತ್ತಿರುವ ವೈರಾಣುಜ್ವರದ ಬಗ್ಗೆ ನಾವು ಜಾಗರೂಕರಾಗಿರುವುದು ಒಳ್ಳೆಯದು. ಪ್ರತಿ ಮಳೆಗಾಲದಲ್ಲೂ 'ಫ್ಲೂ' ಎಂಬ ಥಂಡಿ-ಜ್ವರ ಹೆಚ್ಚು ಕಡಿಮೆ ಎಲ್ಲರಲ್ಲೂ ಕಂಡುಬರುವುದು ಸಾಮಾನ್ಯ. ಕೆಮ್ಮು-ನೆಗಡಿ, ಜ್ವರ, ಮೈ-ಕೈ ನೋವುಗಳಂಥ ಲಕ್ಷಣಗಳನ್ನು ಹೊಂದಿರುವ ಈ ಕಾಯಿಲೆ ನಾಲ್ಕಾರು ದಿನಗಳ ನಂತರ ವಾಸಿಯಾಗಿಬಿಡುವ ಅನುಭವ ನಮಗೆಲ್ಲರಿಗೂ ಆಗೇ ಆಗಿರುತ್ತದೆ. ಬಹುತೇಕ ಸಂದರ್ಭಗಳಲ್ಲಿ 'ಪ್ಯಾರಾಸಿಟಮೋಲ್' ಮಾತ್ರೆಗಳಿಂದಲೇ ಈ ಜ್ವರ ಕಡಿಮೆಯಾಗಿಬಿಡುತ್ತದೆ.

ಆದರೆ ಈ ಬಾರಿ ಗಮನಿಸಬೇಕಾದ ಅಂಶವೇನೆಂದರೆ ಬರಿ ಫ್ಲೂ-ಜ್ವರ ಮಾತ್ರವಲ್ಲದೇ ಇನ್ನೂ ಕೆಲವು ರೀತಿಯ ಜ್ವರಗಳು ಜನರನ್ನು ಬಾಧಿಸುತ್ತಿವೆ; ಇವೂ ವೈರಾಣುಗಳಿಂದಲೇ ಹರಡುತ್ತಿವೆ. ಈ ವೈರಾಣುಜ್ವರಗಳ ರೋಗ-ಲಕ್ಷಣಗಳು ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿದ್ದು ಫ್ಲೂ-ಜ್ವರವನ್ನೇ ಹೋಲುತ್ತವೆ. ಆದರೆ ಕೆಲವು ಲಕ್ಷಣಗಳು ಫ್ಲೂ-ಜ್ವರಕ್ಕಿಂತ ಭಿನ್ನವಾಗಿದ್ದು ಹೆಚ್ಚು ಅಪಾಯಕಾರಿಯೂ ಆಗಿಬಲ್ಲ ಸಾಧ್ಯತೆಗಳಿವೆ. ಆದ್ದರಿಂದ ಈ ಬೇರೆ ರೀತಿಯ ವೈರಾಣು ಜ್ವರಗಳ ಬಗ್ಗೆ ಕೊಂಚ ತಿಳಿದುಕೊಳ್ಳೋಣ.

ಈಗ ಸದ್ಯಕ್ಕೆ ನಮ್ಮ ರಾಜ್ಯದಲ್ಲಿ ಹಬ್ಬುತ್ತಿರುವ ಜ್ವರವೆಂದರೆ ಡೆಂಗಿ. 'ಫ್ಲೇವಿವೈರಸ್' ಪ್ರಬೇಧದ ಡೆಂಗಿ ವೈರಾಣುಗಳಿಂದ ಬರುವ ಈ ಕಾಯಿಲೆ ನಮಗೆ 'ಏಡಿಸ್' ಸೊಳ್ಳೆಗಳ ಮೂಲಕ ಹರಡುತ್ತದೆ. ಫ್ಲೂ-ಜ್ವರದ ರೋಗಲಕ್ಷಣಗಳನ್ನೇ ಹೊಂದಿದ್ದರೂ, ಮೈ-ಕೈ ನೋವು, ಕಣ್ಣುರಿ ಕೊಂಚ ಹೆಚ್ಚೇ ಇರುತ್ತದೆ. ಅಲ್ಲದೇ ಚರ್ಮದ ಮೇಲೆ ಕೆಂಪು ಗುಳ್ಳೆಗಳು ಕಾಣಬಹುದು. ಡೆಂಗಿ ತೀವ್ರವಾದಾಗ ರಕ್ತದಲ್ಲಿನ 'ಪ್ಲೇಟಲೆಟ್'ಗಳ ಸಂಖ್ಯೆ ಕುಸಿದು ದೇಹದ ಒಳಭಾಗಗಳಲ್ಲಿ, ಒಸಡು, ಕೀಲುಗಳಲ್ಲಿ ರಕ್ತಸ್ರಾವವಾಗಬಹುದು. ರಕ್ತಪರೀಕ್ಷೆಯಲ್ಲಿ ಕೆಲವು 'ಇಮ್ಯೂನೋಗ್ಲೋಬಿನ್' ಅಂಶಗಳ ಪತ್ತೆ ಮೂಲಕ ಡೆಂಗಿ ಜ್ವರವನ್ನು ಗುರುತಿಸಬಹುದು.



'ಜೀಕಾ' ವೈರಾಣು ಕೂಡ ಇತ್ತೀಚಿಗೆ ನಮ್ಮಲ್ಲಿ ಪತ್ತೆಯಾಗಿದೆ. ಪಕ್ಕದ ಕೇರಳದಲ್ಲಿ ಪತ್ತೆಯಾದ ನಂತರ ನಮ್ಮಲ್ಲೂ ಈ ವೈರಾಣು ಜ್ವರ ಹರಡುತ್ತಿದೆ. ಸೌಮ್ಯ ಫ್ಲೂ ಲಕ್ಷಣಗಳನ್ನು ಹೊಂದಿರುವ ಈ ಜ್ವರ ಕೂಡ ಏಡಿಸ್ ಸೊಳ್ಳೆಗಳಿಂದಲೇ ಹರಡುತ್ತದೆ. ಗರ್ಭಿಣಿ ಸ್ತ್ರೀಯರಲ್ಲಿ ಈ ಜ್ವರ ಕಾಣಿಸಿಕೊಂಡಾಗ ಹುಟ್ಟುವ ಮಕ್ಕಳಲ್ಲಿ ಅಂಗನ್ಯೂನತೆ ಕಾಣಬಹುದು. ಜೊತೆಗೆ ಮಿದುಳಿನ ಬೆಳವಣಿಗೆಗೂ ಕುಂದುಂಟಾಗಬಹುದು.

'ನಿಫಾ' ವೈರಾಣು ಜ್ವರ ಕೂಡ ಕೇರಳದಲ್ಲಿ ಮೊದಲು ಪತ್ತೆಯಾಗಿ ನಂತರ ಇತರೆಡೆ ಹಬ್ಬುತ್ತಿದೆ. ದೇಶದಲ್ಲೇ ಅತಿಹೆಚ್ಚು ಜನಸಾಂದ್ರತೆಯುಳ್ಳ ರಾಜ್ಯ ಕೇರಳ. ಅಲ್ಲದೇ ಇಲ್ಲಿನ ಅನೇಕ ಜನರು ಗಲ್ಫ್ ಮತ್ತಿತರ ದೇಶಗಳಿಗೆ ಕಾರ್ಮಿಕರಾಗಿ ಹೋಗಿ ಬರುವುದರಿಂದ ಬಹುಮಟ್ಟಿನ ರೋಗಗಳು ಕೇರಳದ ಮೂಲಕವೇ ಭಾರತಕ್ಕೆ ಲಗ್ಗೆ ಇಟ್ಟಿವೆ. ಈ ಬಾರಿ 'ನಿಫಾ' ಕರ್ನಾಟಕಕ್ಕೂ ಕಾಲಿಟ್ಟಿದೆ. ಮುಖ್ಯವಾಗಿ ಬಾವಲಿ, ಹಂದಿಯಂತಹ ಪ್ರಾಣಿಗಳಿಂದ (ಕೊರೊನ ವೈರಸ್ ಥರ!) ಹಣ್ಣು ಇನ್ನಿತರೇ ಆಹಾರಪದಾರ್ಥಗಳ ಮೂಲಕ ಮಾನವನ ದೇಹವನ್ನು ಪ್ರವೇಶಿಸುತ್ತದೆ. ನಂತರ ಕಫ, ಜೊಲ್ಲಿನಂತಹ ದ್ರವಗಳ ಮೂಲಕ ಇನ್ನಿತರರಿಗೆ ಹಬ್ಬುತ್ತದೆ. ಫ್ಲೂ ಲಕ್ಷಣಗಳ ಜೊತೆ ನ್ಯೂಮೋನಿಯಾ ಮತ್ತು ಮಿದುಳಿನ ಉರಿತದಿಂದ ಸಾವೂ ಉಂಟಾಗಬಹುದು.


ಕೇರಳದಲ್ಲಿ 2022ರಲ್ಲಿ ಮೊದಲು ಪತ್ತೆಯಾದ 'ಟೊಮೊಟೊ ಫ್ಲೂ' ಜ್ವರ ಬಹುತೇಕ ಚಿಕ್ಕ ಮಕ್ಕಳು ಮತ್ತು ನಿಶ್ಯಕ್ತ ವೃದ್ಧರನ್ನೇ ಬಾಧಿಸುತ್ತದೆ. ಫ್ಲೂ ಲಕ್ಷಣಗಳ ಜೊತೆಗೇ ಚರ್ಮದ ಮೇಲೆ ಕೆಂಪು ಗಡ್ಡೆಗಳು ಕಾಣಿಸಿಕೊಂಡು ಕ್ರಮೇಣ ಟೊಮೊಟೊ ಸೈಜಿನಷ್ಟಾಗುವುದು ಈ ಜ್ವರದ ವಿಶೇಷ! ಈ ಜ್ವರ ಡೆಂಗಿ, ಚಿಕುನ್ ಗುನ್ಯಾ ಅಥವಾ ಕೋವಿಡ್ ಜ್ವರದಿಂದ ಗುಣಹೊಂದಿದವರಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತದೆ.

ಈ ಎಲ್ಲ ವೈರಾಣು ಜ್ವರಗಳಿಗೆ ನಿರ್ದಿಷ್ಟವಾದ ಚಿಕಿತ್ಸೆ ಇಲ್ಲ. ಬಹುತೇಕ ಕಾಯಿಲೆಗಳು ಜ್ವರ/ನೋವುನಿವಾರಕ ಮಾತ್ರೆ, ವಿಶ್ರಾಂತಿ, ಪೌಷ್ಟಿಕ ಆಹಾರದ ಮೂಲಕ ನಿಯಂತ್ರಣಕ್ಕೆ ಬರುತ್ತವೆ. ವಿಶೇಷಸಂದರ್ಭಗಳಲ್ಲಿ ರಕ್ತಪೂರಣ ಮಾಡಬೇಕಾಗಿ ಬರಬಹುದು. ಸೂಕ್ತ ಮುಂಜಾಗ್ರತಾ ಕ್ರಮಗಳಿಂದ ಬಹುಮಟ್ಟಿಗೆ ಈ ಕಾಯಿಲೆಗಳನ್ನು ತಡೆಗಟ್ಟಬಹುದು. ಸೋಂಕಿತರನ್ನು ಉಳಿದವರಿಂದ ಪ್ರತ್ಯೇಕಿಸುವುದರಿಂದ, ಕೈಗಳಿಗೆ ಆಗಾಗ್ಗೆ 'ಸ್ಯಾನಿಟೈಸರ್'ನ ಬಳಕೆ ಮಾಡುವುದರಿಂದ ಮತ್ತು ತಾಜಾ-ಶುಚಿಯಾದ ಆಹಾರಸೇವನೆಯಿಂದ ಸೋಂಕು ತಡೆಗಟ್ಟಬಹುದು. ಅಲ್ಲದೇ, ಮನೆಯ ಅಕ್ಕ-ಪಕ್ಕ, ಹೂಕುಂಡಗಳಲ್ಲಿ ನೀರು ನಿಲ್ಲದಂತೆ ನೋಡಿಕೊಂಡರೆ ಸೊಳ್ಳೆಗಳ ಕಾಟ ತಪ್ಪುತ್ತದೆ. 'ಇನ್ ಫ್ಲ್ಯುಎಂಜಾ' ಜ್ವರಕ್ಕೆ ಲಸಿಕೆ ಕೂಡ ಲಭ್ಯವಿದೆ.

ಇವಲ್ಲದೆ ಚಿಕುನ್ ಗುನ್ಯಾ, ಎಬೋಲಾ, ಪಶ್ಚಿಮ ನೈಲ್ ಜ್ವರ, ಮಂಗನಜ್ವರ, ಹಕ್ಕಿ ಜ್ವರದಂತಹ ಇನ್ನೂ ಅನೇಕ ಕಾಯಿಲೆಗಳು ವೈರಾಣುಗಳಿಂದ ಹರಡುತ್ತಿವೆ. ಇವೆಲ್ಲವೂ ವಿವಿಧ ವೈರಾಣುಗಳಿಂದ ಹಬ್ಬಿದರೂ ಒಂದೇ ರೀತಿಯ ರೋಗಲಕ್ಷಣಗಳನ್ನು ಹೊಂದುವ ಮೂಲಕ ವೈದ್ಯರಿಗೆ ಸವಾಲೆಸೆಯುತ್ತವೆ. ಆದರೆ ವಿಶೇಷ ಲಕ್ಷಣಗಳು ಮತ್ತು ಸೂಕ್ತ ರಕ್ತಪರೀಕ್ಷೆಯ ಮೂಲಕ ಇವುಗಳನ್ನು ಪತ್ತೆಮಾಡಿ ಚಿಕಿತ್ಸೆ ನೀಡಬಹುದು. ❖

ಕಂಪ್ಯೂಟರ್‌ಗಳೂ ಕಣ್ಣುಗಳೂ....

ಡಾ. ಲಕ್ಷ್ಮಿ ಕೆ. ಎಸ್. ಮೂರ್ತಿ



ಈಗ ಕಂಪ್ಯೂಟರ್‌ನ ಬಳಕೆ ಮನೆಮಾತಾಗಿದೆ. ಎಲ್ಲ ಕ್ಷೇತ್ರಗಳಲ್ಲೂ ಕಂಪ್ಯೂಟರ್‌ಗಳು ಅನಿವಾರ್ಯ ಎನಿಸಿವೆ. ಮಕ್ಕಳಿಂದ ಮೊದಲುಗೊಂಡು ವೃದ್ಧರ ತನಕ ಎಲ್ಲರೂ ಇಂದು ಕಂಪ್ಯೂಟರನ್ನು ಆಶ್ರಯಿಸಿದ್ದಾರೆ. ಹೀಗಾಗಿ ಸಹಜವಾಗಿಯೇ ನಮ್ಮೆಲ್ಲರ ಕಣ್ಣುಗಳ ಮೇಲೆ ಕಂಪ್ಯೂಟರ್‌ನ ಪ್ರಭಾವ ಹೆಚ್ಚಾಗಿದೆ; ಅದರೊಂದಿಗೆ ತೊಂದರೆಗಳೂ ಸಹಜವಾಗಿಯೇ ಎದುರಾಗುತ್ತಿವೆ. ಅವುಗಳಲ್ಲಿ ಮುಖ್ಯವಾದವು:

1. ಕಣ್ಣಿನ ಆಯಾಸ (eye strain)
2. ಕಡಿಮೆ ಕಣ್ಣೀರಂಶ (Dry Eye disease)

ಇವೆರಡನ್ನೂ ಸೇರಿಸಿ ನೇತ್ರತಜ್ಞರು 'ಕಂಪ್ಯೂಟರ್ ವಿಷನ್ಸ್ ಸಿಂಡ್ರೋಮ್' ಎಂದು ನಾಮಕರಣ ಮಾಡಿದ್ದಾರೆ.

ಕಂಪ್ಯೂಟರ್ ಉಪಯೋಗಿಸುವವರಲ್ಲಿ ಯಾಕೆ ಇದು ಆಗುತ್ತಿದೆ ಎಂದು ತಿಳಿಯಲು ಸಾವಿರಾರು ವರ್ಷಗಳ ಮಾನವನ ವಿಕಾಸದ ಬಗ್ಗೆ ಮಾಹಿತಿ ಅವಶ್ಯಕ. ಮೊದಲು ಮಾನವ ಬೇಟೆಗಾರನಾಗಿದ್ದರಿಂದ ಅವನು ದೂರ ಹೆಚ್ಚು ನೋಡುತ್ತಿದ್ದ. ಆದ್ದರಿಂದ ದೂರ ನೋಡಿದರೆ ಕಣ್ಣಿನ ಸ್ನಾಯುಗಳಿಗೆ ವಿಶ್ರಾಂತಿ ನೀಡಿದಂತೆ, ಸಮೀಪ ನೋಡಿದಲ್ಲಿ ಸ್ನಾಯುಗಳನ್ನು ಬಿಗಿಯಾಗಿ ಎಳೆದಂತೆ ಆಗುವುದು ಮಾನವನ ಕಣ್ಣಿನ ಸ್ವಭಾವ. ಆದರೆ ಇಂದಿನ ನಮ್ಮ ಜೀವನವು ಸಮೀಪವಾದವುಗಳನ್ನು ನೋಡುವುದರಲ್ಲಿಯೇ ಕಳೆಯುತ್ತದೆ. ಓದುವುದು, ಬರೆಯುವುದು, ಕೈಗಾರಿಕೆಗಳಲ್ಲಿ ಕೆಲಸ, ಮೊಬೈಲ್ ಫೋನ್, ಕಂಪ್ಯೂಟರ್ – ಹೀಗೆ ಬಹುಪಾಲು ನಮ್ಮ ಜೀವನವಿಧಾನವು ಸಮೀಪವಾದುದನ್ನು ನೋಡುವುದನ್ನೇ ಅವಲಂಬಿಸಿದೆ. ಹೀಗಾಗಿ ಇದು ಕಣ್ಣಿನ ಆಯಾಸಕ್ಕೆ ಕಾರಣವಾಗುತ್ತಿದೆ. ಅದರಲ್ಲೂ ಕಂಪ್ಯೂಟರನ್ನು ಹೆಚ್ಚು ಉಪಯೋಗಿಸುವವರಲ್ಲಿ ಇದು ಹೆಚ್ಚಾಗ ಕಾಣಿಸಿಕೊಳ್ಳುತ್ತದೆ. ಆಯಾಸದ ಜೊತೆಗೆ, ತಲೆನೋವು, ಕಣ್ಣುನೋವು ಮುಂತಾದ ತೊಂದರೆಗಳನ್ನೂ ಕಾಣಬಹುದು.

ಇದಕ್ಕೊಂದು ಸುಲಭವಾದ ಪರಿಹಾರವಿದೆ. ನಮ್ಮ ಜೀವನಶೈಲಿಯನ್ನು ಸ್ವಲ್ಪ ಬದಲಾಯಿಸಬೇಕು. ಇದನ್ನು '20-20-20 ರೂಲ್' ಎಂದು ಕರೆಯುತ್ತೇವೆ. ಕಂಪ್ಯೂಟರ್ ನೋಡುವ ಸಮಯದಲ್ಲಿ ಪ್ರತಿ 20 ನಿಮಿಷಕ್ಕೊಮ್ಮೆ 20 ಸೆಕೆಂಡುಗಳ ಕಾಲ, 20 ಮೀಟರ್‌ಗಳಿಗಿಂತ ದೂರವಿರುವ ವಸ್ತುವನ್ನು (ಉದಾಹರಣೆಗೆ, ದೂರದ ಪಕ್ಷಿ, ಮೋಡ, ನಕ್ಷತ್ರ, ವಾಹನ ಮುಂತಾದವುಗಳನ್ನು) ನೋಡಿ, ನಂತರ ಕಂಪ್ಯೂಟರ್‌ನ ಪರದೆಯ ಕಡೆಗೆ ಕಣ್ಣಿನ ದೃಷ್ಟಿಯನ್ನು ಹಾಯಿಸುವುದು. ಹೀಗೆ ಮಾಡುವುದರಿಂದ ಕಣ್ಣುಗಳ ಸ್ನಾಯುಗಳು 'ಸಡಿಲ'ಗೊಂಡು (ರಿಲ್ಯಾಕ್ಸ್) ಕಣ್ಣುಗಳ ಆಯಾಸ ಕಡಿಮೆಯಾಗುತ್ತದೆ.

ಈಗ ಎರಡನೇ ತೊಂದರೆ ಎಂದರೆ ಕಣ್ಣೀರಿನ ಅಂಶ ಕಡಿಮೆಯಾಗುವುದು. ಕಣ್ಣಿನ ರೆಪ್ಪೆಯ ಕೆಳಗೆ ಹಾಗೂ ಕರಿಗುಡ್ಡೆಯ ಮೇಲೆ ಕಣ್ಣೀರಿನ ಸುರಕ್ಷಾ ಕವಚವಿರುತ್ತದೆ. ಈ ಕಣ್ಣೀರಿನಂಶ ಕಡಿಮೆಯಾದಲ್ಲಿ ಅದನ್ನು 'ಡ್ರೈ ಐಸ್' ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ಒಂದು ನಿಮಿಷಕ್ಕೆ ನಾವು ಸುಮಾರು 15 ಬಾರಿ ಕಣ್ಣು ಮಿಟುಕಿಸುಕತ್ತೇವೆ. ಹೆಚ್ಚು ಓದುವವರಲ್ಲಿ ಇದು ಸಹಜವಾಗಿ ಒಂದು ನಿಮಿಷಕ್ಕೆ ಒಂದೇ ಬಾರಿ ಮಿಟುಕಿಸುವಂತಾಗುತ್ತದೆ. ಹೆಚ್ಚು ಕಂಪ್ಯೂಟರನ್ನು ಬಳಸುವವರಲ್ಲಿ ಈ ಕಣ್ಣು ಮಿಟುಕಿಸುವುದು ಎರಡು ನಿಮಿಷಕ್ಕೆ ಒಂದು ಬಾರಿಯಂತೆ ಬಹಳ ಕಡಿಮೆ ಆಗುತ್ತದೆ. ಇದರ ಜೊತೆಗೆ ಕಂಪ್ಯೂಟರ್ ಹೊರಸೂಸುವ ಶಾಖದಿಂದ ಕಣ್ಣೀರು ಆವಿಯಾಗಿ, ನೀರಿನ ಅಂಶ ಕಣ್ಣುಗಳಲ್ಲಿ ಕಡಿಮೆಯಾಗುತ್ತದೆ. ಈ ಕಾರಣದಿಂದಲೇ ಕಣ್ಣು ಕೆಂಪಾಗುವುದು, ಕಣ್ಣುರಿ ಮತ್ತಿತರ ತೊಂದರೆಗಳು ಕಂಡುಬರುವುದು. ಇದರ ಪರಿಹಾರವೂ ಸುಲಭ. ನಿಮಿಷಕ್ಕೆ ಸುಮಾರು ಐದರಿಂದ ಆರು ಬಾರಿ ಪೂರ್ಣವಾಗಿ ಕಣ್ಣನ್ನು ಮಿಟುಕಿಸುವ ಪ್ರಯತ್ನ ಮಾಡಬೇಕು; ಇದನ್ನು ಒಂದು ಅಭ್ಯಾಸವಾಗಿಯೇ ರೂಢಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ ಕಣ್ಣೀರು ಆವಿಯಾಗುವುದು ಕಡಿಮೆಯಾಗುತ್ತದೆ; ಕಣ್ಣೀರಿನ ಕವಚ ಕರಿಗುಡ್ಡೆಯ ಮೇಲೆ ಸರಿಯಾಗಿ ಹರಡುತ್ತದೆ. ❖

ಕೆಲವು ಸಲಹೆಗಳು

1. ಕಂಪ್ಯೂಟರ್‌ನ ಹೊಳಪು ಅತಿ ಹೆಚ್ಚು ಇರದಂತೆ, ಅತಿ ಕಡಿಮೆಯೂ ಇರದಂತೆ ನೋಡಿಕೊಳ್ಳಿ.
2. ನಿಮಗೆ ಕಣ್ಣಿನ 'ಪವರ್' ಇದ್ದಲ್ಲಿ, ನೀವು ಕಂಪ್ಯೂಟರನ್ನು ಉಪಯೋಗಿಸುವಾಗ ಕನ್ನಡಕದ ಉಪಯೋಗವನ್ನು ಮಾಡದಿದ್ದರೆ ಕಣ್ಣಿನ ಮೇಲಿನ ಒತ್ತಡ ಹೆಚ್ಚಾಗುತ್ತದೆ. ಆದ್ದರಿಂದ ಸಮೀಪದೃಷ್ಟಿ ಇರಲಿ, ದೂರದೃಷ್ಟಿ ಇರಲಿ, ಕಂಪ್ಯೂಟರ್ ಬಳಸುವ ಸಮಯದಲ್ಲಿ ಖಂಡಿತವಾಗಿಯೂ ಕನ್ನಡಕವನ್ನು ಉಪಯೋಗಿಸಬೇಕು.
3. 'ನೀಲಿ ಕವಚದ ಕನ್ನಡಕ'ಗಳನ್ನು (blue filter glasses) ಕಂಪ್ಯೂಟರನ್ನು ಬಳಸುವವರು ಉಪಯೋಗಿಸಬೇಕೆಂಬ ಜಾಹೀರಾತುಗಳು ಬರುತ್ತಿವೆ. ಆದರೆ ಈ ತರಹದ ಕನ್ನಡಕಗಳಿಂದ ಯಾವುದೇ ಉಪಯೋಗವಿಲ್ಲವೆಂದು ವೈಜ್ಞಾನಿಕ ಪ್ರಯೋಗಗಳು ಸಾಬೀತುಮಾಡಿವೆ. ಅದಲ್ಲದೆ ಚಿಕ್ಕ ಮಕ್ಕಳಲ್ಲಿ ಈ ತರಹದ ಕನ್ನಡಕದ ಬಳಕೆಯಿಂದ 'ಸಮೀಪದೃಷ್ಟಿ'(myopia) ಬರುವ ಸಾಧ್ಯತೆ ಹೆಚ್ಚು. ಆದ್ದರಿಂದ ಇದರ ಬಳಕೆಯನ್ನು ನಿಷೇಧಿಸಬೇಕು.
4. ಮಕ್ಕಳನ್ನು ಹೊರತು ಪಡಿಸಿ, ಇನ್ನೆಲ್ಲರಿಗೂ ಅವರ ಶರೀರದ ಆರೋಗ್ಯಕ್ಕೆ ಯಾವ ಆಹಾರ ಅವಶ್ಯಕವೋ ಅದೇ ಕಣ್ಣಿಗೂ ಅವಶ್ಯಕ. ಇದಕ್ಕೆ ಹೊಸ ಆಹಾರಪದ್ಧತಿಯ ಅವಶ್ಯಕತೆ ಇಲ್ಲ. ಮಕ್ಕಳಿನ ಕಣ್ಣಿನ ನರದ ಬೆಳವಣಿಗೆಗೆ ವಿಟಮಿನ್ ಎ ಅವಶ್ಯಕ. ಆಹಾರದಲ್ಲಿ ಕ್ಯಾರೆಟ್, ಹಸಿರು ತರಕಾರಿಗಳು, ಪಾಲಕ್, ಮೆಂತ್ಯ, ಗೆಣಸು, ಪಪಾಯ, ಮಾವಿನ ಹಣ್ಣು, ಮೊಟ್ಟೆ, ಮೀನು – ಇವುಗಳಲ್ಲಿ ವಿಟಮಿನ್ ಎ ಅಂಶ ಹೆಚ್ಚಾಗಿದೆ. ಇವನ್ನು ಮಕ್ಕಳು ಸೇವಿಸಿದರೆ ಅವರ ಕಣ್ಣುಗಳ ಆರೋಗ್ಯ ಚೆನ್ನಾಗಿರುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ – 5.3

3(viii) $a_n = 4$, $d = 2$, $S_n = -14$ ಆದರೆ n ಮತ್ತು a ಕಂಡುಹಿಡಿಯಿರಿ

ಪರಿಹಾರ: (..........ಹಿಂದಿನ ಸಂಚಿಕೆಯಿಂದ)

−2 ನಕಾರಾತ್ಮಕ ಸಂಖ್ಯೆಯಾದ ಕಾರಣ ಅದನ್ನು ತೆಗೆದುಕೊಳ್ಳಲಾಗುವುದಿಲ್ಲ ಹೀಗಾಗಿ n = 7

ಸಮೀಕರಣ 1ರಲ್ಲಿ n = 7 ಹಾಕುವುದರಿಂದ ನಮಗೆ ಕೆಳಗಿನದು ಸಿಗುವುದು

$a + 2(7) = 6$

$a + 14 = 6$

$a = 6 - 14 \qquad a = -8$

ix) a = 3, n = 8, Sn = 192 ಆದರೆ d ಕಂಡುಹಿಡಿಯಿರಿ

ಪರಿಹಾರ: ಇಲ್ಲಿ $a = 3$, $n = 8$, $S_n = 192$

ನಮಗೆ ಗೊತ್ತಿರುವಂತೆ

$$S_n = \frac{n}{2}[2a + (n-1)d]$$
$$192 = \frac{8}{2}[2(3) + (8-1)d]$$
$$192 = 4[6 + 7d]$$
$$\frac{192}{4} = 6 + 7d$$
$$48 = 6 + 7d$$
$$48 - 6 = 7d$$
$$42 = 7d$$
$$d = 42/7$$
$$d = 6$$

x) $l = 28$, Sn = 144 ಮತ್ತು ಪದಗಳ ಸಂಖ್ಯೆ 9 ಇದ್ದರೆ a ಕಂಡುಹಿಡಿಯಿರಿ

ಇಲ್ಲಿ $l = 28$, $S_n = 144$, $n = 9$

ನಮಗೆ ಗೊತ್ತಿರುವಂತೆ

$$S_n = \frac{n}{2}[a + l]$$
$$114 = \frac{9}{2}[(a) + 28]$$
$$\frac{(114)(2)}{9} = a + 28$$
$$32 = a + 28$$
$$a + 28 = 32$$
$$a = 32 - 28$$
$$a = 4$$

4) ಮೊತ್ತ 636 ಸಿಗಬೇಕಾದರೆ 9, 17, 25 ... ಈ ಸಮಾಂತರ ಶ್ರೇಢಿಯ ಎಷ್ಟು ಪದಗಳನ್ನು ತೆಗೆದುಕೊಳ್ಳಬೇಕಾಗುತ್ತದೆ?

ಪರಿಹಾರ: ಸಮಾಂತರ ಶ್ರೇಢಿಯ 9, 17, 25, . . .

ಇಲ್ಲಿ a = 9 d = 17 - 9 = 8

$S_n = 636$

$$\frac{n}{2}[2a + (n-1)d] = 636$$
$$\frac{n}{2}[2(9) + (n-1)8] = 636$$
$$n[9 + (n-1)4] = 636$$
$$n[9 + 4n - 4] = 636$$
$$n[4n + 5] = 636$$
$$4n^2 + 5n = 636$$
$$4n^2 + 5n - 636 = 0$$
$$4n^2 + 53n - 48n - 636 = 0$$
$$n(4n + 53) - 12(4n + 53) = 0$$
$$(4n + 53)(n - 12) = 0$$
$$(4n + 53) = 0$$
or
$$(n - 12) = 0$$
$$n = -\frac{53}{4}$$

$n = -\frac{53}{4}$ ಸಮಾಂತರ ಶ್ರೇಢಿಯ n ಪದವಾಗಿ ಸ್ವೀಕರಿಸಲು ಬರುವುದಿಲ್ಲ ಹೀಗಾಗಿ $\therefore n = 12$

ಸಮಾಂತರ ಶ್ರೇಢಿಯ 9, 17, 25, . . . ಮೊತ್ತ 636 ಸಿಗಬೇಕಾದರೆ 12 ಪದಗಳನ್ನು ತೆಗೆದುಕೊಳ್ಳಬೇಕಾಗುತ್ತದೆ

5) ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಪದಗಳ ಸಂಖ್ಯೆ ಮತ್ತು ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ a = 5 $l = 45$ S = 400

ನಮಗೆ ಗೊತ್ತಿರುವಂತೆ

$$S = \frac{n}{2}[a + l]$$
$$400 = \frac{n}{2}[5 + 45]$$
$$400 = \frac{n}{2}[50]$$
$$400 = 25n$$
$$n = \frac{400}{25}$$
$$n = 16$$

ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಪದಗಳ ಸಂಖ್ಯೆ 16

ನಮಗೆ ಗೊತ್ತಿರುವಂತೆ

$$l = a + (n-1)d$$
$$45 = 5 + (16 - 1)d$$
$$45 - 5 = 15d$$
$$15d = 40$$
$$d = 40/15$$
$$d = 8/3$$

ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಸಾಮಾನ್ಯ ವ್ಯತ್ಯಾಸ = 8/3

6) ಒಂದು ಸಮಾಂತರ ಶ್ರೇಢಿಯ ಮೊದಲ ಮತ್ತು ಕೊನೆಯ ಪದಗಳು ಕ್ರಮವಾಗಿ 17 ಮತ್ತು 350 ಆಗಿವೆ. ಸಾಮಾನ್ಯ ವ್ಯತ್ಯಾಸ 9 ಆದರೆ ಪದಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಮೊತ್ತ ಎಷ್ಟು?

ಪರಿಹಾರ: ಇಲ್ಲಿ a = 17 $l = 350$ d = 9

ನಮಗೆ ಗೊತ್ತಿರುವಂತೆ

$$l = a + (n-1)d$$
$$350 = 17 + (n-1)9$$
$$350 - 17 = (n-1)9$$
$$333 = (n-1)9$$
$$(n-1)9 = 333$$
$$n - 1 = 333/9$$
$$n - 1 = 37 \Rightarrow \quad n = 38$$

ಪದಗಳ ಸಂಖ್ಯೆ 38

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

CURRENT ELECTRICITY

23. Write a brief note on the grouping of cells in parallel.

Ans: - Grouping of cells in parallel

(......Contd)

If the combination is connected to an external resistance R, current I flowing through R is given by,


$$I = \frac{E}{(R + r_e)} = \frac{E}{\left\{R + \left(\frac{r}{n}\right)\right\}}$$

$$\therefore I = \frac{nE}{(nR + r)}$$

24. Write a brief note on the grouping of cells in multiple arc.

Ans: - Grouping of cells in multiple arc

An arrangement of n branches of m cells each, sends a current I through an external resistance R.



The total internal resistance in each branch is mr and the effective resistance is given by,

$$\frac{1}{r_e} = \left(\frac{1}{mr}\right) + \left(\frac{1}{mr}\right) + \left(\frac{1}{mr}\right) + \left(\frac{1}{mr}\right) + \ldots n \text{ terms}$$

If there are 'n' cells,

$$\frac{1}{r_e} = \left(\frac{n}{mr}\right) \Rightarrow r_e = \frac{mr}{n}$$

If combination is connected to an external resistance R, current I flowing through R is given by,

$$I = \frac{mE}{\left\{R + \left(\frac{mr}{n}\right)\right\}}$$

(The total emf in the branch is mE)

$$\therefore I = \frac{mnE}{(nR + mr)}$$

For a given number of cells mnE is constant.

Hence, the current I is maximum when nR + mr is minimum. It can be possible when R = mr /n.

Hence the current drawn from a set of cells in multiple arc will be a maximum when the external resistance is equal to the effective internal resistance of the combination of cells.

25. What is a thermistor? How is it manufactured?

Ans:- A thermistor is a heat sensitive resistor. It is a non–ohmic device. It is usually made of a semi conducting material. Its resistance varies appreciably with small changes in temperature.

They are manufactured by heating the embedded oxides of manganese, iron, cobalt and nickel in ceramic binders to very high temperatures to form a hard mass. They are shaped into the form of beads, discs or rods and enclosed in capsules with epoxy surface. A pair of platinum wires is fused into the capsule for making electrical connections.

The size of the thermistor is very small. It may have resistance - ranging from 0.1Ω to 10 MΩ depending upon its composition. It can be used over a wide range of temperatures from as small a value as 10 K to as high values of 1400 K.

The change in the resistance of a thermistor can be caused by –

(i) a change in temperature of the surroundings (or)

(ii) the heat dissipated in it when current flows through it.

26. What are the uses of thermistors?

Ans:- The uses of the thermistors are –

(1) Thermistors are used as resistance thermometers to measure very low temperatures.
(2) To detect small temperature change.
(3) To protect electronic equipments against surge currents when the supply voltage is switched on.
(4) In vacuum gauges, time- delay switches, voltage regulators, temperature control units (thermostats), microwave detectors etc.,
(5) To measure altitude and wind velocity.
(6) To protect the windings of motors, generators and transformers.
(7) To safeguard the heater of the picture tube of a television set against voltage and current fluctuations.
(8) In remote sensing.

27. What are the uses of superconductors?

Ans:- The uses of superconductors are -

(1) They are used in making large electromagnets.
(2) They are used in the construction of the super conducting magnets which produce high magnetic fields, greater than several Tesla.
(3) They are used in super conducting power line for efficient transmission and distribution of electrical power.

(Contd......)

‘ಸಂತ್ರಸ್ತರಿಗೆ ಮನೆ ನಿರ್ಮಾಣ’

ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ಬಳಿಕ ಮುಖ್ಯಮಂತ್ರಿ ಭರವಸೆ

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ‘ಮಳೆಯಿಂದ ಸಂಪೂರ್ಣ ಮನೆ ಹಾನಿ ಸಂಭವಿಸಿದ ಸಂತ್ರಸ್ತರಿಗೆ ತಲಾ ₹1.20 ಲಕ್ಷ, ಭಾಗಶಃ ಹಾನಿಯಾಗಿದ್ದರೆ ₹50 ಸಾವಿರ ಪರಿಹಾರ ನೀಡಲಾಗುವುದು. ಪೂರ್ಣ ಮನೆ ನಾಶವದವರಿಗೆ ಮನೆ ಕೂಡ ನಿರ್ಮಿಸಿಕೊಡಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಘಟಪ್ರಭಾ ನದಿ ಪ್ರವಾಹ ಬಾಧಿತ ಪ್ರದೇಶಗಳಿಗೆ ಸೋಮವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪದೇ ಪದೇ ಪ್ರವಾಹಕ್ಕೆ ಸಿಲುಕುವ ಸಂತ್ರಸ್ತರು ಸ್ಥಳಾಂತರಕ್ಕೆ ಒಪ್ಪಿದರೆ, ಬೇರೆ ಕಡೆ ಮನೆ ಕಟ್ಟಿಸಿಕೊಡುತ್ತೇವೆ. ಇಲ್ಲದಿದ್ದರೆ, ಹಳೆ ಮನೆ ಬಿದ್ದ ಜಾಗದಲ್ಲೇ ವಸತಿ ಯೋಜನೆಯಡಿ ಹೊಸ ಮನೆ ಕಟ್ಟಿಸಿ-ಕೊಡುತ್ತೇವೆ’ ಎಂದರು. ಗೋಕಾಕ, ಚಿಕ್ಕೋಡಿ, ಕಾಗವಾಡ ತಾಲ್ಲೂಕಿನ ಪ್ರವಾಹ ಪೀಡಿತ ಸ್ಥಳಗಳಿಗೂ ಭೇಟಿ ನೀಡಿದರು.

‘ಯಡಿಯೂರಪ್ಪ ತಟ್ಟೆಯಲ್ಲಿ ಕತ್ತೆ ಸತ್ತು ಬಿದ್ದಿದೆ’: ‘ಯಡಿಯೂರಪ್ಪ ನನ್ನ ತಟ್ಟೆಯಲ್ಲಿ ನೊಣ ಹುಡುಕುತ್ತಿದ್ದಾರೆ. ಅವರ ತಟ್ಟೆಯಲ್ಲಿ ಹೆಗ್ಗಣ ಅಷ್ಟೇ ಅಲ್ಲ, ಕತ್ತೆಯೇ ಸತ್ತು ಬಿದ್ದಿದೆ. ಅಂಥವರಿಗೆ ನನ್ನ ರಾಜೀನಾಮೆ ಕೇಳುವ ಹಕ್ಕು ಇದೆಯೇ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

‘ಯಡಿಯೂರಪ್ಪ ಅವರೇ ಸ್ವತಃ ಪೋಕ್ಸೊ ಪ್ರಕರಣದಲ್ಲಿ ಸಿಕ್ಕಿಕೊಂಡಿದ್ದು, ಚಾರ್ಜ್‌ಶೀಟ್ ಸಲ್ಲಿಕೆ ಆಗಿದೆ. ಜಾಮೀನು ಸಿಕ್ಕಿದ್ದಕ್ಕೆ ಹೊರಗಿದ್ದಾರೆ. ಇಲ್ಲದಿದ್ದರೆ ಜೈಲಿನಲ್ಲಿ ಇರಬೇಕಿತ್ತು’ ಎಂದು ಅವರು ಹೇಳಿದರು.

‘ರಾಜಕೀಯ ಕಾನೂನಾತ್ಮಕ ಹೋರಾಟ’: ಬೆಳಗಾವಿಯಲ್ಲಿ ಸುದ್ದಿಗಾರರ ಜೊತೆ ಸಿದ್ದರಾಮಯ್ಯ ಅವರು ಮಾತನಾಡಿ, ‘ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿಯ ಆರೋಪದ ವಿರುದ್ಧ ಕಾನೂನಾತ್ಮಕ ಮತ್ತು ರಾಜಕೀಯ ಹೋರಾಟಕ್ಕೆ ನಾವು ಸಿದ್ಧವಾಗಿದ್ದೇವೆ. ರಾಜ್ಯಪಾಲರು ಕೊಟ್ಟ ಷೋಕಾಸ್ ನೋಟಿಸ್ ಹಿಂಪಡೆದು, ಅಬ್ರಹಾಂ ಕೊಟ್ಟ ದೂರು ತಿರಸ್ಕರಿಸಲು ಹೇಳಿದ್ದೇವೆ’ ಎಂದರು.



ಬೆಳಗಾವಿ ಜಿಲ್ಲೆಯ ಗೋಕಾಕದ ಸರ್ಕಾರಿ ಮುನ್ಸಿಪಲ್ ಕಾಲೇಜಿನಲ್ಲಿ ತೆರೆದ ಕಾಳಜಿ ಕೇಂದ್ರಕ್ಕೆ ಸೋಮವಾರ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತ್ರಸ್ತರ ಸಮಸ್ಯೆ ಆಲಿಸಿದರು. ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಾಜರಿದ್ದರು — ಪ್ರಜಾವಾಣಿ ಚಿತ್ರ

ರೈಲು ಹಳಿ ದುರಸ್ತಿ ಬಹುತೇಕ ಪೂರ್ಣ

ಹಾಸನ: ಬೆಂಗಳೂರು-ಮಂಗಳೂರು ಮಾರ್ಗದ ಯಡಕುಮೇರಿ ಮತ್ತು ಕಡಗರವಳ್ಳಿ ಮಧ್ಯೆ ರೈಲ್ವೆ ಹಳಿ ಬಳಿ ಭೂಕುಸಿತವಾಗಿದ್ದ ಸ್ಥಳದಲ್ಲಿ ದುರಸ್ತಿ ಕಾಮಗಾರಿ ಪೂರ್ಣಗೊಳ್ಳುವ ಹಂತಕ್ಕೆ ತಲುಪಿದೆ.

ಹಳಿ ಕೆಳಗೆ ಸುಮಾರು 500 ಮೀಟರ್ ಆಳಕ್ಕೆ ಕುಸಿದಿದ್ದ ಮಣ್ಣನ್ನು ತೆರವು-ಗೊಳಿಸಲಾಗಿದ್ದು, ಕಲ್ಲಿನಿಂದ ಕ್ರಿಬ್ ಗೋಡೆ ನಿರ್ಮಿಸಲಾಗಿದೆ. ಹಳಿಯ ಪಕ್ಕದಲ್ಲಿ ತಡೆಗೋಡೆ ನಿರ್ಮಾಣ ಭರದಿಂದ ಸಾಗಿದೆ.

ಜುಲೈ 26ರಿಂದ ಈ ಮಾರ್ಗದಲ್ಲಿ ರೈಲುಗಳ ಸಂಚಾರ ಸ್ಥಗಿತವಾಗಿತ್ತು.

‘ಸತತ ಕಾರ್ಯಾಚರಣೆಯ ಬಳಿಕ ದುರಸ್ತಿ ಬಹುತೇಕ ಪೂರ್ಣಗೊಂಡಿದೆ. ಆಗಸ್ಟ್ 8ರವರೆಗೆ ಈ ಮಾರ್ಗದ ರೈಲುಗಳ ಸಂಚಾರ ರದ್ದುಗೊಳಿಸಲಾಗಿದ್ದು, ಆಗಸ್ಟ್ 9ರಿಂದ ಆರಂಭವಾಗುವ ಸಾಧ್ಯತೆ ಇದೆ’ ಎಂದು ನೈರುತ್ಯ ರೈಲ್ವೆ ಮೂಲಗಳು ತಿಳಿಸಿವೆ.

> **ಬಿಜೆಪಿಯವರಿಗೆ ಆರ್‌ಎಸ್‌ಎಸ್‌ನಲ್ಲಿ ಸುಳ್ಳು ಹೇಳುವ ತರಬೇತಿ ನೀಡಲಾಗಿದೆ. ಬಾಯಿ ಬಿಟ್ಟರೆ ಸರ್ಕಾರದ ಬಗ್ಗೆ ಬರೀ ಸುಳ್ಳು ಹೇಳುತ್ತಾರೆ**
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

‘ಗುಡ್ಡ ಕುಸಿತ ತಡೆಗೆ ₹300 ಕೋಟಿ’

ಶಿವಮೊಗ್ಗ: ‘ರಾಜ್ಯದ ಮಲೆನಾಡು ಭಾಗದಲ್ಲಿ ಗುಡ್ಡ ಕುಸಿತ ಉಂಟಾಗಬಹುದಾದ ಸ್ಥಳಗಳನ್ನು ಗುರುತಿಸಲಾಗಿದೆ. ಅದನ್ನು ತಡೆಯಲು ಮುಂದಿನ ಎರಡು ವರ್ಷಗಳಲ್ಲಿ ₹300 ಕೋಟಿ ವ್ಯಯಿಸಲಿದ್ದೇವೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಲಕ್ಕವಳ್ಳಿಯ ಭದ್ರಾ ಜಲಾಶಯಕ್ಕೆ ಸೋಮವಾರ ಭೇಟಿ ನೀಡಿದ್ದ ಅವರು, ‘ಈ ಬಾರಿಯ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ 55,000 ಹೆಕ್ಟೇರ್ ಬೆಳೆ ಹಾನಿಯಾಗಿದೆ. 58 ಮಂದಿ ಸಾವಿಗೀಡಾಗಿದ್ದಾರೆ. ಬೆಳೆ ಹಾನಿ ಹಾಗೂ ಪ್ರಕೃತಿ ವಿಕೋಪದಿಂದ ಸಾವಿಗೀಡಾದವರ ಕುಟುಂಬಗಳಿಗೆ ತಕ್ಷಣ ಪರಿಹಾರ ನೀಡುವಂತೆ ಆಯಾ ಜಿಲ್ಲಾಧಿಕಾರಿಗೆ ಸೂಚನೆ ಕೊಟ್ಟಿದ್ದೇನೆ. ಪರಿಹಾರ ಕಾರ್ಯ ಕೈಗೊಳ್ಳಲು ಹಣದ ಕೊರತೆ ಇಲ್ಲ. ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಒಟ್ಟು ₹767 ಕೋಟಿ ಹಣ ಮೀಸಲಿದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

ನಲುಗಿದ ನೆಲದಲ್ಲಿ ...

ಒಂದನೇ ಪುಟದಿಂದ...

ಮಣ್ಣಿನಡಿಯಲ್ಲೂ ಬಂಡೆಗಳ ಎಡೆಯಲ್ಲೂ ಕಾಡಿನ ಅಂಚಿನಲ್ಲೂ ನದಿಯ ಒಡಲಿನಲ್ಲೂ ಸಿಕ್ಕಿದ್ದ ಈ ಮೃತದೇಹಗಳು ಈಗ ಮತ್ತೊಂದು ದುರಂತ ಭೂಮಿಯನ್ನು ಸೇರಿವೆ.

ಮಾಹಿತಿಗೆ ಡಿಎನ್‌ಎ ಮಾದರಿ ಸಂಖ್ಯೆ: ದುರಂತ ಸಂಭವಿಸಿದ ಚೂರಲ್‌ಮಲ ಭಾಗಕ್ಕೆ ಮೇಪ್ಪಾಡಿ ಪಟ್ಟಣದಿಂದ ಹೋಗುವ ಹಾದಿಯ ಸುಮಾರು ಎಂಟು ಕಿಲೊಮೀಟರ್ ದೂರದಲ್ಲಿ ಈ ಜಾಗವಿದೆ. ಮಣ್ಣು ಮಾಡಿರುವ ಜಾಗದಲ್ಲಿ ಪ್ರತಿ ಮೃತದೇಹ ಮತ್ತು ದೇಹದ ಭಾಗಗಳ ಜಾಗದಲ್ಲಿ ಸಿಮೆಂಟ್ ಕಲ್ಲೊಂದನ್ನು ಇರಿಸಲಾಗಿದ್ದು ಅದರಲ್ಲಿ ಡಿಎನ್‌ಎ ಮಾದರಿಯ ಮಾಹಿತಿಗೆ ಸಂಬಂಧಿಸಿದ ಸಂಖ್ಯೆಯೊಂದನ್ನು ನಮೂದಿಸಲಾಗಿದೆ.

> **2019ರಲ್ಲಿ ಸಂಭವಿಸಿದ ದುರಂತದಲ್ಲಿ 17 ಜನರು ಸಾವಿಗೀಡಾಗಿದ್ದರು. ಕಾಫಿ, ಚಹಾ ಮತ್ತು ಏಲಕ್ಕಿ ತೋಟವೂ ಇಲ್ಲದಾಗಿತ್ತು**
> **ಮುತ್ತಲಿಬ್ ತಾಳಿಲೋಡ್**
> ಸ್ಥಳೀಯ ವ್ಯಾಪಾರಿ

ಆಭರಣಗಳು ಮತ್ತು ಅದರ ಚಿತ್ರವನ್ನು ತೆಗೆದಿರಿಸಲಾಗಿದ್ದು ಭವಿಷ್ಯದಲ್ಲಿ ಯಾರಾದರೂ ಇದು ತಮ್ಮವರದು ಎಂದು ಸಾಬೀತು ಮಾಡಿದರೆ ಇಲ್ಲಿಂದ ಶವವನ್ನು ಎತ್ತಿ ತಮ್ಮ ಧರ್ಮದ ಆಚಾರದ ಪ್ರಕಾರ ಅಂತಿಮ ಸಂಸ್ಕಾರ ಮಾಡಲು ಅವಕಾಶವಿದೆ. ಇದಕ್ಕೆ ಡಿಎನ್‌ಎ ಹೊಂದಿಕೆಯಾಗಬೇಕು.

ಕೊನೆಯ ಕ್ಷಣದಲ್ಲಿ ಗುರುತು ಪತ್ತೆ: ಗುರುತು ಪತ್ತೆಯಾಗದ 8 ಮೃತದೇಹಗಳನ್ನು ಭಾನುವಾರ ಮತ್ತು 29 ಮೃತದೇಹಗಳನ್ನು ಸೋಮವಾರ ಮಣ್ಣುಮಾಡಲಾಯಿತು. ಒಟ್ಟು 164 ಅಂಗಾಗಗಳೂ ಇಲ್ಲಿ ಮಣ್ಣು ಸೇರಿದವು. ಭಾನುವಾರ ಪುತ್ತುಮಲ ಪ್ರದೇಶಕ್ಕೆ ತರಲು ಸಜ್ಜು ಮಾಡಿದ್ದ ಒಂದು ಮೃತದೇಹದ ಗುರುತನ್ನು ಕೊನೆಯ ಕ್ಷಣದಲ್ಲಿ ಸಂಬಂಧಿಕರು ಪತ್ತೆ ಮಾಡಿದ್ದು ಅದನ್ನು ಅವರಿಗೆ ಹಸ್ತಾಂತರಿಸಲಾಯಿತು.

> **ತೀರಿಹೋದವರೆಲ್ಲರೂ ಚೂರಲ್‌ಮಲ, ಮುಂಡಕ್ಕೈ ಭಾಗದವರು. ಅಲ್ಲಿನ ಜನರಿಗೆ ಗೌರವ ಸಲ್ಲಿಸಲು ಅನುಕೂಲ ಆಗಲೆಂದು ಈ ಜಾಗ ಆಯ್ಕೆ ಮಾಡಲಾಗಿದೆ**
> **ನಾಸರ್**
> ಮೇಪ್ಪಾಡಿ ಗ್ರಾ.ಪಂ ಸ್ಥಾಯಿ ಸಮಿತಿ ಸದಸ್ಯ

‘ಗಣಿಗಾರಿಕೆಯೇ ದುರಂತಕ್ಕೆ ಕಾರಣ’


ನವದೆಹಲಿ (ಪಿಟಿಐ): ‘ಕೇರಳ ಸರ್ಕಾರವು ಸೂಕ್ಷ್ಮ ಪ್ರದೇಶಗಳಲ್ಲಿ ಮಾನವ ವಾಸಸ್ಥಾನದ ಅಕ್ರಮ ವಿಸ್ತರಣೆ ಮತ್ತು ಗಣಿಗಾರಿಕೆಗೆ ಅವಕಾಶ ನೀಡಿರುವುದೇ ಭೂಕುಸಿತಕ್ಕೆ ಕಾರಣ’ ಎಂದು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಅವರು ಸೋಮವಾರ ಹೇಳಿದರು.

ವಯನಾಡ್ ದುರಂತಕ್ಕೆ ಅಕ್ರಮ ಒತ್ತುವರಿ ಕಾರಣವಾಗಿದ್ದರೆ ಕಠಿಣ ಕ್ರಮ ಕೈಗೊಳ್ಳಬೇಕು. ಆದರೆ ಸದ್ಯ ಸಂತ್ರಸ್ತರು ದೈಹಿಕವಾಗಿ, ಮಾನಸಿಕವಾಗಿ ಕುಗ್ಗಿದ್ದು ಅವರತ್ತ ಹೆಚ್ಚು ಗಮನ ನೀಡಬೇಕಾದ ಅಗತ್ಯವಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ಶಶಿ ತರೂರ್ ಅವರು ಈ ಮಾತಿಗೆ ಪ್ರತಿಕ್ರಿಯಿಸಿದರು.

'ದಿ ರಾಮೇಶ್ವರಂ ಕೆಫೆ' ಬಾಂಬ್ ಸ್ಫೋಟ ಪ್ರಕರಣ: ಎನ್ಐಎ ತನಿಖೆ ಚುರುಕು

ಶಂಕಿತ ಉಗ್ರನ ಕರೆತಂದು ಸನ್ನಿವೇಶ ಮರುಸೃಷ್ಟಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೆಫೆ ಬಾಂಬ್ ಸ್ಫೋಟ ಪ್ರಕರಣದ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ಅಧಿಕಾರಿಗಳು, ಸೋಮವಾರ 'ದಿ ರಾಮೇಶ್ವರಂ ಕೆಫೆ'ಯಲ್ಲಿ ಸ್ಥಳ ಮಹಜರು ನಡೆಸಿದರು. ಬಂಧಿತ ಶಂಕಿತ ಉಗ್ರ ಮುಸಾವೀರ್ ಹುಸೇನ್ ಶಾಜೀಬ್‌ನನ್ನು ಕರೆತಂದು ಮುಸಾವೀರ್ ಸನ್ನಿವೇಶ ಮರುಸೃಷ್ಟಿಸಿ ಸ್ಥಳದಲ್ಲೇ ಹೇಳಿಕೆ ದಾಖಲು ಮಾಡಿಕೊಳ್ಳಲಾಯಿತು.

ನಗರದ ಬ್ರೂಕ್‌ಫೀಲ್ಡ್‌ನಲ್ಲಿರುವ ಕೆಫೆಯಲ್ಲಿ ಮಾರ್ಚ್ 1ರಂದು ಬಾಂಬ್ ಸ್ಫೋಟಿಸಲಾಗಿತ್ತು. ಬಾಂಬ್ ಇರಿಸಿದ್ದ ತೀರ್ಥಹಳ್ಳಿಯ ಮುಸಾವೀರ್ ಹಾಗೂ ಅಬ್ದುಲ್ ಮತೀನ್ ತಲೆಮರೆಸಿಕೊಂಡಿದ್ದರು. ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 12ರಂದು ಕಾರ್ಯಾಚರಣೆ ನಡೆಸಿ ಇಬ್ಬರನ್ನೂ ಬಂಧಿಸಲಾಗಿತ್ತು. ಬಂಧನವಾದ ಐದು ತಿಂಗಳ ನಂತರ ಕೆಫೆಗೆ ಮುಸಾವೀರ್‌ನನ್ನು ಕರೆತಂದು ಮಹಜರು ನಡೆಸಲಾಯಿತು. ತನಿಖಾ ತಂಡವು ಇಡೀ ದಿನ ವಿವಿಧ ಮಾಹಿತಿಯನ್ನು ಕಲೆ ಹಾಕಿತು.

'ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸುವ ಬಗ್ಗೆ ಅಬ್ದುಲ್ ಮತೀನ್ ಸಂಚು ರೂಪಿಸಿದ್ದ. ಯಾವ ಬಾಂಬ್ ಇರಿಸಬೇಕು? ಯಾವ ಸಮಯದಲ್ಲಿ ಇರಿಸಬೇಕು ಎಂಬುದರ ಬಗ್ಗೆ ಸಿದ್ಧತೆ ಮಾಡಿಕೊಂಡಿದ್ದ. ಮುಸಾವೀರ್‌ಗೆ ವಿಷಯ ತಿಳಿಸಿ, ಬಾಂಬ್ ಇಟ್ಟು ಬರುವಂತೆ ಸೂಚಿಸಿದ್ದ. ನಂತರ, ಇಬ್ಬರೂ ಸೇರಿ ಕಚ್ಚಾ ಬಾಂಬ್ (ಐಇಡಿ) ತಯಾರಿಸಿದ್ದರು. ಅದನ್ನು ಮುಸಾವೀರ್, ರಾಮೇಶ್ವರಂ ಕೆಫೆಯಲ್ಲಿ ಮಾರ್ಚ್ 1ರಂದು ಇರಿಸಿ ಪರಾರಿಯಾಗಿದ್ದ. ಬಳಿಕ ಬಾಂಬ್ ಸ್ಫೋಟಗೊಂಡು ಕೆಫೆಯಲ್ಲಿದ್ದ ಗ್ರಾಹಕರು ಹಾಗೂ ಸಿಬ್ಬಂದಿ ಸೇರಿ 9 ಮಂದಿ ಗಾಯಗೊಂಡಿದ್ದರು' ಎಂದು ಎನ್ಐಎ ಮೂಲಗಳು ಹೇಳಿವೆ.

'ಶಂಕಿತ ಉಗ್ರ ಅಂದು ತಲೆ ಕಪ್ಪು ಬಣ್ಣದ ಕ್ಯಾಪ್, ಕನ್ನಡಕ ಧರಿಸಿ ಬಂದಿದ್ದ. ಬ್ಯಾಗ್ ಹಾಕಿಕೊಂಡಿದ್ದ. ವಿಂಟೇಜ್ ಬಸ್‌ನಲ್ಲಿ ಬಂದು ಬಾಂಬ್ ಇರಿಸಿ ಪರಾರಿಯಾಗಿದ್ದ. ಮಹಜರು ವೇಳೆ ಅದೇ ರೀತಿ ನಟಿಸುವಂತೆ ಬಂದು ತನಿಖಾಧಿಕಾರಿಗಳಿಗೆ ತೋರಿಸಿದ್ದಾನೆ. ಬಾಂಬ್ ಇರಿಸಿದ್ದ ಸ್ಥಳ, ಕುಳಿತಿದ್ದ ಟೇಬಲ್ ಜಾಗವನ್ನು ತೋರಿಸಿದ್ದಾನೆ. ಮೂರು ಬಾರಿ ಸನ್ನಿವೇಶವನ್ನು ಮರುಸೃಷ್ಟಿಸಲಾಗಿತ್ತು. ಎಲ್ಲವನ್ನೂ ವಿಡಿಯೊ ರೆಕಾರ್ಡ್ ಮಾಡಿಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಹಲವು ಕಡೆ ಸ್ಥಳ ಮಹಜರು



ಶಂಕಿತ ಉಗ್ರನ ಕರೆತಂದು ಸನ್ನಿವೇಶ ಮರು ಸೃಷ್ಟಿಸಲಾಯಿತು

ಕೆಫೆಯಲ್ಲಿ ಬಾಂಬ್ ಇಟ್ಟ ಬಳಿಕ ಪಶ್ಚಿಮ ಬಂಗಾಳಕ್ಕೆ ಶಂಕಿತರು ಪರಾರಿಯಾಗಿದ್ದರು. ಅಲ್ಲಿ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದರು. ಎರಡು ದಿನ ಬಿಟ್ಟು ಹೋಟೆಲ್ ಕೊಠಡಿ ಖಾಲಿ ಮಾಡಿ ಗಡಿ ಮೂಲಕ ಬಾಂಗ್ಲಾದೇಶಕ್ಕೆ ಹೋಗಲು ತಯಾರಿ ನಡೆಸುತ್ತಿದ್ದರು. ಅಲ್ಲೂ ಎಲ್ಲ ಮಾಹಿತಿ ಕಲೆ ಹಾಕಲಾಗಿದೆ ಎಂದು ಮೂಲಗಳು ಹೇಳಿವೆ.

ಸ್ಥಳದಲ್ಲಿ ಬಂದೋಬಸ್ತ್

ಮಹಜರು ವೇಳೆ ಕೆಫೆಗೆ ಗ್ರಾಹಕರ ಪ್ರವೇಶಕ್ಕೆ ಅವಕಾಶ ಇರಲಿಲ್ಲ. ಕೆಫೆ ಬಳಿ ಪೊಲೀಸ್ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಭದ್ರತಾ ವೈಟ್‌ಫೀಲ್ಡ್ ವಿಭಾಗದ 50ಕ್ಕೂ ಅಧಿಕ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು.

ನರ್ಸಿಂಗ್ ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಧನ್ವಂತರಿ ನರ್ಸಿಂಗ್ ಕಾಲೇಜಿನ ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿನಿ ಜಿ. ಅತುಲ್ಯ ಭಾನುವಾರ ಹಾಸ್ಟೆಲ್‌ನ ಆರನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೇರಳದ ಯುವತಿ ಅತುಲ್ಯ ಒಂದೂವರೆ ತಿಂಗಳ ಹಿಂದೆ ಕಾಲೇಜು ಸೇರಿದ್ದರು. 'ಕಾಲೇಜು ವಾತಾವರಣ ಇಷ್ಟವಾಗುತ್ತಿಲ್ಲ, ವಾಪಸ್ ಊರಿಗೆ ಕರೆದುಕೊಂಡು ಹೋಗಿ' ಎಂದು ತಾಯಿಗೆ ಆಗಾಗ್ಗೆ ಕರೆ ಮಾಡಿ ಹೇಳುತ್ತಿದ್ದರು. 'ಕಾಲೇಜು ಶುಲ್ಕ ಪಾವತಿಸಲಾಗಿದೆ. ಸ್ವಲ್ಪ ದಿನ ಕಳೆದರೆ ಸರಿ ಹೋಗುತ್ತದೆ' ಎಂದು ತಾಯಿ ಸಮಾಧಾನ ಪಡಿಸಿದ್ದರು. ಇದರಿಂದ ಅಸಮಾಧಾನಗೊಂಡಿದ್ದ ಅತುಲ್ಯ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಕುಟುಂಬದವರು ಕೇರಳಕ್ಕೆ ತೆಗೆದುಕೊಂಡು ಹೋದರು.

ವಿದ್ಯಾರ್ಥಿವೇತನಕ್ಕೆ ಆಗ್ರಹಿಸಿ ಪ್ರತಿಭಟನೆ

ಕಟ್ಟಡ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ನೀಡುವ ಶೈಕ್ಷಣಿಕ ಸಹಾಯಧನವನ್ನು ಕೂಡಲೇ ಬಿಡುಗಡೆಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಟ್ಟಡ ಕಾರ್ಮಿಕ ಸಂಘಟನೆಗಳ ಸಮನ್ವಯ ಸಮಿತಿಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

'ಕಾರ್ಮಿಕ ಇಲಾಖೆಯ ವಿವಿಧ ಯೋಜನೆಗಳ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಗಳಿಗೆ ಮಂಜೂರಾಗಿದೆ. ಆದರೆ, ಫಲಾನುಭವಿಗಳ ಬ್ಯಾಂಕ್ ಖಾತೆಗೆ ಸಹಾಯಧನ ಜಮೆ ಆಗಿಲ್ಲ. ಇಲಾಖೆಯಲ್ಲಿ ಇಂತಹ ಸಾವಿರಾರು ಪ್ರಕರಣಗಳಿದ್ದು, ಫಲಾನುಭವಿಗಳ ಖಾತೆಗೆ ಕೂಡಲೇ ಹಣ ಜಮೆ ಮಾಡಬೇಕು. ಪಿಂಚಣಿ ಅರ್ಜಿಗಳನ್ನು ತಕ್ಷಣ ವಿಲೇವಾರಿ ಮಾಡುವುದರ ಜೊತೆಗೆ ವಾರ್ಷಿಕವಾಗಿ ₹500 ಹೆಚ್ಚಿಸಬೇಕು. ಕುಟುಂಬ ಪಿಂಚಣಿಗೆ ಆನ್‌ಲೈನ್ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಕಾರ್ಮಿಕ ಇಲಾಖೆಯಿಂದ ನೀಡುವ ವೈದ್ಯಕೀಯ ಪರಿಹಾರ ಮೊತ್ತವನ್ನು ₹5 ಲಕ್ಷದವರೆಗೆ ಹೆಚ್ಚಿಸಬೇಕು. ಸಹಜವಾಗಿ ಮರಣ ಹೊಂದುವ ಫಲಾನುಭವಿಗಳ ಪರಿಹಾರ ಮೊತ್ತವನ್ನು ₹75 ಸಾವಿರದಿಂದ ₹2 ಲಕ್ಷಕ್ಕೆ ಹೆಚ್ಚಿಸಬೇಕು. ಲ್ಯಾಪ್‌ಟಾಪ್, ಪ್ಯಾಡ್ ಖರೀದಿಸಲಾಗಿದೆ. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರವಾಗಿದೆ. ನ್ಯಾಯಾಂಗ ತನಿಖೆ ನಡೆಸಬೇಕು. ಇಲಾಖೆಯಲ್ಲಿ ಟೆಂಡರ್ ಆಧಾರಿತ ಖರೀದಿಯನ್ನು ಸ್ಥಗಿತಗೊಳಿಸಬೇಕು' ಎಂದು ಒತ್ತಾಯಿಸಿದರು.

ಎಐಟಿಯುಸಿ ರಾಜ್ಯ ಸಮಿತಿ ಅಧ್ಯಕ್ಷ ಎಚ್.ಜಿ. ಉಮೇಶ್, ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್, ಎನ್‌ಸಿಎಲ್‌ನ ಅಧ್ಯಕ್ಷ ಎನ್.ಪಿ. ಸಾಮಿ, ಲೀಲಾವತಿ, ಗಿರೀಶ್ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ನೂರಾರು ಕಾರ್ಮಿಕರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಕಟ್ಟಡ ಕಾರ್ಮಿಕ ಸಂಘಟನೆಗಳ ಸಮನ್ವಯ ಸಮಿತಿಯ ಸದಸ್ಯರು ಭಾಗವಹಿಸಿದ್ದರು — ಪ್ರಜಾವಾಣಿ ಚಿತ್ರ

'ಪಿಎಸ್‌ಐ ಆತ್ಮಹತ್ಯೆ ಪ್ರಕರಣ ಸಿಬಿಐಗೆ ವಹಿಸಿ'

ಬೆಂಗಳೂರು: ಯಾದಗಿರಿ ಪೊಲೀಸ್ ಠಾಣೆಯ ಪಿಎಸ್‌ಐ ಪರಶುರಾಮ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

'ಕಾಂಗ್ರೆಸ್ ಶಾಸಕ ಚನ್ನಾರೆಡ್ಡಿ ಪಾಟೀಲ, ಅವರ ಮಗ ಪಂಪನಗೌಡ ಅವರನ್ನು ಕೂಡಲೇ ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಬೇಕು. ಆರೋಪಿಗಳಿಗೆ ಜಾಮೀನು ನೀಡಬಾರದು' ಎಂದು ಪ್ರತಿಭಟನಕಾರರು ಆಗ್ರಹಿಸಿದರು. 'ಪಿಎಸ್‌ಐ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡುವುದರ ಜೊತೆಗೆ ಪೊಲೀಸ್ ರಕ್ಷಣೆ ಒದಗಿಸಬೇಕು. ಪರಶುರಾಮ ಅವರ ಪತ್ನಿ ಶ್ವೇತಾ ಅವರಿಗೆ ಸರ್ಕಾರಿ ಉದ್ಯೋಗ ನೀಡಬೇಕು. ವರ್ಗಾವಣೆಗೆ ಲಂಚದ ಬೇಡಿಕೆ ಇರಿಸಿದ ಆರೋಪಿಗಳಾದ ಶಾಸಕ ಮತ್ತು ಅವರ ಪುತ್ರನನ್ನು ಬಂಧಿಸಿ, ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿದರು.

'ವಾಲ್ಮೀಕಿ ನಿಗಮದ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡಿದ್ದರು. ಕನಕಪುರ ತಾಲ್ಲೂಕಿನ ಮಾಳಗಾಳದಲ್ಲಿ ಈಚೆಗೆ ದಲಿತ ಯುವಕನೊಬ್ಬನ ಕೈ ಕತ್ತರಿಸಲಾಗಿತ್ತು. ಈಗ ಪರಶುರಾಮ ಆತ್ಮಹತ್ಯೆ ಮಾಡಿಕೊಂಡಿರುವುದರಿಂದ ಸಮುದಾಯ ಆತಂಕಕ್ಕೆ ಒಳಗಾಗಿದೆ. ಆದ್ದರಿಂದ, ಮುಖ್ಯಮಂತ್ರಿ ಅವರು ಕೂಡಲೇ ದಲಿತ ಸಂಘಟನೆಗಳ ಮುಖಂಡರೊಂದಿಗೆ ರಾಜ್ಯಮಟ್ಟದ ಸಭೆ ಆಯೋಜಿಸಿ, ದಲಿತರಿಗೆ ರಕ್ಷಣೆ ಒದಗಿಸುವ ಭರವಸೆ ನೀಡಬೇಕು' ಎಂದು ಹೇಳಿದ್ದಾರೆ.

ಕ್ರಾಂತಿ ಸೇನೆ ಆಗ್ರಹ

'ಪಿಎಸ್‌ಐ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು' ಎಂದು ಅಂಬೇಡ್ಕರ್ ಮಾನವ ಹಕ್ಕುಗಳ ಕ್ರಾಂತಿ ಸೇನೆ ಆಗ್ರಹಿಸಿದೆ. ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸೇನೆಯ ರಾಜ್ಯ ಘಟಕದ ಅಧ್ಯಕ್ಷ ಕ್ರಾಂತಿ ರಾಜು, 'ಇತ್ತೀಚೆಗೆ ರಾಜ್ಯದಲ್ಲಿ ದಲಿತ ಸಮುದಾಯದ ಅಧಿಕಾರಿಗಳು ಭ್ರಷ್ಟಾಚಾರದ ವಿರುದ್ಧ ಸೆಣಸಲು ಆಗದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಿರಂತರವಾಗಿ ದಲಿತರ ಮೇಲೆ ಜಾತಿ ನಿಂದನೆ ಹಾಗೂ ದೌರ್ಜನ್ಯಗಳು ನಡೆಯುತ್ತಿವೆ' ಎಂದು ದೂರಿದರು.

'ಲಂಚದ ಬೇಡಿಕೆ ಇರಿಸಿದ್ದ ಶಾಸಕ ಚನ್ನಾರೆಡ್ಡಿ ಪಾಟೀಲ ಮತ್ತು ಅವರ ಮಗನನ್ನು ಕೂಡಲೇ ಬಂಧಿಸಬೇಕು. ಇಲ್ಲದಿದ್ದರೆ, ದಲಿತ ಸಮುದಾಯ ಮುಖಂಡರು, ಕನ್ನಡ ಪರ ಹೋರಾಟಗಾರರ ನೇತೃತ್ವದಲ್ಲಿ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದರು.

ಮದ್ಯ ಸೇವಿಸಿ ಶಾಲಾ ವಾಹನ ಚಾಲನೆ: 72 ಚಾಲಕರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಸೇವಿಸಿ ಬಸ್ ಸೇರಿದಂತೆ ಶಾಲಾ ವಾಹನಗಳನ್ನು ಚಾಲನೆ ಮಾಡುತ್ತಿರುವ ಚಾಲಕರ ವಿರುದ್ಧ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದು, ಒಟ್ಟು 72 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜನವರಿಯಿಂದ ಈವರೆಗೆ ಒಟ್ಟು 12,165 ವಾಹನಗಳ ತಪಾಸಣೆ ನಡೆಸಲಾಗಿದೆ ಎಂದು ನಗರದ ಸಂಚಾರ ವಿಭಾಗದ ಪೊಲೀಸರು ಮಾಹಿತಿ ನೀಡಿದ್ದಾರೆ.

ಜ.23ರಂದು 3,414 ವಾಹನಗಳ ತಪಾಸಣೆ ಮಾಡಿ, ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿದ್ದ 16 ಚಾಲಕರ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ. ಫೆಬ್ರುವರಿ 22ರಂದು 2,059 ವಾಹನಗಳನ್ನು ತಪಾಸಣೆ ಮಾಡಿ, ಏಳು ಮಂದಿ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ಅಲ್ಲದೇ, ಜುಲೈ 9ರಂದು 3,016 ಶಾಲಾ ವಾಹನ ತಪಾಸಣೆ ನಡೆಸಿ, 23 ಮಂದಿ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ಆಗಸ್ಟ್ 4ರಂದು ವಿಶೇಷ ಕಾರ್ಯಾಚರಣೆ ನಡೆಸಿ, 3,676 ಚಾಲಕರನ್ನು ತಪಾಸಣೆಗೆ ಒಳಪಡಿಸಿ 26 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.




ಶಾಲಾ ವಾಹನ ಚಾಲಕರನ್ನು ಪರೀಕ್ಷೆಗೆ ಒಳಪಡಿಸಿದ ಸಂಚಾರ ಪೊಲೀಸರು

ವಿದ್ಯಾರ್ಥಿಗಳ ಸುರಕ್ಷತೆಯು ಸಂಚಾರ ಪೊಲೀಸರ ಆದ್ಯತೆಯಾಗಿದ್ದು, ಈ ಕಾರ್ಯಾಚರಣೆ ಮುಂದುವರಿಸಲಾಗುವುದು. ಸಂಚಾರ ನಿಯಮ ಉಲ್ಲಂಘಿಸುವವರ ಹಾಗೂ ಮದ್ಯಪಾನ ಮಾಡಿ ಶಾಲಾ ವಾಹನ ಚಾಲನೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ಚಾಲಕರು ಸಂಚಾರ ನಿಯಮ ಪಾಲಿಸುತ್ತಿರುವ ಬಗ್ಗೆ ಶಾಲಾ- ಕಾಲೇಜುಗಳ ಆಡಳಿತ ಮಂಡಳಿ ಹಾಗೂ ಪೋಷಕರು ಖಾತ್ರಿ ಪಡಿಸಿಕೊಳ್ಳಬೇಕು. ಸುರಕ್ಷತೆ ನಿಯಮ ಉಲ್ಲಂಘನೆ ಕಂಡುಬಂದರೆ ಮಾಹಿತಿ ನೀಡಬೇಕು ಎಂದು ಸಂಚಾರ ಪೊಲೀಸರು ಕೋರಿದ್ದಾರೆ.

ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಶಿವರಾಮ ಕಾರಂತ ಬಡಾವಣೆಯ ಸೆಕ್ಟರ್ 5ರಲ್ಲಿ ನಡೆಯುತ್ತಿದ್ದ ಕಾಮಗಾರಿ ಸ್ಥಳದಲ್ಲಿ ಪೈಪ್‌ಗಳನ್ನು ಇಳಿಸಿ ಲಾರಿಯನ್ನು ಹಿಂದಕ್ಕೆ ತೆಗೆದುಕೊಳ್ಳುವ ವೇಳೆ ಸೆಕ್ಯೂರಿಟಿ ಗಾರ್ಡ್‌ಗೆ ಡಿಕ್ಕಿಯಾಗಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.



ಬಿಹಾರದ ರಮಾನಾಥ್ ಸಿಂಗ್(49) ಮೃತಪಟ್ಟ ವ್ಯಕ್ತಿ. ಭಾನುವಾರ ರಾತ್ರಿ 7.30ರ ಸುಮಾರಿಗೆ ಪೈಪ್‌ಗಳನ್ನು ತುಂಬಿಕೊಂಡು ಬಂದಿದ್ದ ಲಾರಿ ಚಾಲಕ, ಪೈಪ್‌ಗಳನ್ನು ಇಳಿಸಿ ವಾಪಸ್ ತೆರಳಲು ಮುಂದಾಗಿದ್ದರು. ಲಾರಿ ಹಿಂದಕ್ಕೆ ಚಲಿಸುತ್ತಿದ್ದ ವೇಳೆ ಡಿಕ್ಕಿಯಾಗಿದೆ. ಸೆಕ್ಯೂರಿಟಿ ಗಾರ್ಡ್ ಗಂಭೀರವಾಗಿ ಗಾಯಗೊಂಡಿದ್ದರು. ಸಮೀಪದ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿತ್ತು. ಅಲ್ಲಿ ಅವರು ಮೃತಪಟ್ಟಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬದ ಸದಸ್ಯರಿಗೆ ಹಸ್ತಾಂತರಿಸಲಾಗಿದೆ. ಲಾರಿ ಬಿಟ್ಟು ಪರಾರಿಯಾಗಿರುವ ಚಾಲಕನಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಸಂಚಾರ ಠಾಣೆ ಪೊಲೀಸರು ಮಾಹಿತಿ ನೀಡಿದರು.

ಚಿಕ್ಕಬಾಣಾವರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಿಚಿತ ವ್ಯಕ್ತಿ ಸಾವು: ಕೆಂಪೇಗೌಡ ಬಸ್ ನಿಲ್ದಾಣದ ಸಮೀಪ ನಡೆದ ಅಪಘಾತದಲ್ಲಿ ವ್ಯಕ್ತಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. ಮೃತ ವ್ಯಕ್ತಿಗೆ 25ರಿಂದ 30 ವರ್ಷ ಇರಬಹುದು ಎಂದು ಅಂದಾಜಿಸಲಾಗಿದೆ.

'ಕೆಎಸ್ಆರ್‌ಟಿಸಿ ಟರ್ಮಿನಲ್ 2-ಎನಿಂದ ಹೊರಹೋಗುವ ಮಾರ್ಗದಲ್ಲಿ ಗಣೇಶನ ದೇವಸ್ಥಾನ ಬಳಿ ಅಪಘಾತ ಸಂಭವಿಸಿದೆ. ವಾಹನವೊಂದು ಡಿಕ್ಕಿ ಹೊಡೆದು ತೆರಳಿದೆ. ಕೆಳಕ್ಕೆ ಬಿದ್ದಿದ್ದ ಆ ವ್ಯಕ್ತಿಯ ಮೇಲೆ ಕೆಎಸ್ಆರ್‌ಟಿಸಿ ಬಸ್‌ನ ಚಕ್ರ ಹರಿದ ಪರಿಣಾಮ ಅವರು ಗಂಭೀರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ' ಎಂದು ಸಂಚಾರ ಠಾಣೆ ಪೊಲೀಸರು ಹೇಳಿದರು.

ಮೃತ ವ್ಯಕ್ತಿಯ ಜೇಬಿನಲ್ಲಿ ಯಾವುದೇ ಮೊಬೈಲ್, ಗುರುತಿನ ಚೀಟಿ ದೊರೆತಿಲ್ಲ ಎಂದು ಪೊಲೀಸರು ತಿಳಿಸಿದರು. ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಲ್ಪಸಂಖ್ಯಾತ ನಿಗಮದ ಅಧಿಕಾರಿ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಹಾಸನ: ಸಾಲದ ಅರ್ಜಿ ಅನುಮೋದಿಸಲು ₹40 ಸಾವಿರ ಲಂಚ ಪಡೆಯುತ್ತಿದ್ದ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಗೋಪಾಲ್ ಎಚ್. ಆರ್. ಅವರು ಸೋಮವಾರ ತಮ್ಮ ಕಚೇರಿಯಲ್ಲೇ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದರು.



ಗೋಪಾಲ್

ಸ್ವಯಂ ಉದ್ಯೋಗಕ್ಕಾಗಿ ₹20 ಲಕ್ಷ ನೇರ ಸಾಲಕ್ಕೆ ಅರ್ಜಿ ಹಾಕಿದ್ದ ಅಕ್ಬರ್ ಎಂಬುವವರಿಗೆ ಅಧಿಕಾರಿಯು ₹1.50 ಲಕ್ಷ ಲಂಚ ಕೊಡುವಂತೆ ಕೇಳಿದ್ದರು. ನಂತರ, ₹70 ಸಾವಿರಕ್ಕೆ ಒಪ್ಪಿಕೊಂಡಿದ್ದರು. ಅರ್ಜಿದಾರರು ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ಲೋಕಾಯುಕ್ತ ಎಸ್‌ಪಿ ಮಲಿಕ್ ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್‌ಗಳಾದ ಬಾಲು ಹಾಗೂ ಶಿಲ್ಪಾ ಕಾರ್ಯಾಚರಣೆ ನಡೆಸಿದರು.

‘ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟರೆ ಕಾನೂನು ಹೋರಾಟ’

ಬೆಂಗಳೂರು: ‘ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ ನಾವು ಕಾನೂನು ಹೋರಾಟ ಮಾಡುತ್ತೇವೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.



ಜಿ.ಪರಮೇಶ್ವರ

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಮುಡಾ ವಿಚಾರದಲ್ಲಿ ಮುಖ್ಯಮಂತ್ರಿಗೆ ನೀಡಿರುವ ಷೋಕಾಸ್ ನೋಟಿಸ್ ಹಿಂಪಡೆಯುವಂತೆ ರಾಜ್ಯಪಾಲರಿಗೆ ಸಲಹೆ ನೀಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಂಡಿದ್ದು, ಅದನ್ನು ಅವರು ಒಪ್ಪುವ ವಿಶ್ವಾಸವಿದೆ’ ಎಂದರು.

‘ರಾಜ್ಯಪಾಲರಿಗೆ ವಕೀಲ ಟಿ.ಜೆ. ಅಬ್ರಹಾಂ ನೀಡಿರುವ ದೂರು ಅರ್ಜಿಯಲ್ಲಿ ಸತ್ಯಾಂಶ ಇಲ್ಲವೆಂದು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಂಡು, ಆ ನಿರ್ಣಯವನ್ನು ತಿಳಿಸಿದ ನಂತರವೂ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡುತ್ತಾರೆಂದು ನನಗೆ ಅನಿಸುತ್ತಿಲ್ಲ. ಅಲ್ಲದೆ, ಸಂಪುಟ ಸಭೆಯ ನಿರ್ಣಯವನ್ನು ಅವರು ಅಷ್ಟು ಸುಲಭವಾಗಿ ತಿರಸ್ಕರಿಸುವುದಿಲ್ಲ ಎಂದೂ ಭಾವಿಸುತ್ತೇನೆ’ ಎಂದರು.

‘ಪಿಎಸ್‌ಐ ಪತ್ನಿಗೆ ಸರ್ಕಾರಿ ಕೆಲಸ’

‘ಯಾದಗಿರಿ ಪಿಎಸ್‌ಐ ಪರಶುರಾಮ್ ಅವರ ಪತ್ನಿಗೆ ಸರ್ಕಾರಿ ಉದ್ಯೋಗ ಮತ್ತು ಪರಿಹಾರ ಕೊಡುತ್ತೇವೆ’ ಎಂದು ಪರಮೇಶ್ವರ ತಿಳಿಸಿದರು.

‘ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ಸಾವಿಗೆ ಕಾರಣ ತಿಳಿಯಲಿದೆ’ ಎಂದರು. ‘ಪತಿಯ ಸಾವಿಗೆ ಶಾಸಕ ಚನ್ನಾರೆಡ್ಡಿ ಮತ್ತು ಅವರ ಪುತ್ರ ಕಾರಣ’ ಎಂದು ಪರಶುರಾಮ್ ಪತ್ನಿ ಆರೋಪಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಪ್ರಕರಣವನ್ನು ಈಗಾಗಲೇ ಸಿಐಡಿಗೆ ನೀಡಲಾಗಿದೆ. ತನಿಖೆಯ ವರದಿ ಬರಲಿ. ಶಾಸಕ, ಪುತ್ರನ ಪಾತ್ರ ಸಾಬೀತಾದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

‘ಟಿಕೆಟ್ ಘೋಷಿಸಿ’ ಎಂದು ಕೂಗಿದ ಸಿಪಿವೈ ಬೆಂಬಲಿಗರ ಮೇಲೆ ಎಚ್‌ಡಿಕೆ ಗರಂ

ಪಾದಯಾತ್ರೆಯಲ್ಲಿ ಮುನಿಸು ಬಹಿರಂಗ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಮುಡಾ ಹಗರಣದ ವಿರುದ್ಧ ಬಿಜೆಪಿ–ಜೆಡಿಎಸ್ ಜಂಟಿಯಾಗಿ ಹಮ್ಮಿಕೊಂಡಿರುವ ಮೈಸೂರು ಚಲೋ ಪಾದಯಾತ್ರೆ ವೇಳೆ ಚನ್ನಪಟ್ಟಣ ಉಪ ಚುನಾವಣೆ ಕುರಿತಂತೆ ಮೈತ್ರಿ ನಾಯಕರ ನಡುವಿನ ಮುನಿಸು, ಅಸಮಾಧಾನ ಬಹಿರಂಗಗೊಂಡಿತು.

ಪಾದಯಾತ್ರೆಯಲ್ಲಿ ಬಿಜೆಪಿ ನಾಯಕರ ಜೊತೆ ಕೆಲ ಹೊತ್ತು ಹೆಜ್ಜೆ ಹಾಕಿದ ಚನ್ನಪಟ್ಟಣ ಟಿಕೆಟ್ ಆಕಾಂಕ್ಷಿ ಯೋಗೇಶ್ವರ್, ನಂತರ ಎಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ಬಹಿರಂಗ ಸಮಾವೇಶದ ವೇದಿಕೆಯಲ್ಲೂ ಅವರ ಗೈರು ಎದ್ದು ಕಾಣುತ್ತಿತ್ತು. ಪಾದಯಾತ್ರೆ ಮಾರ್ಗದಲ್ಲಿ ಅಳವಡಿಸಿದ್ದ ಫ್ಲೆಕ್ಸ್‌ಗಳಲ್ಲಿ ಸಿಪಿವೈ ಭಾವಚಿತ್ರ ಕಾಣಲಿಲ್ಲ. ಎಲ್ಲೆಲ್ಲೂ ನಿಖಿಲ್ ಭಾವಚಿತ್ರವೇ ಎದ್ದು ಕಾಣುತ್ತಿತ್ತು.

ಎಚ್‌.ಡಿ. ಕುಮಾರಸ್ವಾಮಿ ಭಾಷಣ ಮಾಡುವಾಗ ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಬೆಂಬಲಿಗರು ‘ಸಿಪಿವೈಗೆ ಚನ್ನಪಟ್ಟಣ ಟಿಕೆಟ್ ಘೋಷಿಸಿ’ ಎಂದು ಕೂಗತೊಡಗಿದರು. ಆಗ ಸಿಟ್ಟಿಗೆದ್ದ ಎಚ್‌ಡಿಕೆ, ‘ಚನ್ನಪಟ್ಟಣದಲ್ಲಿ ಏನು ನಡೆಯುತ್ತಿದೆ ಎಂಬುದು ಗೊತ್ತಿದೆ’ ಎಂದು ಗದರಿದರು.

‘ಎರಡೂ ಪಕ್ಷದವರು ಮೊದಲು ನಿಷ್ಠೆ ತೋರಿಸಿ. ನಾವೀಗ ಟಿಕೆಟ್ ಹಂಚೋಕೆ ಬಂದಿಲ್ಲ. ಸಮಾನ ಮನಸ್ಕರ ಹೆಸರಿನಲ್ಲಿ, ಬಿಜೆಪಿ ಬಾವುಟ ಇಟ್ಟುಕೊಂಡು ಸಭೆ ಕರೆಯುತ್ತೀರಾ? ಇಲ್ಲಿ ಎನ್‌ಡಿಎ ಉಳಿಯಬೇಕಿದ್ದು, ಕಾಂಗ್ರೆಸ್‌ಗೆ ಕ್ಷೇತ್ರ ಬಿಟ್ಟು ಕೊಡುವುದಿಲ್ಲ. ಬಿಜೆಪಿ ಮತ್ತು ಜೆಡಿಎಸ್ ಸಮನ್ವಯ ಸಮಿತಿ ನಾಯಕರು ದೆಹಲಿಯಲ್ಲಿ ಟಿಕೆಟ್ ಕುರಿತು ತೀರ್ಮಾನ ತೆಗೆದುಕೊಳ್ಳುತ್ತಾರೆ. ಯಾರೇ ಅಭ್ಯರ್ಥಿಯಾದರೂ ಅವರನ್ನು ಗೆಲ್ಲಿಸಬೇಕು’ ಎಂದರು.

ಡಿ.ಕೆ. ಸಹೋದರರ ವಿರುದ್ಧ ಭಾಷಣದಲ್ಲಿ ವಾಗ್ದಾಳಿ ನಡೆಸಿದ ಕುಮಾರಸ್ವಾಮಿ, ಮಾತಿನ ಮಧ್ಯೆ, ‘ಚನ್ನಪಟ್ಟಣದ ಕೆರೆಗಳಿಗೆ ನೀರು ಹರಿದಿದ್ದು ನಾನು ಸದಾನಂದ ಗೌಡ ಹಾಗೂ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ. ಈ ಅಣ್ಣ–ತಮ್ಮಂದಿರು ಆಗ ಬಂದು ನೀರು ತುಂಬಿಸಲಿಲ್ಲ’ ಎಂದರು. ಹಿಂದಿನ ಭಾಷಣಗಳಲ್ಲಿ ಯೋಗೇಶ್ವರ್ ಅವರು ಕೆರೆ ತುಂಬಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು ಎಂದಿದ್ದ ಕುಮಾರಸ್ವಾಮಿ, ಇಂದು ಅವರ ಹೆಸರೇಳಲಿಲ್ಲ.

ವೇದಿಕೆಯಲ್ಲಿ ಸಿಪಿವೈ ಗೈರು: ಇತ್ತೀಚೆಗೆ ತಮ್ಮ ತಂದೆ ನಿಧನರಾದ ಹಿನ್ನೆಲೆಯಲ್ಲಿ ಪಾದಯಾತ್ರೆಗೆ ಗೈರಾಗಿರುವುದಾಗಿ ಹೇಳಿಕೊಂಡಿದ್ದ ಯೋಗೇಶ್ವರ್, ಇಂದು ಕೆಲ ಹೊತ್ತು ಪ್ರತ್ಯಕ್ಷವಾಗಿ ಮಾಯವಾದರು. ಕ್ಷೇತ್ರದಲ್ಲಿ ಸಿಪಿವೈ ಬದಲು ನಿಖಿಲ್ ಕಣಕ್ಕಿಳಿಸಲು ಎಚ್‌ಡಿಕೆ ಒಲವು ತೋರಿರುವುದೇ ಇದಕ್ಕೆ ಕಾರಣ ಎಂದು ಮೂಲಗಳು ತಿಳಿಸಿವೆ.

ನಾಯಕರ ಪ್ರತ್ಯೇಕ ನಡಿಗೆ: ಕೆಂಗಲ್‌ನಿಂದ ಬೆಳಿಗ್ಗೆ 9.30ಕ್ಕೆ ಶುರುವಾಗಬೇಕಿದ್ದ ಪಾದಯಾತ್ರೆಗೆ ಬಿಜೆಪಿ ನಾಯಕರು ಬಂದರೂ ಜೆಡಿಎಸ್ ನಾಯಕರು ಬರಲಿಲ್ಲ. ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಿಜೆಪಿ ಅಧ್ಯಕ್ಷ ವಿಜಯೇಂದ್ರ, ಜೆಡಿಎಸ್‌ನವರ ಅನುಪಸ್ಥಿತಿಯಲ್ಲೇ 10.30ರ ಸುಮಾರಿಗೆ ಪಾದಯಾತ್ರೆ ಶುರು ಮಾಡಿದರು.

11 ಗಂಟೆಗೆ ಕೆಂಗಲ್‌ಗೆ ಬಂದ ಕುಮಾರಸ್ವಾಮಿ ಮತ್ತು ನಿಖಿಲ್ ಅವರು, ದೇವರ ದರ್ಶನ ಪಡೆದು ಕಾರಿನಲ್ಲಿ ತೆರಳಿ ಪಾದಯಾತ್ರೆ ಸೇರಿಕೊಂಡರು.



‘ಮೈಸೂರು ಚಲೋ’ ಪಾದಯಾತ್ರೆ ಸೋಮವಾರ ಚನ್ನಪಟ್ಟಣ ತಲುಪಿದಾಗ ನಡೆದ ಬಹಿರಂಗ ಸಮಾವೇಶದಲ್ಲಿ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಮಾತನಾಡಿದರು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ, ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌. ಯಡಿಯೂರಪ್ಪ, ವಿರೋಧ ಪಕ್ಷದ ನಾಯಕ ಆರ್‌. ಅಶೋಕ, ಉಪಾಧ್ಯಕ್ಷ ಎನ್‌. ಮಹೇಶ್ ಹಾಗೂ ಇತರರು ಇದ್ದರು

ಕಾರ್ಯಕರ್ತೆ ಸಾವು; ಮತ್ತೊಬ್ಬರು ಅಸ್ವಸ್ಥ

ಪಾದಯಾತ್ರೆಗೆ ಬಂದಿದ್ದ ಬೆಂಗಳೂರಿನ ಬನಶಂಕರಿಯ ಜೆಡಿಎಸ್ ಕಾರ್ಯಕರ್ತೆ ಗೌರಮ್ಮ (45) ಅವರು ಕೆಂಗಲ್ ಬಳಿ ಬೆಳಿಗ್ಗೆ 11.30ರ ಸುಮಾರಿಗೆ ಹೃದಯಾಘಾತದಿಂದ ಮೃತಪಟ್ಟರು. ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಆಸ್ಪತ್ರೆಗೆ ಭೇಟಿ ನೀಡಿ, ಗೌರಮ್ಮ ಅವರಿಗೆ ನಮನ ಸಲ್ಲಿಸಿದರು.

ಚನ್ನಪಟ್ಟಣ ಸಮೀಪದ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕುತ್ತಿದ್ದ ಬೆಂಗಳೂರಿನ ಜಯನಗರ ಮಂಡಲದ ಬಿಜೆಪಿ ಉಪಾಧ್ಯಕ್ಷ ಶಂಕರ್ ಎಂಬುವರು ಅಸ್ವಸ್ಥರಾಗಿ ಕುಸಿದರು. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರನ್ನು ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಭೇಟಿ ಮಾಡಿ ಧೈರ್ಯ ತುಂಬಿದರು.

ಸ್ಪರ್ಧೆ ಶತಸಿದ್ಧ; ಪಕ್ಷ ಗೊತ್ತಿಲ್ಲ: ಯೋಗೇಶ್ವರ್

ಚನ್ನಪಟ್ಟಣ: ‘ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದು ಶತಸಿದ್ಧ. ಆದರೆ ಯಾವ ಪಕ್ಷದಿಂದ ಸ್ಪರ್ಧಿಸಬೇಕು ಎಂಬ ತೀರ್ಮಾನವನ್ನು ಬೆಂಬಲಿಗರು, ಹಿತೈಷಿಗಳಿಗೆ ಬಿಟ್ಟಿದ್ದೇನೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಹೇಳಿದ್ದಾರೆ.

ಸಭೆಯೊಂದರಲ್ಲಿ ಮಾತನಾಡಿ, ‘ಚನ್ನಪಟ್ಟಣ ಜನತೆ ನನ್ನ ಸ್ಪರ್ಧೆಯನ್ನು ಬಯಸುತ್ತಿದೆ. ನಿಮ್ಮ ಜೊತೆ ಇರುತ್ತೇವೆ ಎಂದು ಜನರು ಪಕ್ಷಾತೀತವಾಗಿ ಹೇಳುತ್ತಿದ್ದಾರೆ. ಆ.11ರಂದು ತಾಲ್ಲೂಕಿನಲ್ಲಿ ‘ನಮ್ಮ ಶಾಸಕ, ನಮ್ಮ ಹಕ್ಕು’ ಸ್ವಾಭಿಮಾನಿ ಸಮಾವೇಶ ನಡೆಯಲಿದೆ. ಇದು ತಾಲ್ಲೂಕಿನ ರಾಜಕೀಯ ಅಸ್ಮಿತೆ, ಸ್ವಾಭಿಮಾನವನ್ನು ತೀರ್ಮಾನಿಸುವ ದಿಕ್ಸೂಚಿ ಆಗಲಿದೆ. ನಾನು ರಾಜಕೀಯದಲ್ಲಿ ಮುಂದುವರೆಯುವ ಅಥವಾ ರಾಜಕೀಯ ಬಿಡುವ, ಚುನಾವಣೆಗೆ ಸ್ಪರ್ಧಿಸುವ ಇಲ್ಲವೇ ಹಿಂದೆ ಸರಿಯುವ ನಿರ್ಧಾರ ಆ ಸಭೆಯಲ್ಲಿ ಅಂತಿಮವಾಗಲಿದೆ’ ಎಂದು ಹೇಳಿದರು.

‘ದೆಹಲಿಯಲ್ಲಿ ನಿರ್ಧಾರ’



‘ಮೈತ್ರಿ ಅಭ್ಯರ್ಥಿ ಆಗುವ ನೀರಿಕ್ಷೆ ಇತ್ತು. ಅದಕ್ಕೆ ಪೂರಕ ವಾತಾ ವರಣವೂ ಇತ್ತು. ಆದರೆ ರಾಜಕೀಯ ಕಾರಣಗಳಿಂದ ಅಪಸ್ವರ ಕೇಳಿ ಬರುತ್ತಿದೆ. ದೆಹಲಿಯಿಂದ ಅಂತಿಮ ನಿರ್ಧಾರ ಹೊರ ಬೀಳಲಿದೆ. ಈ ಬಗ್ಗೆ ಚರ್ಚಿಸಲು ಸಂಸದ ಬಸವರಾಜ ಬೊಮ್ಮಾಯಿ ಭೇಟಿಯಾಗುವಂತೆ ತಿಳಿಸಿದ್ದಾರೆ’ ಎಂದು ಯೋಗೇಶ್ವರ್ ತಿಳಿಸಿದರು.

ವರದಿಗಾರರ ಮೇಲೆ ಹಲ್ಲೆ

ಚನ್ನಪಟ್ಟಣ ಬಳಿ ಬಂದ ಪಾದಯಾತ್ರೆ ವರದಿ ಮಾಡುತ್ತಿದ್ದ ನ್ಯೂಸ್ ಫಸ್ಟ್ ಸುದ್ದಿವಾಹಿನಿಯ ವರದಿಗಾರರಾದ ಮೋಹನ್, ಜಿ. ಮಂಜುನಾಥ್, ಕ್ಯಾಮೆರಾಮನ್ ಅವಿರಾಜ್ ಹಾಗೂ ಚಾಲಕ ಆನಂದ್ ಅವರ ಮೇಲೆ, ಶಾಸಕ ಹರೀಶ್ ಪೂಂಜಾ ಅವರ ಬೆಂಬಲಿಗರು ಹಲ್ಲೆ ನಡೆಸಿದರು. ವರದಿಗಾರರಿದ್ದ ಕಾರು ತಡೆದ ಬೆಂಬಲಿಗರು, ಮುಂದಕ್ಕೆ ಹೋಗಲು ಅವಕಾಶ ನೀಡಲಿಲ್ಲ. ಇದನ್ನು ಪ್ರಶ್ನಿಸಿದ್ದಕ್ಕೆ ಪೂಂಜಾ ಸೇರಿದಂತೆ ಬೆಂಬಲಿಗರು ‘ಮಾಧ್ಯಮಗಳಿಂದ ಏನೂ ಕಿತ್ತುಕೊಳ್ಳೋಕೆ ಆಗಲ್ಲ’ ಎಂದು ನಿಂದಿಸಿದರು. ಆಗ ಕೆಲ ಬೆಂಬಲಿಗರು ಹಲ್ಲೆ ನಡೆಸಿದರು. ಘಟನೆ ಕುರಿತು ಮಾಧ್ಯಮದವರು ಯಡಿಯೂರಪ್ಪ ಮತ್ತು ವಿಜಯೇಂದ್ರ ಗಮನಕ್ಕೆ ತಂದಾಗ, ಶಾಸಕ ಮತ್ತು ಬೆಂಬಲಿಗರು ಕ್ಷಮೆ ಯಾಚಿಸಿದರು ಎಂದು ಮೂಲಗಳು ತಿಳಿಸಿವೆ.

ಎಚ್‌ಡಿಕೆ ಸಹೋದರನ ಆಸ್ತಿ ಲೆಕ್ಕ ಮೊದಲು ಕೊಡಲಿ: ಡಿಕೆಶಿ



ಶಿವಕುಮಾರ್

ಬೆಂಗಳೂರು: ‘ನನ್ನ ಕುಟುಂಬದ ಆಸ್ತಿ ಲೆಕ್ಕಾಚಾರ ಕೇಳುತ್ತಿದ್ದೀಯಾ, ಎಲ್ಲದಕ್ಕೂ ಲೆಕ್ಕ ಕೊಡುತ್ತೇನೆ. ಅದಕ್ಕೂ ಮೊದಲು ನಿನ್ನ ಸಹೋದರನ ಆಸ್ತಿ ಲೆಕ್ಕ ಕೊಡು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿಗೆ ಏಕವಚನದಲ್ಲಿಯೇ ಸವಾಲೆಸೆದರು.

ಸದಾಶಿವನಗರದಲ್ಲಿರುವ ತಮ್ಮ ನಿವಾಸದಲ್ಲಿ ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ನಿನ್ನ ಅಧಿಕಾರಾವಧಿಯಲ್ಲಿ, ನಿನ್ನ ಸಹೋದರ ಹೇಗೆಲ್ಲ ಅಧಿಕಾರ ದುರುಪಯೋಗ ಮಾಡಿಕೊಂಡ ಎಂಬುದನ್ನು ಮೊದಲು ಲೆಕ್ಕಾಚಾರ ಮಾಡೋಣ. ಆ ಬಳಿಕ ನನ್ನ ಲೆಕ್ಕ ಕೊಡುತ್ತೇನೆ. ಅದರಲ್ಲಿ ಯಾವುದೇ ಮುಚ್ಚುಮರೆಯಿಲ್ಲ’ ಎಂದು ತಿರುಗೇಟು ನೀಡಿದರು.

‘ಕುಮಾರಸ್ವಾಮಿ ನನ್ನನ್ನು ಪ್ರಶ್ನೆ ಮಾಡುತ್ತಾನೆ. ಪ್ರಜಾಪ್ರಭುತ್ವದಲ್ಲಿ ಪ್ರಶ್ನಿಸುವ ಹಕ್ಕು ಎಲ್ಲರಿಗೂ ಇದೆ. ಜೆಡಿಎಸ್, ಬಿಜೆಪಿ ಹಗರಣಗಳಿಗೆ ಉತ್ತರ ಕೊಡಿ ಎಂದು ಕೇಳಿದರೂ ಇದುವರೆಗೂ ಉತ್ತರ ಕೊಟ್ಟಿಲ್ಲ’ ಎಂದರು.

‘ನಾನು ಭ್ರಷ್ಟಾಚಾರದ ಪಿತಾಮಹ ಎಂದು ಬಿ.ವೈ. ವಿಜಯೇಂದ್ರ ಹೇಳುತ್ತಾನೆ. ನೀನು ಮೊದಲು ಹೇಳಪ್ಪ, ನೀನು ನಿಮ್ಮ ಅಪ್ಪನನ್ನು ಯಾಕೆ ಜೈಲಿಗೆ ಕಳುಹಿಸಿದೆ? ರಾಜೀನಾಮೆ ಕೊಡಿಸಿದೆ? ಏನಾಯಿತು, ಎಲ್ಲಿ ಬಂತು? ಏಕೆ ಇದೆಲ್ಲಾ ಆಯಿತು ಇದರ ಲೆಕ್ಕಾಚಾರ ಮೊದಲು ಕೊಡು. ನಿನ್ನ ಪಕ್ಷದ ಯತ್ನಾಳ, ಗೂಳಿಹಟ್ಟಿ ಶೇಖರ್‌ಗೆ ಮೊದಲು ಉತ್ತರ ಕೊಡು. ಬಳಿಕ ನನಗೆ ಕೊಡು’ ಎಂದೂ ವಿಜಯೇಂದ್ರ ಅವರನ್ನು ಉದ್ದೇಶಿಸಿ ಕಿಡಿಕಾರಿದರು.

ಸಂಕ್ಷಿಪ್ತ ಸುದ್ದಿ

27ರಂದು ಪರೀಕ್ಷೆ ಡಿಪಿಎಆರ್‌ಗೆ ಕೆಪಿಎಸ್‌ಸಿ ಪತ್ರ


ಬೆಂಗಳೂರು: ‘ಗೆಜೆಟೆಡ್ ಪ್ರೊಬೆಷನರಿ 384 ಹುದ್ದೆಗಳಿಗೆ ಕೆಲಸದ ದಿನವಾದ ಆಗಸ್ಟ್ 27ರಂದು ಪೂರ್ವಭಾವಿ ಪರೀಕ್ಷೆ ನಡೆಸಲು ಅವಕಾಶವಾಗುವಂತೆ, ಪರೀಕ್ಷಾ ಕೇಂದ್ರಗಳಿರುವ ಕಡೆ ಮತ್ತು ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸಿರುವ ಸರ್ಕಾರಿ ಸೇವಾನಿರತರಿಗೆ ಅಂದು ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡುವಂತೆ ಡಿಪಿಎಆರ್ ಕಾರ್ಯದರ್ಶಿಗೆ ಕೆಪಿಎಸ್‌ಸಿ ಕಾರ್ಯದರ್ಶಿ ಕೆ. ರಾಕೇಶ್ ಕುಮಾರ್ ಪತ್ರ ಬರೆದಿದ್ದಾರೆ.

ಆಗಸ್ಟ್ 25ರಂದು ಪರೀಕ್ಷೆ ನಡೆಸಲು ಕೆಪಿಎಸ್‌ಸಿ ನಿರ್ಧರಿಸಿತ್ತು. ಅದೇ ದಿನ ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆಯು (ಐಬಿಪಿಎಸ್) ಗುಮಾಸ್ತ ಹುದ್ದೆಗಳಿಗೆ ಪರೀಕ್ಷೆ ನಡೆಸಲಿದೆ. ಹೀಗಾಗಿ, ಆಗಸ್ಟ್ ತಿಂಗಳಲ್ಲೇ ಬೇರೊಂದು ದಿನ ಪರೀಕ್ಷೆ ನಡೆಸುವಂತೆ ಮುಖ್ಯಮಂತ್ರಿ ಸಲಹೆ ನೀಡಿದ್ದರು.

‘564 ಕೇಂದ್ರಗಳಲ್ಲಿ ಇದೇ 25ರಂದು ಪರೀಕ್ಷೆ ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಅಂದು ಐಬಿಪಿಎಸ್ ಪರೀಕ್ಷೆ ಇರುವ ಬಗ್ಗೆ ಆಯೋಗದ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. ಅಲ್ಲದೆ, ಆಯೋಗದೊಂದಿಗೆ ಸಮಾಲೋಚನೆ ನಡೆಸಿರುವ ಮುಖ್ಯಮಂತ್ರಿ, ಈಗಾಗಲೇ ಪೂರ್ವಸಿದ್ಧತೆ ಮಾಡಿಕೊಂಡಿರುವುದರಿಂದ ಅಲ್ಪಕಾಲಕ್ಕೆ ಪರೀಕ್ಷೆ ಮುಂದೂಡುವಂತೆ ಸಲಹೆ ನೀಡಿದ್ದರು. ಹೀಗಾಗಿ, ಇದೇ 27ರಂದು ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ’ ಎಂದು ಪತ್ರದಲ್ಲಿ ರಾಕೇಶ್ ಕುಮಾರ್ ಉಲ್ಲೇಖಿಸಿದ್ದಾರೆ.

‘ಮಾನವ- ಆನೆ ಸಂಘರ್ಷ’ ಸಮ್ಮೇಳನ 12ಕ್ಕೆ

ಬೆಂಗಳೂರು: ‘ವಿಶ್ವ ಆನೆ ದಿನವಾದ ಇದೇ 12ರಂದು ‘ಮಾನವ- ಆನೆ ಸಂಘರ್ಷ’ ಅಂತರರಾಷ್ಟ್ರೀಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಅಮೆರಿಕ, ಜರ್ಮನಿ, ಜಪಾನ್, ಇಂಗ್ಲೆಂಡ್ ಸೇರಿ 11 ದೇಶಗಳ 17ಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು ವಿವಿಧ ರಾಜ್ಯಗಳ 660 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ‘ಕೃಷಿ ವಿ.ವಿ.ಯ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ಸಮ್ಮೇಳನ ನಡೆಯಲಿದೆ. ವನ್ಯಜೀವಿಗಳು ನಾಡಿಗೆ ಬಾರದಂತೆ ಬೇರೆ ಬೇರೆ ರಾಜ್ಯಗಳಲ್ಲಿ, ವಿದೇಶಗಳಲ್ಲಿ ಅನುಸರಿಸುತ್ತಿರುವ ತಂತ್ರಗಾರಿಕೆ, ಪದ್ಧತಿಗಳ ಬಗ್ಗೆ ಚಿಂತನ ಮಂಥನ ನಡೆಯಲಿದೆ’ ಎಂದರು.

‘ರಾಜ್ಯದಲ್ಲಿ 6,395 ಆನೆಗಳಿದ್ದು, ದೇಶದಲ್ಲೇ ಆನೆಗಳ ಸಂಖ್ಯೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. 563 ಹುಲಿಗಳನ್ನು ಹೊಂದಿರುವ ರಾಜ್ಯವು ವ್ಯಾಘ್ರಗಳ ಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಆದರೆ, ಅದಕ್ಕೆ ಪೂರಕವಾಗಿ ಅರಣ್ಯ ಪ್ರದೇಶ ಹೆಚ್ಚಳವಾಗದ ಕಾರಣ ಆನೆಗಳು ನಾಡಿಗೆ ಬರುತ್ತಿವೆ. ಆನೆ–ಮಾನವ ಸಂಘರ್ಷ ತಗ್ಗಿಸುವುದಕ್ಕೆ ಸಮ್ಮೇಳನ ಆಯೋಜಿಸಲಾಗಿದೆ’ ಎಂದರು.



ಸೋಮವಾರ ರಾತ್ರಿ ಭಾರಿ ಮಳೆಯಿಂದ ಜಲಾವೃತವಾಗಿದ್ದ ವೀರಣ್ಣನ ಪಾಳ್ಯ ಸಮೀಪದ ಹೊರ ವರ್ತುಲ ರಸ್ತೆಯಲ್ಲಿ ಸವಾರರು ಪ್ರಯಾಸದಿಂದ ವಾಹನ ಚಲಾಯಿಸಿದರು



ಆರ್‌ವಿಎಂ 2ನೇ ಹಂತದ ಡಾಲರ್ಸ್ ಕಾಲೊನಿಯಲ್ಲಿ ರಸ್ತೆ ಜಲಾವೃತವಾಗಿತ್ತು ಪ್ರಜಾವಾಣಿ ಚಿತ್ರಗಳು/ಬಿ.ಕೆ. ಜನಾರ್ಧನ್

ಭಾರಿ ಮಳೆ; ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ



ನಗರದಲ್ಲಿ ರೋಯನ್ ವೃತ್ತದ ಬಳಿ ಮಳೆಯಲ್ಲಿ ಸಾಗಿದ ವಾಹನಗಳು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಹೆಚ್ ಜಿ

ಬೆಂಗಳೂರು: ನಗರದ ಹಲವು ಭಾಗಗಳಲ್ಲಿ ಸೋಮವಾರ ಸಂಜೆ ಮತ್ತು ರಾತ್ರಿ ಭಾರಿ ಮಳೆಯಾಯಿತು. ತಗ್ಗುಪ್ರದೇಶಗಳಿಗೆ ನೀರು ನುಗ್ಗಿದ್ದು, ರಸ್ತೆಯಲ್ಲಿ ನೀರು ನಿಂತು ಸಂಚಾರಕ್ಕೆ ಅಡ್ಡಿಯಾಯಿತು.

ಸೋಮವಾರ ಸಂಜೆ ಹಲವು ಭಾಗಗಳಲ್ಲಿ ಉತ್ತಮವಾಗಿ ಸುರಿದಿದ್ದ ಮಳೆ, ರಾತ್ರಿ 9ರ ನಂತರ ಬಿರುಸುಗೊಂಡಿತು. ಗುಡುಗು–ಮಿಂಚು ಸಹಿತ ಅರ್ಧ ತಾಸು ಭಾರಿ ಮಳೆಯಾಯಿತು. ಇದರಿಂದ ರಸ್ತೆಯಲ್ಲಿ ಮಳೆ ನೀರು ನಿಂತು, ವಾಹನ ಸಂಚಾರಕ್ಕೆ ಹಲವೆಡೆ ಅಡ್ಡಿಯಾಯಿತು. ನಗರದ ಕೆಲವು ಭಾಗಗಳಲ್ಲಿ ಮಧ್ಯರಾತ್ರಿಯವರೆಗೂ ಮಳೆ ಸುರಿಯಿತು. ಹಲವು ಪ್ರದೇಶಗಳಲ್ಲಿ 7 ಸೆಂಟಿ ಮೀಟರ್‌ಗೂ ಹೆಚ್ಚು ಪ್ರಮಾಣದಲ್ಲಿ ಮಳೆಯಾಯಿತು.

ನಾಗವಾರ ರಸ್ತೆ, ಹೆಣ್ಣೂರು ರಸ್ತೆ, ಬಳ್ಳಾರಿ ರಸ್ತೆಯ ಸಿಬಿಐ ಮೇಲ್ಸೇತುವೆ, ಹೆಬ್ಬಾಳ ಮೇಲ್ಸೇತುವೆ ಸುತ್ತಮುತ್ತ, ಸಂಜಯನಗರದಿಂದ ಭೂಪಸಂದ್ರ ರಸ್ತೆ, ವಿಮಾನ ನಿಲ್ದಾಣ ರಸ್ತೆ, ಮೇಖ್ರಿ ವೃತ್ತ, ವೀರಣ್ಣಪಾಳ್ಯ ಸರ್ವಿಸ್ ರಸ್ತೆ, ಮೈಸೂರು ರಸ್ತೆ ಸೇರಿದಂತೆ ಹಲವು ರಸ್ತೆಗಳಲ್ಲಿ ನೀರು ನಿಂತು ಸಂಚಾರ ನಿಧಾನಗತಿಯಲ್ಲಿತ್ತು.

ಪೀಣ್ಯ ಕೈಗಾರಿಕಾ ಪ್ರದೇಶ, ಯಲಹಂಕ, ಜಕ್ಕೂರು, ವಿಶ್ವನಾಥ ನಾಗೇನಹಳ್ಳಿ, ಪುಲಕೇಶಿನಗರ, ಸಂಪಂಗಿರಾಮನಗರ, ವನ್ನಾರ್‌ಪೇಟೆ, ವಿಶ್ವೇಶ್ವರಪುರ, ಬನಶಂಕರಿ, ವಿದ್ಯಾಪೀಠ, ನಾಯಂಡಹಳ್ಳಿ, ಕೆಂಗೇರಿ, ರಾಜರಾಜೇಶ್ವರಿನಗರ, ಬಸವಪುರಗಳಲ್ಲಿ 3 ಸೆಂ.ಮೀನಿಂದ 5 ಸೆಂ.ಮೀನಷ್ಟು ಮಳೆಯಾಗಿದೆ.

ಹೇರೋಹಳ್ಳಿ, ಚೌಡೇಶ್ವರಿ ವಾರ್ಡ್, ಬಾಗಲಗುಂಟೆ, ಯಶವಂತಪುರ, ಹೆಬ್ಬಾಳ, ಮಾರುತಿ ಮಂದಿರ, ಹಂಪಿನಗರ, ವಿಜಯನಗರ, ರಾಜಾಜಿನಗರ, ಬಿಟಿಎಂ ಲೇಔಟ್, ಮಾರತ್‌ಹಳ್ಳಿ, ಮಹದೇವಪುರ, ವಿಜ್ಞಾನನಗರ, ಹೂಡಿ, ಕಾಟನ್‌ಪೇಟೆ, ರಾಜಮಹಲ್ ಗುಟ್ಟಹಳ್ಳಿ ಸುತ್ತಮುತ್ತಲ ಪ್ರದೇಶಗಳಲ್ಲಿ ಉತ್ತಮ ಮಳೆ ಸುರಿಯಿತು.



ವೀರಣ್ಣನ ಪಾಳ್ಯದ ಸಮೀಪದ ಹೊರ ವರ್ತುಲ ರಸ್ತೆ ಜಲಾವೃತವಾಗಿತ್ತು

ಬೈಕ್ ಮೇಲೆ ಬಿದ್ದ ಮರ: ಹನುಮಂತನಗರದಲ್ಲಿ ಮರ ಬಿದ್ದು, ಬೈಕ್ ಪೂರ್ಣ ಜಖಂಗೊಂಡಿತು. ಬಿಬಿಎಂಪಿ ಸಿಬ್ಬಂದಿ ಸುರಿಯುವ ಮಳೆಯಲ್ಲೇ, ಬಿದ್ದ ಮರ ತೆರವು ಕಾರ್ಯಾಚರಣೆ ನಡೆಸಿದರು.

ನಗರದ ಹಲವು ರಸ್ತೆಗಳು ಜಲಾವೃತವಾಗಿದ್ದರಿಂದ ದ್ವಿಚಕ್ರ ವಾಹನ ಸವಾರರು ಪ್ರಯಾಸಪಟ್ಟು ಸಾಗಿದರು. ಮೈಸೂರು ರಸ್ತೆ, ಬಳ್ಳಾರಿ ರಸ್ತೆ, ಯಶವಂತಪುರ, ಕೆಂಗೇರಿ, ನಾಯಂಡಹಳ್ಳಿ ಮುಖ್ಯ ರಸ್ತೆಗಳಲ್ಲಿ ಮಳೆನೀರಿನಿಂದ ಗುಂಡಿಗಳು ಗೊತ್ತಾಗದೆ ಕೆಲವು ಬೈಕ್ ಸವಾರರು ಬಿದ್ದರು. ಯಶವಂತಪುರದಲ್ಲಿ ಐಐಎಸ್ಸಿ ಬಳಿಯ ಕೆಳ ಸೇತುವೆಯಲ್ಲಿ ಅಂದಾಜು ಎರಡು ಅಡಿ ನೀರು ನಿಂತಿತ್ತು.

ತಿಗಳರಪೇಟೆಯಲ್ಲಿರುವ ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮಳೆ ನೀರು ತುಂಬಿಕೊಂಡಿತು. ವಿಲ್ಸನ್ ಗಾರ್ಡನ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲವು ಮನೆಗಳಿಗೆ ನೀರು ನುಗ್ಗಿದೆ. ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಪ್ಲಾಟ್‌ಫಾರಂನಲ್ಲಿ ಮಳೆ ನೀರು ಎಲ್ಲೆಡೆ ಸೋರಿತು. ರೈಲಿಗಾಗಿ ಕಾಯುತ್ತಿದ್ದ ಪ್ರಯಾಣಿಕರು ಸಾಕಷ್ಟು ಪರದಾಡಿ, ರೈಲ್ವೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರಜ್ವಲ್ ಜಾಮೀನು ಆದೇಶ ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಂತ್ರಸ್ತೆಯ ಅಪಹರಣದ ಪ್ರಕರಣದಲ್ಲಿನ ಅರ್ಜಿದಾರ ಆರೋಪಿಗಳೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಸಂಬಂಧಿಗಳಾಗಿದ್ದು, ಒಂದೇ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಅವರೆಲ್ಲರೂ ರಾಜಕೀಯವಾಗಿ ಒಂದಲ್ಲ ಒಂದು ಸ್ಥಾನಮಾನ ಹೊಂದಿದವರೇ’ ಎಂದು ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಅರುಹಿದೆ.



ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ಕೋರಿ ಆರೋಪಿಗಳಾದ ಹಾಸನದ ಸತೀಶ್ ಬಾಬು ಅಲಿಯಾಸ್ ಸತೀಶ್ ಬಾಬಣ್ಣ, ಎಚ್‌.ಕೆ.ಸುಜಯ್, ಎಚ್‌.ಎನ್‌.ಮಧು, ಎಸ್‌.ಟಿ.ಕೀರ್ತಿ, ಎಚ್‌.ಡಿ.ಮಾಯುಗೌಡ, ಕೆ.ಎ.ರಾಜಗೋಪಾಲ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಇದೇ ವೇಳೆ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎನ್‌.ಜಗದೀಶ್, ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ಕು ಸಂಪುಟಗಳಲ್ಲಿ ತನಿಖೆಯ ವಿವರ, ಕರೆ ದಾಖಲೆ, ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ, ಪ್ರತಿಯೊಬ್ಬ ಆರೋಪಿಯ ಬಗೆಗಿನ ಆರೋಪಗಳೇನು ಎಂಬುದನ್ನು ಒಳಗೊಂಡ ದೋಷಾರೋಪ ಪಟ್ಟಿಯ ವಿವರಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, ‘ರೇವಣ್ಣ ಜಾಮೀನು ರದ್ದತಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ಕಾಯ್ದಿರಿಸಲಾಗಿದೆ. ಅದರ ಜೊತೆಗೇ ಈ ಜಾಮೀನು ಅರ್ಜಿಗಳ ಆದೇಶ ಪ್ರಕಟಿಸಲಾಗುವುದು’ ಎಂದು ಹೇಳಿತು. ಅರ್ಜಿದಾರರ ಪರವಾಗಿ ವಾದಿಸಿದ ಹಿರಿಯ ವಕೀಲ ಸಿ.ಎಚ್‌.ಜಾಧವ್ ಮತ್ತು ಗಣಪತಿ ಭಟ್ ವಜ್ರಾಲಿ, ವಿ.ಎಸ್‌. ಹೆಗಡೆ ವಾದ ಮಂಡಿಸಿದರು.



ಪ್ರಬುದ್ಧ ಡಾ. ಬಿ.ಆರ್‌. ಅಂಬೇಡ್ಕರ್ ರುದ್ರಭೂಮಿ ಮತ್ತು ವಿದ್ಯುತ್ ಚಿತಾಗಾರ ನೌಕರರ ಸಂಘ ಸದಸ್ಯರಾದ 20 ನೌಕರರು ತಮ್ಮ ಒಂದು ತಿಂಗಳ ವೇತನವನ್ನು ಕೇರಳದ ವಯನಾಡ್‌ನ ಪ್ರಕೃತಿ ವಿಕೋಪ ಪರಿಹಾರದ ಸಹಾಯಧನಕ್ಕೆ ಹಸ್ತಾಂತರಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಒಪ್ಪಿಗೆ ಪತ್ರವನ್ನು ಸಲ್ಲಿಸಿದರು. ಕೆಂಗೇರಿ ಸ್ಮಶಾನದ ಕೃಷ್ಣಮೂರ್ತಿ, ಕಲ್ಪಳ್ಳಿಯ ಸೌರಿರಾಜು, ಸತ್ಯಾ, ಲಿಂಗರಾಜನಗರದ ಮುನಿವೆಂಕಟಪ್ಪ, ಮುನಿಸ್ವಾಮಿ, ಬಾಗಲಗುಂಟೆಯ ಲೋಕೇಶ್, ನಾಗೇನಹಳ್ಳಿಯ ಜಯರಾಂ ಉಪಸ್ಥಿತರಿದ್ದರು

ಆತ್ಮಹತ್ಯೆ ಶಂಕೆ • ಪ್ರಭಾವಿಗಳ ಒತ್ತಡದ ಕುರಿತೂ ತನಿಖೆ

ತಿಮ್ಮೇಗೌಡ ಮೇಲಿತ್ತು ಅತ್ಯಾಚಾರ ಪ್ರಕರಣ

ಪ್ರಜಾವಾಣಿ ವಾರ್ತೆ

ರಾಮನಗರ: ತಿಮ್ಮೇಗೌಡ ಅವರು 2000–2004ರ ಅವಧಿಯಲ್ಲಿ ಹಾಸನ ಜಿಲ್ಲೆಯ ದುದ್ದ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆಗ ಮಹಿಳೆಯೊಬ್ಬರ ಜೊತೆ ಸಂಬಂಧ ಹೊಂದಿದ್ದರು. ಗರ್ಭಿಣಿಯಾಗಿದ್ದ ಆಕೆಯನ್ನು ಮದುವೆಯಾಗಲು ನಿರಾಕರಿಸಿದಾಗ ಮಹಿಳೆ 2004ರಲ್ಲಿ ಹಾಸನ ನಗರ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದರು. ತಿಮ್ಮೇಗೌಡ ವಿರುದ್ಧ ನಂಬಿಸಿ ವಂಚನೆ ಹಾಗೂ ಜೀವ ಬೆದರಿಕೆ ಆರೋಪದಡಿ ಪ್ರಕರಣ ದಾಖಲಾಗಿತ್ತು.

ಕಡೆಗೆ ಡಿಎನ್‌ಎ ಪರೀಕ್ಷೆ ಕೂಡ ನಡೆದು ವರದಿ ತಿಮ್ಮೇಗೌಡರಿಗೆ ವ್ಯತಿರಿಕ್ತವಾಗಿ ಬಂದಿತ್ತು. ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿ ಮತ್ತೆ ಕೆಳಹಂತದ ನ್ಯಾಯಾಲಯಕ್ಕೆ ವರ್ಗವಾಗಿತ್ತು. ಇವರ ವಿರುದ್ಧ ಅತ್ಯಾಚಾರ ಆರೋಪವನ್ನು ಸೇರಿಸುವಂತೆ ಕೋರ್ಟ್ ಸೂಚಿಸಿತ್ತು ಎಂದು ಮೂಲಗಳು ಹೇಳಿವೆ.

ಹಾಸನದ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ ಜುಲೈನಲ್ಲಿ ನಡೆದಿದ್ದ ಪ್ರಕರಣದ ವಿಚಾರಣೆಗೆ ತಿಮ್ಮೇಗೌಡ ಹಾಜರಾಗಿದ್ದರು. ಆಗಸ್ಟ್ 31ಕ್ಕೆ ಪ್ರಕರಣದ ವಿಚಾರಣೆ ನಿಗದಿಯಾಗಿತ್ತು. ಇದರಿಂದ ಕುಗ್ಗಿದ್ದ ತಿಮ್ಮೇಗೌಡ ಅವರು ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನಗಳಿವೆ ಎಂದು ಮೂಲಗಳು ತಿಳಿಸಿವೆ.

ಒತ್ತಡವಿತ್ತೇ?: ಸಿಸಿಬಿಯಲ್ಲಿದ್ದ ತಿಮ್ಮೇಗೌಡ ಇತ್ತೀಚೆಗೆ ಅತ್ಯಂತ ಮಹತ್ವದ ಪ್ರಕರಣವೊಂದರಲ್ಲಿ ವಕೀಲ ಸೇರಿದಂತೆ ಇಬ್ಬರನ್ನು ಬಂಧಿಸಿದ್ದರು. ಈ ಪ್ರಕರಣದಲ್ಲಿ ಅವರ ಮೇಲೆ ಪ್ರಭಾವಿಗಳಿಂದ ಏನಾದರೂ ಒತ್ತಡ ಇತ್ತೇ ಎಂಬುದರ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪಟಾಕಿ ದುರಂತ: ಅಮಾನತು ಆಗಿದ್ದರು...

ಬೆಂಗಳೂರು: ಆನೇಕಲ್‌ನ ಅತ್ತಿಬೆಲೆ ಠಾಣೆಯಲ್ಲೂ ತಿಮ್ಮೇಗೌಡ ಅವರು ಕಳೆದ ವರ್ಷ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡಿದ್ದರು. ಕಳೆದ ಅ.7ರಂದು ಅಲ್ಲಿ ಪಟಾಕಿ ದುರಂತ ಸಂಭವಿಸಿ ಒಟ್ಟು 17 ಮಂದಿ ಮೃತಪಟ್ಟಿದ್ದರು. ಆಗ ಸ್ಥಳಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿಯವರು ಕರ್ತವ್ಯ ಲೋಪ ಆರೋಪದಡಿ ತಿಮ್ಮೇಗೌಡ ಅವರನ್ನು ಅಮಾನತು ಮಾಡಿ ತನಿಖೆಗೆ ಆದೇಶಿಸಿದ್ದರು.

ತನಿಖೆ ನಡೆದ ಬಳಿಕ ‘ತಿಮ್ಮೇಗೌಡ ಅವರು ಕರ್ತವ್ಯ ಲೋಪ ಎಸಗಿಲ್ಲ’ ಎಂಬುದು ಸಾಬೀತಾಗಿತ್ತು. ಆದರೂ ಅವರನ್ನು ಬೇರೆಲ್ಲೂ ಕರ್ತವ್ಯಕ್ಕೆ ನಿಯೋಜನೆ ಮಾಡಿರಲಿಲ್ಲ. ಇದರಿಂದ ನೊಂದುಕೊಂಡಿದ್ದರು. ನಂತರ, ಕುಂಬಳಗೋಡಿಗೆ ನಿಯುಕ್ತಿಗೊಂಡಿದ್ದ ಅವರನ್ನು ಬಿಡದಿಗೆ ವರ್ಗಾವಣೆ ಮಾಡಲಾಗಿತ್ತು. ಇಲ್ಲಿಂದ ಎರಡು ತಿಂಗಳ ಹಿಂದೆ ಸಿಸಿಬಿಯ ಆರ್ಥಿಕ ಅಪರಾಧ ಪತ್ತೆ ದಳಕ್ಕೆ ವರ್ಗಾವಣೆಯಾಗಿದ್ದರು ಎಂದು ಮೂಲಗಳು ಹೇಳಿವೆ.

‘ಕೊಲೆ ಮಾಡಿ ನೇಣು ಹಾಕಿರುವ ಶಂಕೆ’

‘ತಿಮ್ಮೇಗೌಡ ಅವರು ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿ ಅಲ್ಲ. ಅವರನ್ನು ಕೊಲೆ ಮಾಡಿ ತಂದು ನೇಣು ಹಾಕಲಾಗಿದೆ’ ಎಂದು ಅವರ ಸಹೋದರ ಚಿಕ್ಕ ಮುದ್ದಯ್ಯ ಅನುಮಾನ ವ್ಯಕ್ತಪಡಿಸಿದರು.

‘ಭಾನುವಾರ ಸಂಜೆ ಅವರ ಮಾವ ಗೋವಿಂದ ಅವರಿಗೆ ಕರೆ ಮಾಡಿ ಮಾತನಾಡಿದ್ದರು. ಆಗ ಕೆಲವು ಅಧಿಕಾರಿಗಳಿಂದ ತೊಂದರೆ ಆಗುತ್ತಿರುವುದಾಗಿ ಹೇಳಿಕೊಂಡಿದ್ದರು’ ಎಂದು ಮಾಧ್ಯಮ ಪ್ರತಿನಿಧಿಗಳಿಗೆ ಅವರು ತಿಳಿಸಿದರು.

ನಗರದಲ್ಲಿ ಇಂದು

ಯಜಮಾನ್ ಜನೋಪಕಾರಿ ದೊಡ್ಡಣ್ಣ ಶೆಟ್ಟ ಅವರ 103ನೇ ವಾರ್ಷಿಕ ಆರಾಧನಾ ಮಹೋತ್ಸವ: ಅತಿಥಿಗಳು: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಉದಯ್ ಸಿ. ಗರುಡಾಚಾರ್, ಅಧ್ಯಕ್ಷತೆ: ಸುರೇಶ್ ಎಸ್., ಆಯೋಜನೆ: ಲಕ್ಷ್ಮಿ ನರಸಿಂಹಸ್ವಾಮಿ ಧರ್ಮಸಂಸ್ಥೆ, ಸ್ಥಳ: ಜನೋಪಕಾರಿ ದೊಡ್ಡಣಶೆಟ್ಟರ ಬಯಲು ರಂಗಮಂದಿರ, ಕೋಟೆ, ಚಾಮರಾಜಪೇಟೆ. ಬೆಳಿಗ್ಗೆ 10


‘ಚೇಂಜಿಂಗ್ ಡಯಾಬಿಟಿಸ್ ಬಾರೊಮೀಟರ್’: ಅತಿಥಿಗಳು: ದಿನೇಶ್ ಗುಂಡೂರಾವ್, ಹರ್ಷ ಗುಪ್ತ, ಡಿ. ರಂದೀಪ್, ವಿಕ್ರಾಂತ್ ಶ್ರೋತ್ರಿಯ, ನವೀನ್ ಭಟ್ ವೈ., ಆಯೋಜನೆ: ರಾಷ್ಟ್ರೀಯ ಆರೋಗ್ಯ ಅಭಿಯಾನ, ಸ್ಥಳ: ರ್‍ಯಾಡಿಸನ್ ಬ್ಲ್ಯೂ ಹೋಟೆಲ್, ಅರಮನೆ ರಸ್ತೆ, ಬೆಳಿಗ್ಗೆ 11.30

ಶ್ರಾವಣ ಸಂಭ್ರಮ: ಸಂಜೆ 4ಕ್ಕೆ ‘ಚಂದ್ರಹಾಸ’ ನಾಟಕ ಪ್ರದರ್ಶನ: ನಿರ್ದೇಶನ: ವೆಂಕಟರಮಣಯ್ಯ ಡಿ., ಸಂಜೆ 6ಕ್ಕೆ ಉದ್ಘಾಟನೆ: ಎಸ್. ಟಿ. ಸೋಮಶೇಖರ್, ಅಧ್ಯಕ್ಷತೆ: ಚನ್ನಬಸಯ್ಯ ಗುಬ್ಬಿ, ರಂಗ ಸಮ್ಮಾನ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಎಂ. ಪ್ರಕಾಶಮೂರ್ತಿ, ಎಸ್.ಎನ್. ಶಂಕರ್, ಆರ್. ಚಂದ್ರಶೇಖರ, ನ.ಶ್ರೀಸುಧೀಂದ್ರರಾವ್, ಸಂಜೆ 7ಕ್ಕೆ ‘ಶ್ಮಶಾನ ಕುರುಕ್ಷೇತ್ರಂ’ ನಾಟಕ ಪ್ರದರ್ಶನ: ನಿರ್ದೇಶನ: ಎಚ್.ಎನ್. ಆನಂದಮೂರ್ತಿ, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ

ಶ್ರಮ ಸಂಸ್ಕೃತಿ ನಾಟಕೋತ್ಸವ: ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅತಿಥಿಗಳು: ಪ್ರಕಾಶರಾಜ್, ಕೆ. ಮಹಾಂತೇಶ್, ರಂಗ ಗೌರವ: ಮಾಲತೇಶ ಬಡಿಗೇರ, ಸುಮತಿ ಕೆ.ಆರ್., ಮೈಕೊ ಶಿವಶಂಕರ್, ಸೋಮಶೇಖರ್, ಹು.ದಾ. ಮುತ್ತುರಾಜು, ಅಚ್ಯುತ, ‘ಜಲಗಾರ’ ನಾಟಕ ಪ್ರದರ್ಶನ: ರಚನೆ: ಕುವೆಂಪು, ನಿರ್ದೇಶನ: ಮೈಕೊ ಶಿವಶಂಕರ್, ಸಂಗೀತ: ವಿ.ಎನ್. ಅಶ್ವತ್ಥ್, ನಿರ್ವಹಣೆ: ಸಂಜೀವ್ ಕೊನ್ನೂರು, ‘ನ್ಯಾಯ ಕೇಳಿದ ನಿಂಗವ್ವ’ ನಾಟಕ ಪ್ರದರ್ಶನ: ರಚನೆ: ರಾಜಪ್ಪ ದಳವಾಯಿ, ನಿರ್ದೇಶನ: ಸುಮತಿ ಕೆ.ಆರ್., ‘ಕಾಮ್ರೇಡ್ ಸೂರಿ’ ನಾಟಕ ಪ್ರದರ್ಶನ: ನಿರ್ದೇಶನ: ಮಾಲತೇಶ ಬಡಿಗೇರ, ಆಯೋಜನೆ: ಕಾಂ. ಸೂರ್ಯನಾರಾಯಣ ರಾವ್ ಜನ್ಮಶತಮಾನೋತ್ಸವ ಆಚರಣ ಸಮಿತಿ, ಸ್ಥಳ: ರವಿಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2ರಿಂದ

ಆರಾಧನಾ ಮಹೋತ್ಸವ ಇದೇ 18ರಿಂದ

ರಾಯಚೂರು: ಶ್ರೀ ರಾಘವೇಂದ್ರ ಸ್ವಾಮಿಗಳ 353ನೇ ಆರಾಧನಾ ಮಹೋತ್ಸವ ಮಂತ್ರಾಲಯ ಮಠದಲ್ಲಿ ಆಗಸ್ಟ್ 18ರಿಂದ 24ರವರೆಗೆ ನಡೆಯಲಿದೆ.



ಮಂತ್ರಾಲಯ ಪೀಠಾಧಿಪತಿ ಸುಭುದೇಂದ್ರ ತೀರ್ಥರ ನೇತೃತ್ವದಲ್ಲಿ ಆಗಸ್ಟ್ 18ರಿಂದ ಒಂದು ವಾರ ಪ್ರತಿದಿನ ಸಂಜೆ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿವೆ.

ಮೊದಲ ದಿನ ಶಾಖೋತ್ಸವ ರಜತ ಮಂಟಪೋತ್ಸವ, ಯಜುರ್ವೇದ ನಿತ್ಯ ನೂತನ ಉಪಕರ್ಮ, ಎರಡನೇ ದಿನ ಪೂರ್ವಾ ಆರಾಧನಾ ರಜತ ಸಿಂಹ ವನೋತ್ಸವ, ಮೂರನೇ ದಿನ ಮಧ್ಯಾರಾಧನಾ ಮಹಾ ಪಂಚಾಮೃತ ಅಭಿಷೇಕ, ಗಜರಾಜ ಸ್ವರ್ಣ ರಥೋತ್ಸವ, 4ನೇ ದಿನ ಉತ್ತರ ಆರಾಧನೆ ಜರುಗಲಿದೆ. 24ರಂದು ಸಮಾರೋಪ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನನಗೆ ಗೊತ್ತಿರುವ ಬಹಳಷ್ಟು ಕೋಟ್ಯಧಿಪತಿಗಳ ಮೂಲ ಗುಣಗಳನ್ನು ಅವರಲ್ಲಿರುವ ಹಣವು ಹೊರಗೆಡವಿದೆ. ಹಣ ಸಿಗುವುದಕ್ಕಿಂತ ಮೊದಲು ಅವರು ಮುಠ್ಠಾಳರಾಗಿದ್ದರೆ, ನಂತರ ಕೋಟ್ಯಧೀಶ ಮುಠ್ಠಾಳರಾಗಿದ್ದಾರೆ ಅಷ್ಟೆ.

–ವಾರನ್ ಬಫೆಟ್

ಜಮ್ಮು ಮತ್ತು ಕಾಶ್ಮೀರ ಜನರ ಭಾಗೀದಾರಿಕೆ ಹೆಚ್ಚಿಸಬೇಕು

ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿ, ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸಿ ಐದು ವರ್ಷಗಳು ಕಳೆದಿವೆ. ಆದರೆ ಜಮ್ಮು ಮತ್ತು ಕಾಶ್ಮೀರದಲ್ಲಿನ ಪರಿಸ್ಥಿತಿಯು ಇಂದಿಗೂ ಸಂಕೀರ್ಣವಾಗಿಯೇ ಉಳಿದಿದೆ. ಏಳು ದಶಕಗಳಿಂದ ಜಾರಿಯಲ್ಲಿ ಇದ್ದ ವ್ಯವಸ್ಥೆಯನ್ನು ಬದಲಾಯಿಸುವ ಉದ್ದೇಶದಿಂದ ಕೈಗೊಂಡ ಕ್ರಮ ಅದೆಷ್ಟು ಪರಿಣಾಮಕಾರಿ ಎಂಬುದನ್ನು ತೀರ್ಮಾನಿಸಲು ಐದು ವರ್ಷಗಳು ಸಾಕಾಗುವುದಿಲ್ಲ. ಜಮ್ಮು ಮತ್ತು ಕಾಶ್ಮೀರವನ್ನು ರಾಷ್ಟ್ರದ ಮುಖ್ಯವಾಹಿನಿಯ ಜೊತೆ ಸಂಪೂರ್ಣವಾಗಿ ವಿಲೀನಗೊಳಿಸಿ, ಆ ಭೂಪ್ರದೇಶದ 'ಸಮಸ್ಯೆ'ಯನ್ನು ಪರಿಹರಿಸುವುದು ಕೇಂದ್ರ ಸರ್ಕಾರದ ಘೋಷಿತ ಉದ್ದೇಶವಾಗಿತ್ತು. ಎಲ್ಲ ಸಮಸ್ಯೆಗಳಿಗೂ ಮೂಲ ಇರುವುದು ಆ ರಾಜ್ಯಕ್ಕೆ ನೀಡಿರುವ ವಿಶೇಷ ಸ್ಥಾನಮಾನದಲ್ಲಿ ಎಂಬುದು ಸರ್ಕಾರದ ನಂಬಿಕೆಯಾಗಿತ್ತು. ಇದು ಪೂರ್ತಿಯಾಗಿ ನಿಜವಾಗಿರಲಿಲ್ಲ. ಹಾಗೆಯೇ, ವಿಶೇಷ ಸ್ಥಾನಮಾನವನ್ನು ಹಿಂಪಡೆದ ನಂತರ ಸರ್ಕಾರದ ಕಡೆಯಿಂದ ಅಗತ್ಯ ಪೂರಕ ಕ್ರಮಗಳು ಜಾರಿಗೆ ಬರಲಿಲ್ಲ. ಅಲ್ಲದೆ, ಐದು ವರ್ಷಗಳ ಹಿಂದೆ ನೀಡಲಾದ ಹಲವು ಭರವಸೆಗಳನ್ನು ಇನ್ನೂ ಈಡೇರಿಸಿಲ್ಲ. ಹಿಂದಿನ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಕಣಿವೆ ಪ್ರದೇಶದಲ್ಲಿ, ಜಮ್ಮುವಿನಲ್ಲಿ ಹಾಗೂ ಲಡಾಖ್‌ನಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಕೇಂದ್ರಾಡಳಿತ ಪ್ರದೇಶದ ಸ್ಥಾನ ಕಲ್ಪಿಸಿದ್ದನ್ನು ಲಡಾಖ್ ಹಿಂದೊಮ್ಮೆ ಸ್ವಾಗತಿಸಿತ್ತು. ಆದರೆ ಈಗ ಅಲ್ಲಿನ ಜನರು ಪ್ರತ್ಯೇಕ ರಾಜ್ಯದ ಸ್ಥಾನಮಾನ ಕಲ್ಪಿಸುವಂತೆ ಆಗ್ರಹಿಸುತ್ತಿದ್ದಾರೆ. ತಮ್ಮ ಜಮೀನು ಹಾಗೂ ಸಂಪನ್ಮೂಲಗಳ ಮೇಲೆ ತಮಗೆ ಇನ್ನೂ ಹೆಚ್ಚು ಉತ್ತಮ ರೀತಿಯಲ್ಲಿ ನಿಯಂತ್ರಣ ಇರಬೇಕು ಎಂದು ಅವರು ಬಯಸುತ್ತಿದ್ದಾರೆ.



ಕಾಶ್ಮೀರದಲ್ಲಿ ಇರುವ ಹಲವು ಸವಾಲುಗಳನ್ನು ಎದುರಿಸುವ ದಿಸೆಯಲ್ಲಿ, ಅಲ್ಲಿನ ಜನರ ವಿಶ್ವಾಸವನ್ನು ಗಳಿಸುವುದು ಅತಿ ಮುಖ್ಯವಾದ ಕಾರ್ಯ

ಕಳೆದ ಐದು ವರ್ಷಗಳ ಅವಧಿಯಲ್ಲಿ ಕಾಶ್ಮೀರದ ಮೂಲಸೌಕರ್ಯವು ಬಹಳಷ್ಟು ಅಭಿವೃದ್ಧಿ ಕಂಡಿದೆ, ಅಲ್ಲಿ ಹೂಡಿಕೆ ಹೆಚ್ಚಳವಾಗಿದೆ, ವಿವಿಧ ಸೇವೆಗಳ ಲಭ್ಯತೆಯು ಸುಧಾರಿಸಿದೆ. ಕೆಲವು ವರದಿಗಳ ಪ್ರಕಾರ, ಕಳೆದ ಮೂರು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ಒಟ್ಟು ₹ 99 ಸಾವಿರ ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವಗಳು ಬಂದಿವೆ. ಅದಕ್ಕೂ ಹಿಂದಿನ ಕೆಲವು ದಶಕಗಳ ಅವಧಿಯಲ್ಲಿ ಬಂದಿದ್ದ ಹೂಡಿಕೆ ಪ್ರಸ್ತಾವಗಳ ಮೊತ್ತವು ₹19 ಸಾವಿರ ಕೋಟಿ ಮಾತ್ರ ಆಗಿತ್ತು. ಶ್ರೀನಗರ ಮತ್ತು ಲೇಹ್ ಸಂಪರ್ಕಿಸುವ ಜೋಜಿಲಾ ಸುರಂಗ ಮಾರ್ಗದಂತಹ ಪ್ರಮುಖ ಮೂಲಸೌಕರ್ಯ ಯೋಜನೆಗಳ ಅನುಷ್ಠಾನ ನಡೆಯುತ್ತಿದೆ. ಕಳೆದ ಐದು ವರ್ಷಗಳಲ್ಲಿ ಪ್ರವಾಸಿಗರ ಭೇಟಿಯು ಹಲವು ಪಟ್ಟು ಹೆಚ್ಚಾಗಿದೆ. ಆದರೆ ಕೃಷಿ ಹಾಗೂ ತೋಟಗಾರಿಕಾ ವಲಯಗಳು ದುರ್ಬಲಗೊಳ್ಳುತ್ತಿವೆ ಮತ್ತು ನಿರುದ್ಯೋಗ ಪ್ರಮಾಣ ಹೆಚ್ಚಾಗುತ್ತಿದೆ ಎಂಬ ದೂರುಗಳು ಕೂಡ ಇವೆ. ಕಣಿವೆ ಪ್ರದೇಶದಲ್ಲಿ ಭದ್ರತಾ ಪರಿಸ್ಥಿತಿಯು ಬಹಳ ಉತ್ತಮವಾಗಿದೆ. ಇಲ್ಲಿ ಈಚಿನ ಸಂದರ್ಭದಲ್ಲಿ ಶಾಂತಿಗೆ ಭಂಗ ಉಂಟಾಗುವ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಕಣಿವೆಯಲ್ಲಿ ಭದ್ರತಾ ಪಡೆಗಳು ಭಾರಿ ಸಂಖ್ಯೆಯಲ್ಲಿ ಇರುವುದು ಹಾಗೂ ಭಯೋತ್ಪಾದಕರ ಗಮನವು ಜಮ್ಮು ಕಡೆ ಹರಿದಿರುವುದು ಇದಕ್ಕೆ ಮುಖ್ಯ ಕಾರಣ. ಜಮ್ಮು ಪ್ರದೇಶದಲ್ಲಿ ಗಡಿಯಾಚೆಯಿಂದ ಒಳನುಸುಳುವ ಯತ್ನಗಳು ಹೆಚ್ಚಾಗಿವೆ, ಈಚಿನ ಕೆಲವು ವಾರಗಳಲ್ಲಿ ಅಲ್ಲಿ ಭಯೋತ್ಪಾದಕರ ಚಟುವಟಿಕೆಗಳು ಕೂಡ ಜಾಸ್ತಿಯಾಗಿವೆ.

ರಾಜಕೀಯ ಪ್ರಕ್ರಿಯೆಗಳು ಹಾಗೂ ಆಡಳಿತದ ಸ್ವರೂಪದ ಬಗ್ಗೆ ಒಂದಿಷ್ಟು ಅನಿಶ್ಚಿತತೆಗಳು ಇವೆ. ಸರ್ಕಾರ ನೀಡಿರುವ ಭರವಸೆಗಳ ವಿಚಾರವಾಗಿ ಈಚಿನ ವರ್ಷಗಳಲ್ಲಿ ಅನುಮಾನಗಳು, ಅಪನಂಬಿಕೆಗಳು ಹೆಚ್ಚಾಗಿವೆ. ಲೋಕಸಭಾ ಚುನಾವಣೆಯಲ್ಲಿ ಇಲ್ಲಿನ ಜನ ಭಾರಿ ಸಂಖ್ಯೆಯಲ್ಲಿ ತಮ್ಮ ಹಕ್ಕು ಚಲಾಯಿಸಿದರು. ಕೇಂದ್ರಾಡಳಿತ ಪ್ರದೇಶದಲ್ಲಿ ಶೇಕಡ 58ರಷ್ಟು ಮತದಾನ ಆಯಿತು. ವಿಧಾನಸಭೆಗೆ ಚುನಾವಣೆ ನಡೆಸುವುದಕ್ಕೆ ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 30ರ ಗಡುವನ್ನು ನೀಡಿದೆ. ಸಿದ್ಧತೆಗಳನ್ನು ಪರಿಶೀಲಿಸಲು ಕೇಂದ್ರ ಚುನಾವಣಾ ಆಯೋಗವು ಈ ವಾರ ಅಲ್ಲಿಗೆ ಭೇಟಿ ನೀಡಲಿದೆ. ಆದರೆ ರಾಜ್ಯದ ಸ್ಥಾನಮಾನವನ್ನು ಕಾಲಮಿತಿಯಲ್ಲಿ ಮರಳಿಸುವ ವಿಚಾರವಾಗಿ ಕೇಂದ್ರ ಸರ್ಕಾರದ ಕಡೆಯಿಂದ ಯಾವುದೇ ಘೋಷಣೆ ಬಂದಿಲ್ಲ. ಈ ನಡುವೆ ಕೇಂದ್ರವು ಲೆಫ್ಟಿನೆಂಟ್ ಗವರ್ನರ್ ಅವರಿಗೆ ಹೆಚ್ಚಿನ ಅಧಿಕಾರ ನೀಡಿದೆ. ಕಾಶ್ಮೀರದಲ್ಲಿ ಮಾಡಬೇಕಿರುವ ಕೆಲಸಗಳು ಇನ್ನೂ ಬಹಳಷ್ಟಿವೆ. ಅದರಲ್ಲೂ ಮುಖ್ಯವಾಗಿ, ರಾಜಕೀಯವಾಗಿ ಹಲವು ಸವಾಲುಗಳು ಇವೆ. ಈ ದಿಸೆಯಲ್ಲಿ ನಡೆಯುವ ಯತ್ನ ಯಾವುದೇ ಇದ್ದರೂ, ಆಡಳಿತದಲ್ಲಿ ಜನರ ಭಾಗೀದಾರಿಕೆ ಇರುವಂತೆ ನೋಡಿಕೊಳ್ಳುವುದು ಹಾಗೂ ಅವರ ವಿಶ್ವಾಸವನ್ನು ಸಂಪಾದಿಸುವುದು ಯಶಸ್ಸಿಗೆ ಕೀಲಿಕೈ ಇದ್ದಂತೆ.

ದೇಶದಾದ್ಯಂತ ಜಾತಿ ಜನಗಣತಿ ಅನಿವಾರ್ಯ ಎಂಬ ಮಾತಿಗೆ ಈ ತೀರ್ಪು ಬಲ ತಂದುಕೊಟ್ಟಿದೆ

ಒಳಮೀಸಲಾತಿ ತೀರ್ಪು: ಸದಾಶಯದ ಮೈಲಿಗಲ್ಲು



ವಿಶ್ಲೇಷಣೆ

ಯೋಗೇಂದ್ರ ಯಾದವ್, ಪ್ರಣವ್ ಧವನ್

ಸಾಮಾಜಿಕ ನ್ಯಾಯದ ವಿಚಾರದಲ್ಲಿ ಮುನ್ನೋಟವಿರುವ ನೀತಿಯೊಂದರ ಬಾಗಿಲನ್ನು ಸುಪ್ರೀಂ ಕೋರ್ಟ್ ತೆರೆದಿದೆ. ಪರಿಶಿಷ್ಟ ಜಾತಿಗಳ ಒಳಮೀಸಲಾತಿಗೆ ಇದ್ದ ಕಾನೂನಿನ ಅಡ್ಡಿಗಳನ್ನು ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ತೆರವು ಮಾಡಿದೆ. ಮೀಸಲಾತಿಯ ವಿಚಾರದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಕೆನೆಪದರದವರನ್ನು ಹೊರಗಿರಿಸಲು ಕೋರ್ಟ್ ಹಸಿರು ನಿಶಾನೆ ತೋರಿಸಿದೆ. ಇದು ಚರ್ಚಾರ್ಹ ಹಾಗೂ ಇಲ್ಲಿ ಒಂದಿಷ್ಟು ಅಸ್ಪಷ್ಟತೆ ಇದೆ.

ಇಂತಹ ಮಹತ್ವದ ತೀರ್ಪುಗಳ ವಿಚಾರದಲ್ಲಿ ಟೀಕೆ, ಬೆಂಬಲ ಎದುರಾಗುವುದು ಸಹಜ. ದಲಿತ ನಾಯಕರಾದ ಪ್ರಕಾಶ್ ಅಂಬೇಡ್ಕರ್ ಮತ್ತು ಚಂದ್ರಶೇಖರ ರಾವಣ್ ಅವರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ. ದಲಿತರಲ್ಲಿ ತೀರಾ ಹಿಂದುಳಿದಿರುವ ಮಾದಿಗ ಹಾಗೂ ಇತರ ಕೆಲವು ಸಮುದಾಯಗಳ ನಾಯಕರು ತೀರ್ಪನ್ನು ಸ್ವಾಗತಿಸಿದ್ದಾರೆ. ರಾಜ್ಯ ಸರ್ಕಾರಗಳು ಹೊಸ ನೀತಿಗಳನ್ನು ಹೇಗೆ ರೂಪಿಸುತ್ತವೆ ಹಾಗೂ ರಾಜಕೀಯ ಪಕ್ಷಗಳು ಕಾನೂನಿನ ದೃಷ್ಟಿಯಿಂದ ಬದಲಾಗಿರುವ ಈ ಪರಿಸ್ಥಿತಿಯಲ್ಲಿ ಹೊಸ ಬಗೆಯ ರಾಜಕಾರಣವನ್ನು ಹೇಗೆ ಕಟ್ಟುತ್ತವೆ ಎಂಬುದನ್ನು ಆಧರಿಸಿ ಹಲವು ಸಂಗತಿಗಳು ತೀರ್ಮಾನವಾಗಲಿವೆ. ಆದರೆ, ಮೀಸಲಾತಿಯ ವಿಚಾರದಲ್ಲಿ ಈ ತೀರ್ಪು ಒಂದು ಹೆಜ್ಜೆ ಮುಂದಕ್ಕೆ ಇರಿಸಿದಂತಿದೆ. ಸದಾಶಯದ ಕ್ರಮಗಳು ದಾಳಿಗೆ ಗುರಿಯಾಗಿರುವ ಈ ಸಂದರ್ಭದಲ್ಲಿ ಈ ತೀರ್ಪು ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ನೀತಿಗಳು ಹಾಗೂ ರಾಜಕಾರಣವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು, ಇನ್ನಷ್ಟು ಆಳವಾಗಿಸಲು ನೆರವಾಗಲಿದೆ.

ಪರಿಶಿಷ್ಟ ಜಾತಿಗಳ ಒಳವರ್ಗೀಕರಣಕ್ಕೆ ತಮಗೆ ಇದ್ದ ಮಿತಿಗಳನ್ನು ನಿವಾರಿಸಿಕೊಳ್ಳಲು ರಾಜ್ಯ ಸರ್ಕಾರಗಳು ಇಪ್ಪತ್ತು ವರ್ಷಗಳಿಂದ ನಡೆಸಿದ್ದ ಕಾನೂನು ಹೋರಾಟವನ್ನು ಈ ತೀರ್ಪು ಕೊನೆಗೊಳಿಸಿದೆ. ದೇಶದಲ್ಲಿ ಪರಿಶಿಷ್ಟ ಜಾತಿಗಳು ಎಂದು ಪರಿಗಣಿಸಬೇಕಿರುವ ಜಾತಿಗಳ ಪಟ್ಟಿಯನ್ನು ಅಧಿಸೂಚಿಸಲು ರಾಷ್ಟ್ರಪತಿಯವರಿಗೆ ಅಧಿಕಾರ ನೀಡುವ ಸಂವಿಧಾನದ 341ನೇ ವಿಧಿಯ ಸರಿಯಾದ ವ್ಯಾಖ್ಯಾನವೇ ಇಲ್ಲಿ ಚರ್ಚೆಗೆ ಗುರಿಯಾಗಿತ್ತು. 2004ರಲ್ಲಿ ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವೊಂದು, ಒಳಮೀಸಲಾತಿ ಕಲ್ಪಿಸಲು ಒಳವರ್ಗೀಕರಣ ಮಾಡುವುದನ್ನು ಕಾನೂನುಬಾಹಿರ ಎಂದು ಹೇಳಿತ್ತು. ಇ.ವಿ. ಚಿನ್ನಯ್ಯ ಪ್ರಕರಣದಲ್ಲಿ ಈ ಪೀಠವು ರಾಜ್ಯವೊಂದರ ಭೌಗೋಳಿಕ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿಗಳೆಲ್ಲವೂ ಏಕರೂಪಿಯಾಗಿರುತ್ತವೆ, ಅವುಗಳ ಒಳವರ್ಗೀಕರಣಕ್ಕೆ ಅವಕಾಶ ಇಲ್ಲ ಎಂದು ಹೇಳಿತ್ತು.

ಇ.ವಿ.ಚಿನ್ನಯ್ಯ ಪ್ರಕರಣದ ತೀರ್ಪು ವಾಸ್ತವಕ್ಕೆ ಅನುಗುಣವಾಗಿರಲಿಲ್ಲ. ಎಸ್‌ಸಿ, ಎಸ್‌ಟಿಯಂತಹ ಸಮುದಾಯಗಳಲ್ಲಿ ಬೇರೆ ಬೇರೆ ಸ್ತರಗಳ, ಬೇರೆ ಬೇರೆ ಸಾಂಪ್ರದಾಯಿಕ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವ ಹಾಗೂ ಆ ಕಾರಣಗಳಿಂದಾಗಿಯೇ ಬೇರೆ ಬೇರೆ ಮಟ್ಟಗಳಲ್ಲಿ ಅನನುಕೂಲಗಳನ್ನು ಹೊಂದಿರುವ ಗುಂಪುಗಳನ್ನು ಗುರುತಿಸಲು ಅದು ವಿಫಲವಾಗಿತ್ತು. ಈ ಭಿನ್ನ ಸಮುದಾಯಗಳು ಆಧುನಿಕ ಶಿಕ್ಷಣಕ್ಕೆ ಸಮಾನವಾಗಿ ಒಡ್ಡಿಕೊಂಡಿರಲಿಲ್ಲ. ಹೀಗಾಗಿ, ಅವುಗಳಿಗೆ ಸದಾಶಯದ ಕ್ರಮಗಳ ಪ್ರಯೋಜನವನ್ನು ಸಮಾನವಾಗಿ ಪಡೆದುಕೊಳ್ಳಲು ಆಗಿರಲಿಲ್ಲ. ಸಹಜವಾಗಿಯೇ, ಮೀಸಲಾತಿಯ ಬಹುದೊಡ್ಡ ಪಾಲನ್ನು ಕೆಲವು ಸಮುದಾಯಗಳು ಪಡೆದುಕೊಂಡವು. ಈ ಅಸಮಾನತೆಯು ಎಡಗೈ, ಬಲಗೈ ಸಮುದಾಯಗಳ ನಡುವೆ ರಾಜಕೀಯ ಭಿನ್ನಾಭಿಪ್ರಾಯ ಸೃಷ್ಟಿಸಿದೆ, ಅದನ್ನು ತೀವ್ರಗೊಳಿಸಿದೆ.

ಬಿಹಾರದ 2023ರ ಜಾತಿ ಜನಗಣತಿಯು ಎಸ್‌ಸಿ ಸಮುದಾಯದೊಳಗಿನ ವಿವಿಧ ಗುಂಪುಗಳ ನಡುವೆ ಶೈಕ್ಷಣಿಕವಾಗಿ ಅಸಮಾನತೆ ತೀವ್ರವಾಗಿರುವುದನ್ನು ಗುರುತಿಸಿದೆ. ದೋಬಿ ಸಮುದಾಯದಲ್ಲಿ ಪ್ರತಿ 10 ಸಾವಿರ ಮಂದಿಗೆ 124 ಮಂದಿ ಉನ್ನತ ಶಿಕ್ಷಣ ಪದವಿ ಹೊಂದಿದ್ದರೆ, ಮುಸಾಹರ್‌ಗಳ ಪೈಕಿ ಒಬ್ಬ ಮಾತ್ರ ಇಂತಹ ಪದವಿ ಹೊಂದಿದ್ದಾನೆ! ತಮಿಳುನಾಡಿನಲ್ಲಿ ಅರುಣತಾತಿಯಾರ್ ಸಮುದಾಯವು ಒಟ್ಟು ಎಸ್‌ಸಿ ಜನಸಂಖ್ಯೆಯಲ್ಲಿ ಶೇ 16ರಷ್ಟು ಪ್ರಮಾಣದಲ್ಲಿದ್ದರೆ, ಸರ್ಕಾರಿ ಹುದ್ದೆಗಳಲ್ಲಿ ಅವರ ಪಾಲು ಶೇ 0.5ರಷ್ಟು ಮಾತ್ರ. ಈ ಅಸಮಾನತೆಗೆ ಇರುವ ಪರಿಹಾರ, ಒಳವರ್ಗೀಕರಣ ತಂದು ಪ್ರತಿ ಒಳವರ್ಗದ ಜಾತಿಯ ಪ್ರಮಾಣಕ್ಕೆ ಅನುಗುಣವಾಗಿ ಆ ವರ್ಗಕ್ಕೆ ಮೀಸಲಾತಿ ಕಲ್ಪಿಸುವುದು. ಇದನ್ನು ಒಬಿಸಿ ಸಮುದಾಯಗಳ ವಿಚಾರದಲ್ಲಿ ಬಹುತೇಕ ರಾಜ್ಯಗಳಲ್ಲಿ ಮಾಡಲಾಗಿದೆ. ಹೀಗಿದ್ದರೂ, 2004ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ ನಂತರದಲ್ಲಿ, ಎಸ್‌ಸಿ ವಿಚಾರದಲ್ಲಿ ಇಂಥದ್ದೇ ಒಳವರ್ಗೀಕರಣ ಮಾಡುವ ಪಂಜಾಬ್, ಹರಿಯಾಣ, ಆಂಧ್ರಪ್ರದೇಶ, ಬಿಹಾರ ರಾಜ್ಯಗಳ ಯತ್ನವನ್ನು ಕಾನೂನುಬಾಹಿರ ಎಂದು ಕೋರ್ಟ್‌ಗಳು ಘೋಷಿಸಿದ್ದವು.

ಈಗ ಸುಪ್ರೀಂ ಕೋರ್ಟ್ ತನ್ನ ಹಿಂದಿನ ತೀರ್ಪನ್ನು ರದ್ದುಪಡಿಸಿದೆ. ಒಳವರ್ಗೀಕರಣಕ್ಕೆ ಅವಕಾಶ ಇದೆ, ಅದು ಸಮಾನತೆಯ ತತ್ವಕ್ಕೆ ವಿರುದ್ಧವಾಗಿಲ್ಲ ಎಂದು ಕೋರ್ಟ್ ಹೇಳಿದೆ. ಒಳವರ್ಗೀಕರಣ ಮಾಡಲೇಬೇಕು ಎಂದು ಕೋರ್ಟ್ ಹೇಳಿಲ್ಲ; ಅದನ್ನು ಮಾಡಲು ಅವಕಾಶ ಇದೆ ಎಂದಷ್ಟೇ ಕೋರ್ಟ್ ಹೇಳಿದೆ. ಎಸ್‌ಸಿ ಸಮುದಾಯಗಳ ಪರಿಸ್ಥಿತಿಯು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆಯಾದ ಕಾರಣ, ಒಳವರ್ಗೀಕರಣದ ಅಧಿಕಾರವನ್ನು ರಾಜ್ಯಗಳಿಗೇ ನೀಡಲಾಗಿದೆ. ಚಿನ್ನಯ್ಯ ಪ್ರಕರಣಕ್ಕೆ ಆಧಾರವಾಗಿರುವ, ಕಾನೂನಿನ ತತ್ವಕ್ಕೆ ಬಲವಾಗಿ ಅಂಟಿಕೊಳ್ಳುವುದನ್ನು ತೊರೆದು ಸುಪ್ರೀಂ ಕೋರ್ಟ್, ಪರಿಶಿಷ್ಟ ಜಾತಿಗಳಲ್ಲಿ ತೀರಾ ದುರ್ಬಲವಾಗಿರುವ ವರ್ಗಗಳ ವಿಚಾರವಾಗಿ ಸ್ಪಂದನಶೀಲವಾಗಿ ನಡೆದುಕೊಂಡಿದೆ. ಈ



ವರ್ಗಗಳ ಐತಿಹಾಸಿಕ ದುಮ್ಮಾನಗಳನ್ನು ಪರಿಹರಿಸಲು ಮಾರ್ಗವೊಂದನ್ನು ತೋರಿಸಿದೆ. ಆದರೆ ಇದನ್ನು ಜಾತಿ ಆಧಾರಿತ ಮೀಸಲಾತಿಯಿಂದ ದೂರ ಸರಿಯುತ್ತಿರುವ ಹೆಜ್ಜೆ ಎಂದು ಅರ್ಥ ಮಾಡಿಕೊಳ್ಳಬಾರದು. ಜಾತಿಪ್ರಜ್ಞೆ ಇರುವ ಸದಾಶಯದ ಕ್ರಮಗಳ ಅಗತ್ಯದ ವಿಚಾರವಾಗಿ ಇಂದಿರಾ ಸಹಾನಿ ಪ್ರಕರಣದ ತೀರ್ಪಿನ ಮೂಲಕ ರೂಪುಗೊಂಡ ಸಾಮಾಜಿಕ ಹಾಗೂ ಕಾನೂನಾತ್ಮಕ ಸಮ್ಮತಿಯನ್ನು ಮುಖ್ಯವಾದ ತೀರ್ಪು ಪುನರುಚ್ಚರಿಸುವ ಕೆಲಸ ಮಾಡಿದೆ. ಹೀಗಾಗಿ, ಈ ತೀರ್ಪು ಹೆಚ್ಚು ವಿಶಾಲವಾದ, ಹೆಚ್ಚು ಪರಿಣಾಮಕಾರಿಯಾದ ಮತ್ತು ಇನ್ನಷ್ಟು ನ್ಯಾಯ ಸಮ್ಮತವಾದ ಸದಾಶಯದ ಕ್ರಮಗಳ ವ್ಯವಸ್ಥೆಗಾಗಿನ ಹೋರಾಟವನ್ನು ಬಲಪಡಿಸುವ ಕೆಲಸ ಮಾಡಿದೆ.

ತೀರ್ಪಿನಲ್ಲಿ ನಾಲ್ಕು ಮಂದಿ ನ್ಯಾಯಮೂರ್ತಿಗಳು ಆಡಿರುವ ಕೆಲವು ಮಾತುಗಳು ಮಾತ್ರ ಚರ್ಚಾರ್ಹವಾಗಿವೆ. ಈ ಮಾತುಗಳು ಎಸ್‌ಸಿ ಸಮುದಾಯದಲ್ಲಿನ ಪ್ರಬಲ ವರ್ಗಗಳನ್ನು ಅಥವಾ 'ಕೆನೆಪದರ'ವನ್ನು ಹೊರಗಿರಿಸುವ ಬಗ್ಗೆ ಇರುವಂತಿವೆ. 'ಕೆನೆಪದರ' ತತ್ವವು ಇದುವರೆಗೆ ಒಬಿಸಿ ಸಮುದಾಯಗಳಿಗೆ ಮಾತ್ರ ಅನ್ವಯವಾಗುತ್ತಿತ್ತು, ಎಸ್‌ಸಿ ಹಾಗೂ ಎಸ್‌ಟಿ ವರ್ಗಗಳಿಗೆ ಇದು ಅನ್ವಯವಾಗುತ್ತಿರಲಿಲ್ಲ. ಕೆನೆಪದರ ವಿಚಾರವು ಸುಪ್ರೀಂ ಕೋರ್ಟ್ ಪೀಠದ ಎದುರು ಇರಲಿಲ್ಲ. ಹೀಗಿದ್ದರೂ ನ್ಯಾಯಮೂರ್ತಿಗಳು ಈ ಬಗ್ಗೆ ಅಭಿಪ್ರಾಯ ದಾಖಲಿಸಿದ್ದಾರೆ.

ಕೆನೆಪದರವನ್ನು ಹೊರಗಿರಿಸಬೇಕು ಎಂಬುದು ಸುಪ್ರೀಂ ಕೋರ್ಟ್‌ನ ತೀರ್ಪಲ್ಲ. ಆದರೆ, ಏಳು ಮಂದಿ ನ್ಯಾಯಮೂರ್ತಿಗಳು ಇದ್ದ ಪೀಠದಲ್ಲಿನ ನಾಲ್ವರು ನ್ಯಾಯಮೂರ್ತಿಗಳು ಹೇಳಿರುವ ಮಾತುಗಳನ್ನು ಆಧಾರವಾಗಿ ಇರಿಸಿಕೊಂಡು, ಕೆನೆಪದರ ಮಾನದಂಡವನ್ನು ಅಳವಡಿಸಿಕೊಳ್ಳದ ಒಳಮೀಸಲಾತಿ ನೀತಿಯನ್ನು ಪ್ರಶ್ನಿಸುವ ಸಾಧ್ಯತೆ ಇದೆ ಎಂಬ ಆತಂಕ ಇದೆ. ಎಸ್‌ಸಿ ಸಮುದಾಯಗಳಲ್ಲಿ ಕೆನೆಪದರವನ್ನು ಗುರುತಿಸಲು ಬೇಕಿರುವ ಮಾನದಂಡಗಳು ಒಬಿಸಿ ವರ್ಗಗಳಲ್ಲಿನ ಕೆನೆಪದರವನ್ನು ಗುರುತಿಸಲು ಇರುವ ಮಾನದಂಡಗಳೇ ಆಗಬಾರದು ಎಂಬುದನ್ನು ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ಸ್ಪಷ್ಟಪಡಿಸಿರುವುದು ಒಳ್ಳೆಯ ಸಂಗತಿ. ಹೀಗಿದ್ದರೂ ಇಲ್ಲಿ ದುರ್ಬಳಕೆಗಳಿಗೆ ಅವಕಾಶ ಇದೆ. ಅರ್ಹ ಅಭ್ಯರ್ಥಿ ಸಿಗಲಿಲ್ಲ ಎಂದು ಹೇಳಿ, ಮೀಸಲು ಹುದ್ದೆಗಳನ್ನು ಖಾಲಿ ಇರಿಸಿಕೊಳ್ಳುವುದು ಬಹಳ ಸಹಜವಾಗಿ ನಡೆದುಬಂದಿದೆ. ಕೆನೆಪದರ ತತ್ವವನ್ನು ಅಳವಡಿಸಿಕೊಂಡಾಗ, ಲಭ್ಯವಿರುವ ಅರ್ಹ ಅಭ್ಯರ್ಥಿಗಳ ಸಂಖ್ಯೆ ಇನ್ನಷ್ಟು ಕಡಿಮೆ ಆಗುತ್ತದೆ. ಆಗ ಮೀಸಲು ಹುದ್ದೆಗಳನ್ನು ಸಾಮಾನ್ಯ ವರ್ಗಕ್ಕೆ ವರ್ಗಾಯಿಸುವುದಕ್ಕೆ ದಾರಿ ಕಲ್ಪಿಸಿದಂತಾಗುತ್ತದೆ.

ಹೀಗಾಗಿ, ಎಸ್‌ಸಿ, ಎಸ್‌ಟಿ ಸಮುದಾಯಗಳ ವಿಚಾರದಲ್ಲಿ ಕೆನೆಪದರವನ್ನು ಗುರುತಿಸುವ ಮಾನದಂಡವು ಎರಡು ಅಂಶಗಳನ್ನು ಒಳಗೊಳ್ಳಬೇಕು. 1) ಸಾಮಾಜಿಕವಾಗಿ, ಆರ್ಥಿಕವಾಗಿ ಮುಂದುವರಿದಿದ್ದಾರೆ ಎಂಬುದನ್ನು ಗುರುತಿಸಲು ಹೆಚ್ಚು ದೊಡ್ಡದಾದ ಮಟ್ಟವೊಂದನ್ನು ನಿಗದಿಪಡಿಸಬೇಕು; ಸಾಮಾಜಿಕವಾಗಿ ಹಾಗೂ ವೃತ್ತಿಯಲ್ಲಿ ಹೊಂದಿರುವ ಮಟ್ಟವನ್ನು ಪರಿಗಣಿಸಬೇಕು. 2) ಕೆನೆಪದರದವರು ಎಂದು ಗುರುತಿಸಲಾದವರನ್ನು ಮೀಸಲಾತಿಯ ಸಾಲಿನಲ್ಲಿ ಕೊನೆಯಲ್ಲಿ ಇರಿಸಬೇಕು; ಅವರನ್ನು ಮೀಸಲಾತಿಯಿಂದ ಅನರ್ಹಗೊಳಿಸಬಾರದು.

ಒಳವರ್ಗೀಕರಣಕ್ಕೆ ಸರಿಯಾದ ಆಧಾರ ಇರಬೇಕು ಎಂದು ಕೋರ್ಟ್ ಹೇಳಿರುವುದು, ದೇಶದಾದ್ಯಂತ ಜಾತಿ ಜನಗಣತಿ ನಡೆಸುವುದು ಅನಿವಾರ್ಯ ಎಂಬ ಮಾತಿಗೆ ಬಲ ತಂದುಕೊಟ್ಟಿದೆ.

ಚುರುಮುರಿ



ಉತ್ತರವಿಲ್ಲದ ಪ್ರಶ್ನೆಗಳು

● ಡಿ.ಎಸ್.ಲಿಂಗರಾಜು

'ಊರೆಲ್ಲಾ ನನ್ನ ಹುಡಿಕ್ಯಂದು ಬತ್ತಿದ್ದನಲ್ಲ ಇವನು ಎತ್ತಗೋದ?' ಅಂತ ಬೇತಾಳವೇ ಆತಂಕದಲ್ಲಿ ಹುಡುಕುವಾಗ, ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ವಿಕ್ರಮನು ಕುಂತುದ್ದು ಕಂಡಿತು.

'ಅಲ್ಲಪ್ಪೋ ಯಾಕಿಂಗೆ ಡೆಂಗಿ ಬಂದೋನಂಗೆ ಕುಂತುದ್ದೀ? ನಿಮ್ಮ ಕುಟುಂಬಕ್ಕೂ ಯಾರನ್ನ ವಿಷ ಇಕ್ಕ್ಯವರಾ? ಬಿರ್‍ರನೆ ನನ್ನ ಪ್ರಶ್ನೆಗಳಿಗೆ ಉತ್ತರ ಕೊಟ್ಟುಬುಡು. ನಾನು ಪಾದಯಾತ್ರೆಗೆ ಹೋಗಬಕು' ಅಂತ ಬೇತಾಳವೇ ವಿಕ್ರಮನ ಹೆಗಲೇರಿ ಅಡವಾಗಿ ಕುತುಗತ್ತು. ವಿಕ್ರಮನು ವಿರೋಧ ಪಕ್ಷದ ನಾಯಕರ ಥರ ಹಳ್ಳೆಣ್ಣೆ ಕುಡಿದೋನಂಗೆ ಎದ್ದು ಬೇತಾಳವನ್ನು ಹೊತ್ತು ಹೊಂಟನು. ಈತನ ಮೌನವನ್ನು ಮುರಿಯಲೇಬೇಕು ಅಂದುಕೊಂಡ ಬೇತಾಳ ಚಿತಾವಣೆ ಸುರು ಮಾಡಿತು.

'ಅಲ್ಲಾ ಕಯ್ಯಾ, ಸಿಎಂಗೆ ನೋಟೀಸು ಕೊಟ್ಟರದು ಯಾಕೆ? ನಿಗಮ-ಮಂಡಳಿಗಳು ಕಾಸು ಕರೆಯೋ ಕೇಂದ್ರಗಳಾಯ್ತಿರದು ಯಾಕೆ? ಐಎಎಸ್ ಕೋಚಿಂಗ್ ಮಾಫಿಯಾ ಚೋಕಿಂಗ್ ಮಾಫಿಯಾ ಆಗ್ತಿರದು ಯಾಕೆ? ಕುತ್ತಿಗೆ ಕೊಯ್ಯೋ ಲೆಕ್ಕದೇಲಿ 'ನೀನೆಷ್ಟು ಮಾಡಿದ್ದೀಯ ನಂಗೊತ್ತುಲ್ಲವೇ?' ಅನ್ನದೇ ಮುಖ್ಯವಾಗಿ, ಜನದ ಹಿತ ಮರೀತಿರೋದು ಯಾಕೆ? ಪಾದಯಾತ್ರೇಲಿ ಜನ ತೊಂದರೆ ಅನುಭವಿಸಬೇಕು ಯಾಕೆ? ಇದೆಲ್ಲದಕ್ಕೂ ಉತ್ತರ ಗೊತ್ತಿದ್ರೂ ಬಾಯಿ ಬುಡದೇ ಹೋದರೆ ನಿನ್ನ ತಲಕಾಯಿಯು ಶಾಸಕರ ಮಕ್ಕಳು- ಮರಿಗಳ ಕೈಗೆ ಸಿಕ್ಕಿದ ಪೋಲೀಸು ಅಧಿಕಾರಿಗಳ ಜೀವದ ಥರ ಒಡೆದು ಹೋಳಾಗುವುದು' ಎಂದು ಕೆಟ್ಟಹಾಸ ಮಾಡಿತು.

'ಎಲೈ ಕೂಗುಭಂಡ ಬೇತಾಳವೇ, ನೀನು ಕೇಳಿದ ಪ್ರಶ್ನೆಗಳಿಗೆಲ್ಲಾ ಒಂದೇ ಉತ್ತರ. ವ್ಯವಸ್ಥೆಯಲ್ಲಿ ನೀಯತ್ತು ನಾಶವಾಗಿ ಭ್ರಷ್ಟಾಚಾರ ಬೀದಿಗೆ ಬಂದಿದೆ. ಜನರ ಮನಃಸ್ಥಿತಿ ಹದಗೆಟ್ಟು ಹೋಗ್ಯದೆ' ಅಂದೊಡನೇ ಬೇತಾಳವು ವಿಕ್ರಮನ ಬೆನ್ನ ಮೇಲಿಂದ ಹಾರಿ 'ನಿನ್ನ ಮೌನ ಮುರಿಯಿತು. ಮೂರೂ ಪಕ್ಷಗಳ ನಾಯಕರು ಜನವ ಮರುಳು ಮಾಡಕ್ಕೆ ಗಾರುಡಿವೇಷ ಹಾಕ್ಯಂದು ಬೀದೀಲಿ ನಿಂತವ್ರೆ. ಇವರೆಲ್ಲರ ಮ್ಯಾಲೂ ಅಮರಿಕ್ಯಂದು ಎಲ್ಲಾರ ಅಕ್ರಮದ ಬಾಕಿಪಟ್ಟಿ ಹಿಡಕಬತ್ತಿನಿ, ನೋಡೀವೆ ಇರು. ಸೀಯೂ ರಾಜ' ಅಂದು ಕಾಲಾಡಿಕ್ಯಂದು ಹೊಂಟೋಯ್ತು.

ದಿನದ ಟ್ವೀಟ್

ಸುಗಮ ಸಾರಿಗೆಗೆ ಅನುವಾಗಲಿ



2007ರಲ್ಲಿ ಬೆಂಗಳೂರು ವಿಮಾನ ನಿಲ್ದಾಣ ನಿರ್ಮಾಣ ಕಾರ್ಯವು ಮುಕ್ತಾಯದ ಹಂತದಲ್ಲಿತ್ತು. ಆದರೆ ಬೆಂಗಳೂರಿನಿಂದ ವಿಮಾನ ನಿಲ್ದಾಣಕ್ಕೆ ರಸ್ತೆ ನಿರ್ಮಾಣವಾಗಿರಲಿಲ್ಲ. 2024ರಲ್ಲಿ ಎಲೆಕ್ಟ್ರಾನಿಕ್ ಸಿಟಿಗೆ ಮೆಟ್ರೊ ಮಾರ್ಗ ಕಾರ್ಯಾಚರಿಸಲು ಸಿದ್ಧವಾಗಿದೆ. ಆದರೆ ಅದನ್ನು ಆರಂಭಿಸಲು ಅಗತ್ಯವಾದ ಮೆಟ್ರೊ ಬೋಗಿಗಳು ಅಲಭ್ಯವಾಗಿವೆ. ಈ 17 ವರ್ಷಗಳಲ್ಲಿ ಎಲ್ಲವೂ ಹಾಗೆಯೇ ಇವೆ, ಯಾವ ಬದಲಾವಣೆಯೂ ಇಲ್ಲ. ಅಸಹ್ಯಕರ.

ಪ್ರಕಾಶ್ ಶೇಷರಾಘವಾಚಾರ್, ವಕ್ತಾರ,ಬಿಜೆಪಿ ರಾಜ್ಯ ಘಟಕ

ಕಿಡಿನುಡಿ



ಬಾಂಗ್ಲಾದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಮುಂಚೂಣಿಯಲ್ಲಿದ್ದವರು ಮತ್ತು ಅದಕ್ಕಾಗಿ ತಮ್ಮ ಜೀವನವನ್ನೇ ತ್ಯಾಗ ಮಾಡಿದವರು 'ರಾಷ್ಟ್ರಪಿತ', 'ಬಂಗಬಂಧು' ಶೇಖ್ ಮುಜೀಬುರ್ ರೆಹಮಾನ್. ಆದರೆ ಅಲ್ಲೀಗ ಅವರ ಪ್ರತಿಮೆಯನ್ನು ನಾಶ ಮಾಡಲಾಗುತ್ತಿದೆ. ಪಾಕಿಸ್ತಾನದಿಂದ ಬಾಂಗ್ಲಾದೇಶವು ಸ್ವಾತಂತ್ರ್ಯ ಪಡೆದುಕೊಂಡದ್ದು, ಸೇನಾಧಿಪತ್ಯ ಹೊಂದಿರುವ ಪಾಕಿಸ್ತಾನದಂತೆ ಆಗುವ ಸಲುವಾಗಿಯೇ?

ಆದಿತ್ಯ ಕುಮಾರ್ ತ್ರಿವೇದಿ, ಉದ್ಯಮಿ, ರಾಜಕಾರಣಿ

25 ವರ್ಷಗಳ ಹಿಂದೆ

ಶುಕ್ರವಾರ, 6-8-1999

● **ಸ್ಥಾನ ಹೊಂದಾಣಿಕೆ: ಹೆಗಡೆ ಅನಂತಕುಮಾರ್ ಚರ್ಚೆ**

ಬೆಂಗಳೂರು, ಆ. 5– ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಸ್ಥಾನಗಳ ಹೊಂದಾಣಿಕೆ ಸಂಬಂಧ, ಬಿಜೆಪಿಯ ಹಿರಿಯ ಮುಖಂಡ ಹಾಗೂ ಕೇಂದ್ರ ನಾಗರಿಕ ವಿಮಾನಯಾನ ಸಚಿವ ಅನಂತಕುಮಾರ್ ಅವರು ಇಂದು ಲೋಕಶಕ್ತಿಯ ಅಧ್ಯಕ್ಷ ರಾಮಕೃಷ್ಣ ಹೆಗಡೆ ಅವರನ್ನು ಭೇಟಿಯಾಗಿ ಚರ್ಚಿಸಿದರು.

ರಾಜ್ಯದಲ್ಲಿ ಜೆ.ಎಚ್.ಪಟೇಲ್ ನೇತೃತ್ವದ ಜನತಾದಳದ ಜೊತೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳಲು ಬಿಜೆಪಿ ಸಿದ್ಧವಿಲ್ಲ; ಆದರೆ ಪಟೇಲ್ ಮತ್ತು ಅವರ ಸಂಗಾತಿಗಳು ಲೋಕಶಕ್ತಿಯನ್ನು ಸೇರಿ, ಆ ಪಕ್ಷದ ಚಿಹ್ನೆಯ ಮೇಲೆ ಸ್ಪರ್ಧಿಸಿದರೆ ನಮ್ಮ ಅಭ್ಯಂತರವಿಲ್ಲ ಎಂದು ಅನಂತಕುಮಾರ್ ಅವರು ಹೆಗಡೆ ಅವರಿಗೆ ಸ್ಪಷ್ಟಪಡಿಸಿದರು ಎಂದು ಗೊತ್ತಾಗಿದೆ.

● **ಆಸ್ತಿ ವಿವರ ಸಲ್ಲಿಸದ ಶಾಸಕರ ಮಾಹಿತಿಗೆ ಕೋರ್ಟ್ ಆದೇಶ**

ಬೆಂಗಳೂರು, ಆ. 5– ಇಬ್ಬರು ಸಚಿವರು ಸೇರಿದಂತೆ 81 ಮಂದಿ ಶಾಸಕರು 1995– 96 ಮತ್ತು 96– 97ನೇ ಸಾಲಿನ ಆಸ್ತಿಪಾಸ್ತಿ ವಿವರ ಸಲ್ಲಿಸಿಲ್ಲ ಎಂದು ಲೋಕಾಯುಕ್ತ ಇಂದು ಹೈಕೋರ್ಟಿಗೆ ತಿಳಿಸಿತು.

ಈ ಸದಸ್ಯರ ಹೆಸರುಗಳನ್ನು ಆಗಸ್ಟ್ 9ರೊಳಗೆ ಕೋರ್ಟಿಗೆ ತಿಳಿಸಬೇಕೆಂದು ವಿಭಾಗೀಯ ನ್ಯಾಯಪೀಠ ಆದೇಶಿಸಿತು.

ಅದಾದ ನಂತರ ಅವರ ಮೇಲೆ ಕಾನೂನಿನಂತೆ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿತು.

50 ವರ್ಷಗಳ ಹಿಂದೆ

ಮಂಗಳವಾರ, 6-8-1974

● **ಆದಾಯ ಜೋರು; ಅವಸ್ಥೆ ನೂರಾರು**

ಬೆಂಗಳೂರು, ಆ. 5– ದನದ ಕೊಟ್ಟಿಗೆಗೆ ಕೂಡಾ ಅಯೋಗ್ಯವಾದ ಸ್ಥಳ ಇದು. ಕಾರಣ ಇದೊಂದು ಹಾಳುಬಿದ್ದ ಮನೆ. ಆದರೆ ಈ ಮನೆಯಲ್ಲೇ ಸರ್ಕಾರದ ಕಾರುಬಾರು. ಪರಿಣಾಮ– ಸರ್ಕಾರಕ್ಕೆ ಈ ಮನೆಯಿಂದಲೇ ವರ್ಷಕ್ಕೆ ಸುಮಾರು ಆರು ಕೋಟಿ ರೂಪಾಯಿ ತೆರಿಗೆ ರೂಪದಲ್ಲಿ ಸಂದಾಯ.

ಸರ್ಕಾರದ 'ಮೂಗು– ಬಾಯಿ' ಆಗಿರುವ ಬೆಂಗಳೂರಿನ ಕನ್ನಿಂಗ್‌ಹ್ಯಾಂ ರಸ್ತೆ ಮತ್ತು ಜಯಮಹಲ್ ಬಡಾವಣೆಯ ಪ್ರಾದೇಶಿಕ ಸಾರಿಗೆ ಕಚೇರಿ ಕಟ್ಟಡಗಳ ಸ್ಥಿತಿ ಇದು.

ಈ ಕಟ್ಟಡಗಳು ಕನಿಷ್ಠಪಕ್ಷ 75 ವಸಂತ ಋತುಗಳನ್ನು ಕಂಡಿರಬಹುದು. ಆದರೆ ಇದುವರೆಗೆ ರಿಪೇರಿ ಅಷ್ಟೇ ಏಕೆ ಇವು ಬಿಳಿ ಸುಣ್ಣದ ಸ್ನಾನವನ್ನೂ ಕಂಡಿಲ್ಲ...

● **ಪ್ರವಾಹಪೀಡಿತರಿಗೆ ತುರ್ತು ಪರಿಹಾರಕ್ಕೆ ಆದ್ಯತೆ: ಸಚಿವ ಪೈ ಸಲಹೆ**

ಮಂಗಳೂರು, ಆ. 5– ಪ್ರವಾಹಪೀಡಿತರಿಗೆ ಕೂಡಲೇ ಪರಿಹಾರ ನೀಡಿ, ನಾಶವಾದ ಮನೆಗಳ ಪುನರ್ ನಿರ್ಮಾಣಕ್ಕೆ ನಂತರ ಆದ್ಯತೆ ನೀಡಬೇಕೆಂದು ಕೇಂದ್ರ ಸಚಿವ ಟಿ.ಎ. ಪೈ ಅವರು ಸಲಹೆ ಮಾಡಿದರು.

ಸಂಗತ

ನದಿಯ ನಡಿಗೆಗುಂಟ ಅರಿವಿನ ಹೆಜ್ಜೆ

ಜಲಮೂಲವನ್ನು ಉಳಿಸಲು ಹಲವು ಪರಿಸರ ತಂಡಗಳು ಒಗ್ಗೂಡುತ್ತಿದ್ದು, ಶೃಂಗೇರಿಯಿಂದ ಕಿಷ್ಕಿಂಧೆಯವರೆಗೂ ಪಾದಯಾತ್ರೆಗೆ ವೇದಿಕೆ ಸಿದ್ಧಗೊಳ್ಳುತ್ತಿದೆ

● ಸತೀಶ್ ಜಿ.ಕೆ. ತೀರ್ಥಹಳ್ಳಿ

ದೇಹದಲ್ಲಿ ರಕ್ತಪರಿಚಲನೆ ಇರುವಂತೆಯೇ ಭೂಭಾಗದಲ್ಲಿ ನದಿಗಳ ಹರಿವು... ಕೋಟಿಗಟ್ಟಲೆ ಜೀವಕೋಶಗಳಿಗೆ ರಕ್ತವು ಪೋಷಕಾಂಶವನ್ನು ಸರಬರಾಜು ಮಾಡಿದ ಹಾಗೆ ನದಿಗಳು ತಮ್ಮ ಇಕ್ಕೆಲ ದಂಡೆಗಳಿಗೂ ಪೋಷಕತ್ವವನ್ನು ಹಾಯಿಸಿ ನದಿಪಾತ್ರವನ್ನು ಹಸಿರಾಗಿಸುತ್ತವೆ, ಹಸನಾಗಿಸುತ್ತವೆ. ಕೋಶಗಳಿಂದ ಕಶ್ಮಲವು ರಕ್ತವನ್ನು ಸೇರುವಂತೆ ನೆಲದ ತ್ಯಾಜ್ಯ ನದಿಗೆ ಅರ್ಪಣೆ. ಆದರೆ ರಕ್ತವು ಮೂತ್ರಜನಕಾಂಗಗಳಲ್ಲಿ ಶುದ್ಧೀಕರಣಗೊಳ್ಳುವಂತಹದೇ ವ್ಯವಸ್ಥೆಯು ನದಿಯನ್ನು ಸೇರುವ ಮುನ್ನ ತ್ಯಾಜ್ಯದ ಸಂಸ್ಕರಣೆಯಾಗಿ, ನದಿನೀರಿನ ಶುದ್ಧೀಕರಣವಾಗಿ ಇರಬೇಕು. ಇಲ್ಲದೆಹೋದರೆ ಅಪಾಯ, ಜೀವಜಲವೂ ವಿಷಮಯಗೊಳ್ಳುತ್ತದೆ. ನೆತ್ತರು ನಂಜಾದರೆ ಉಳಿವುಂಟೇ? ನದಿ ಮಲಿನಗೊಂಡರೂ ಹಾಗೆಯೇ.

ಮಲೆನಾಡು ಹಾಗೂ ಬಯಲುಸೀಮೆಯನ್ನು ಒಳಗೊಂಡಂತೆ ಐದು ಜಿಲ್ಲೆಗಳ ಸುಮಾರು 400 ಕಿ.ಮೀ. ದೂರದ ಹರಿವಿನಲ್ಲಿ ಒಂದು ಕೋಟಿಯಷ್ಟು ಜನರ ಜೀವದಾಯಿನಿಯಂತಿರುವ ನದಿಯೇ ತುಂಗಭದ್ರೆ. ಘಟ್ಟಪ್ರದೇಶದ ಸಸ್ಯಸಂಕುಲ, ಗಿಡಮೂಲಿಕೆಗಳ ನಡುವೆ ಶುಭ್ರ ನೊರೆ-ತೊರೆಯಾಗಿ ಹರಿದುಬರುವ ಕಾರಣಕ್ಕೆ 'ತುಂಗಾ ಪಾನ...' ಎಂಬ ನಾಣ್ಣುಡಿ ಹುಟ್ಟಿಕೊಂಡಿತು. ಆದರೀಗ ನದಿನೀರಿಗೆ ಕೆಲವು ಖನಿಜಾಂಶಗಳ ಅತಿಯಾದ ಸೇರ್ಪಡೆಯ ಕಾರಣಕ್ಕೆ, ಅಮೃತಕ್ಕೆ ಸಮಾನವಾಗಿದ್ದ ತುಂಗೆಯ ನೀರು 'ಬಳಕೆಗೆ ಯೋಗ್ಯವಲ್ಲ' ಎಂಬ ಪ್ರಮಾಣಪತ್ರ ಪಡೆಯುವಂತಹ ದುಃಸ್ಥಿತಿಯನ್ನು ತಲುಪಿಬಿಟ್ಟಿದೆ.

ನದಿದಂಡೆಯಲ್ಲಿ ಅನೂಚಾನವಾಗಿ ಸಾಗಿರುವ ಮರಳು ಗಣಿಗಾರಿಕೆ, ಸೂಕ್ತ ಸಂಸ್ಕರಣೆಗೆ ಒಳಪಡಿಸದೆ ನದಿಗೆ ಸೇರಿಸುತ್ತಿರುವ ನಗರತ್ಯಾಜ್ಯ, ಮಿತಿಮೀರಿದ ರಾಸಾಯನಿಕ ಗೊಬ್ಬರ, ಕೀಟನಾಶಕದ ಆಧುನಿಕ ಕೃಷಿ ಪದ್ಧತಿಯಿಂದ ನದಿಯ ಅಸ್ತಿತ್ವಕ್ಕೆ ನಿರಂತರವಾಗಿ ಧಕ್ಕೆಯಾಗುತ್ತಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅಲ್ಲಿನ ನದಿಗಳು ತಿಳಿಯಾಗಿ ಕಂಗೊಳಿಸುತ್ತಿದ್ದರೆ, ದೇವತೆಯಂತೆ ಆರಾಧಿಸುವ ಇಲ್ಲಿನ ಎಷ್ಟೋ ನದಿಗಳು ಮಲಿನಗೊಂಡ ಚರಂಡಿಗಳಂತೆ ಮಾರ್ಪಟ್ಟಿವೆ.

ಜಲಾನಯನ ಪ್ರದೇಶದಲ್ಲಿನ ನಿರಂತರ ಅರಣ್ಯನಾಶವು ನದಿಯ ಉಳಿವಿಗೆ ಗಂಭೀರವಾಗಿ ಸವಾಲೊಡ್ಡುತ್ತಿದೆ. ಜೀವನದಿಗಳು ಉಗಮವಾಗಿ ನೂರಾರು ಮೈಲಿ ಹರಿದು ತಮ್ಮ ದಡವನ್ನು ಸಮೃದ್ಧಗೊಳಿಸಲು ಸಹಜ ಕಾಡು-ಗುಡ್ಡಗಳು ಅಗತ್ಯ. ಹಾಗಾಗಿ, ಅರಣ್ಯ ಒತ್ತುವರಿಯನ್ನು ನಿಯಂತ್ರಿಸಿ, ಅಕೇಷಿಯ, ನೀಲಗಿರಿಯಂತಹ ಏಕಜಾತಿಯ ನೆಡುತೋಪುಗಳಿಗೆ ವಿದಾಯ ಹೇಳಿ, ಮಲೆನಾಡಿನ ನೈಸರ್ಗಿಕ ಕಾಡನ್ನೂ ವೈವಿಧ್ಯಮಯ ಜೀವಸಂಕುಲವನ್ನೂ ಉಳಿಸಿಕೊಳ್ಳಬೇಕಾದ ತುರ್ತಿದೆ. ಈ ಕಾರಣದಿಂದ, ನದಿಪಾತ್ರದ ಜನರು ಅಸಂಖ್ಯ ನದಿ-ತೊರೆಗಳನ್ನು ಹೆರುವ, ಸಲಹುವ ಜೀವವೈವಿಧ್ಯದ ತೊಟ್ಟಿಲಾದ ಪರಿಸರಸೂಕ್ಷ್ಮ ಪಶ್ಚಿಮ ಘಟ್ಟವನ್ನು ಸಂರಕ್ಷಿಸಿಕೊಳ್ಳಲು ಹಂಬಲಿಸುತ್ತಿದ್ದಾರೆ.

ಜಲಮೂಲ ಮತ್ತು ನದಿಯ ನೈರ್ಮಲ್ಯವು ಜನರ ಆರೋಗ್ಯದ, ಜನಜೀವನದ ಅಳಿವು, ಉಳಿವಿನ ಪ್ರಶ್ನೆಯಾಗಿರುವುದರಿಂದ, ನದಿಯನ್ನು ತಾಜಾವಾಗಿ ಉಳಿಸಲು ಹಲವು ಪರಿಸರ ತಂಡಗಳು ಒಗ್ಗೂಡುತ್ತಿವೆ. ಚಿಕ್ಕಮಗಳೂರಿನ ಶೃಂಗೇರಿಯಿಂದ ಕೊಪ್ಪಳದ ಕಿಷ್ಕಿಂಧೆಯವರೆಗೂ ಪಾದಯಾತ್ರೆಗೆ ವೇದಿಕೆ ಸಿದ್ಧಗೊಳ್ಳುತ್ತಿದೆ. 'ನಿರ್ಮಲ ತುಂಗಭದ್ರಾ' ಎಂಬ, ನದಿಯ ಸ್ವಚ್ಛತೆ ಮತ್ತು ನೀರಿನ ಶುದ್ಧತೆಯ ಕುರಿತಾದ ಜನಜಾಗೃತಿ, ಜಲಜಾಗೃತಿಯ ಆಂದೋಲನವೊಂದು ಹುರುಪಿನಿಂದಲೇ ರೂಪುಗೊಳ್ಳುತ್ತಿದೆ. ಆ ಮೂಲಕ ಸಾರ್ವಜನಿಕರು ಹಾಗೂ ಸರ್ಕಾರದ ಗಮನಸೆಳೆಯಲು ನಾಡಜನರು ಒಂದಾಗಿ ಜೀವನದಿಗಳ ರಕ್ಷಣೆಗೆ ಮುಂದಾಗುತ್ತಿದ್ದಾರೆ. ಆದ್ಯತೆಯ ಹಕ್ಕೊತ್ತಾಯಗಳನ್ನು ಹೊತ್ತುಕೊಂಡು ನದಿಯ ನಡಿಗೆಗುಂಟ ಜನರೂ ಅರಿವಿನ ಹೆಜ್ಜೆಹಾಕಲು ಸಜ್ಜಾಗಿದ್ದಾರೆ.



ಪ್ರಮುಖ ಬೇಡಿಕೆಗಳು: ನೀರು ಇಂಗುವಿಕೆ ಕ್ಷೀಣವಾಗುತ್ತಿರುವುದರಿಂದ ಬೇಸಿಗೆಯಲ್ಲಿ ಜಲಕ್ಷಾಮವೂ ಮಳೆಗಾಲದಲ್ಲಿ ಪ್ರವಾಹವೂ ಸಾಮಾನ್ಯವೆನಿಸಿವೆ. ಇವುಗಳ ನಿವಾರಣೆಗೆ ಶಾಶ್ವತ ಯೋಜನೆಯಾಗಿ ಜಲಾನಯನ ಪ್ರದೇಶದ ಅಭಿವೃದ್ಧಿ ಮತ್ತು ನದಿದಂಡೆಯ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಸಹಜಕಾಡನ್ನು ಬೆಳೆಸುವುದು. ಅಗತ್ಯವಿರುವಲ್ಲಿ ಸಂಸ್ಕರಣಾ ಘಟಕಗಳ ಸ್ಥಾಪನೆಯ ಮೂಲಕ, ಜನವಸತಿ ಪ್ರದೇಶಗಳ ಕೊಳಚೆ ಮತ್ತು ನಗರ-ಕೈಗಾರಿಕೆಗಳ ಹಾನಿಕಾರಕ ರಾಸಾಯನಿಕಗಳನ್ನು ಒಳಗೊಂಡ ತ್ಯಾಜ್ಯಗಳನ್ನು ಸಂಸ್ಕರಿಸಿಯೇ ನದಿಗೆ ಹರಿಸುವುದು. ನದಿದಂಡೆಯಲ್ಲಿ ಗಣಿಗಾರಿಕೆ, ಮರಳು ಮಾಫಿಯಾ ನಿಯಂತ್ರಿಸಿ ದಂಡೆಯ ಕೊರೆತ ಹಾಗೂ ಜಲಚರಗಳ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳುವುದು. ನದಿನೀರನ್ನು ವೈಜ್ಞಾನಿಕ ಪರೀಕ್ಷೆಗೊಳಪಡಿಸಿ, ಗುಣಮಟ್ಟದಲ್ಲೇನಾದರೂ ವ್ಯತ್ಯಾಸ ಕಂಡುಬಂದಲ್ಲಿ ತಜ್ಞರ ಸಮಿತಿ ರಚಿಸಿ, ಕಾರಣ, ಪರಿಣಾಮಗಳ ಅಧ್ಯಯನ ಕೈಗೊಳ್ಳುವುದು. ಸಾರ್ವಜನಿಕರಲ್ಲಿ ಜಲಸಾಕ್ಷರತೆ ಮತ್ತು ಶುದ್ಧನೀರಿನ ಮಹತ್ವದ ಬಗೆಗೆ ಜಲಜಾಗೃತಿ ಮೂಡಿಸುವುದು. 'ಪಶ್ಚಿಮಘಟ್ಟ ಅಧ್ಯಯನ ಕೇಂದ್ರ'ವನ್ನು ಸ್ಥಾಪಿಸುವ ಮೂಲಕ ಈ ಮಲೆಘಟ್ಟದ ಪರಿಸರ, ಮಳೆ, ನೀರು, ಕಾಡು, ಕೃಷಿ, ಗಣಿಗಾರಿಕೆ, ಸಾಮಾಜಿಕ-ಆರ್ಥಿಕ ಸ್ಥಿತಿಗತಿ ಬಗೆಗೆ ವೈಜ್ಞಾನಿಕ ಅಧ್ಯಯನ ಕೈಗೊಳ್ಳುವುದು. ನದಿ ಮತ್ತು ನದಿನೀರಿಗೆ ಸಂಬಂಧಿಸಿದ ಇತರೆಲ್ಲಾ ಸಮಸ್ಯೆಗಳ ಕುರಿತು ಗಮನಹರಿಸುವುದು... ಹೀಗೆ.

ನವೆಂಬರ್ ಮೊದಲ ವಾರದಲ್ಲಿ ನದಿಪಾತ್ರದ ಫಲಾನುಭವಿಗಳು ಕೈಗೊಳ್ಳುತ್ತಿರುವ ಪಾದಯಾತ್ರೆಗೆ ಬಲ ಬರಲಿ. ಜೀವನದಿಗಳು ತಮ್ಮ ಶುದ್ಧ ಪರಿಸರ, ಪಾವಿತ್ರ್ಯವನ್ನು ಮರಳಿ ಪಡೆಯುವಂತಾಗಲಿ ಎಂಬುದು ಆಶಯ.

ವಾಚಕರ ವಾಣಿ

ವಿಚಾರಣೆ ನಡೆಯಲಿ: ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ

ರಾಜ್ಯದ ಪ್ರಮುಖ ರಾಜಕೀಯ ಪಕ್ಷಗಳು ಈಗ ನಡೆಸುತ್ತಿರುವ ಪಾದಯಾತ್ರೆ ಮತ್ತು ಜನಾಂದೋಲನ ಸಮಾವೇಶಗಳಲ್ಲಿ ಪ್ರಭಾವಿ ವ್ಯಕ್ತಿಗಳು ಪರಸ್ಪರರ ವಿರುದ್ಧ ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗದ ಗಂಭೀರ ಆರೋಪಗಳನ್ನು ಮಾಡುತ್ತಿದ್ದಾರೆ. ಹೀಗೆ ಬಹಿರಂಗವಾಗುತ್ತಿರುವ ಈ ಆರೋಪಗಳು ಮಾಧ್ಯಮಗಳಲ್ಲಿ ಬಿತ್ತರಗೊಂಡು ಸಾರ್ವಜನಿಕ ದಾಖಲೆಗಳಾಗುತ್ತಿವೆ. ಎಲ್ಲ ಆರೋಪಗಳಿಗೂ ತಮ್ಮ ಬಳಿ ದಾಖಲೆಗಳಿವೆ ಎನ್ನುತ್ತಿದ್ದಾರೆ. ಆದರೆ ಯಾರೂ ಅಧಿಕೃತವಾಗಿ ಸೂಕ್ತ ವೇದಿಕೆಯಲ್ಲಿ ದೂರು ದಾಖಲಿಸುತ್ತಿಲ್ಲ.

ಇಂತಹವರ ಭ್ರಷ್ಟ ವ್ಯವಹಾರಗಳ ಕಾರಣದಿಂದ, ಚುನಾವಣೆಯ ಮೂಲಕ ಇವರಿಗೆ ಅಧಿಕಾರ ನೀಡಿದ ನಾಗರಿಕರ ಸಂವಿಧಾನಬದ್ಧ ಹಾಗೂ ಭ್ರಷ್ಟಾಚಾರಮುಕ್ತ ಆಡಳಿತ ಹೊಂದುವ ಮೂಲಭೂತ ಹಕ್ಕಿನ ಉಲ್ಲಂಘನೆ ಆಗುತ್ತಿದೆ. ಈ ಜನಪ್ರತಿನಿಧಿಗಳು ಮತದಾರರ ಚುನಾವಣೋತ್ತರ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಜನರ ಈ ಸಂಕಷ್ಟದ ಸಮಯದಲ್ಲಿ ನ್ಯಾಯಾಂಗ ಮಾತ್ರ ಅವರನ್ನು ರಕ್ಷಿಸಬಹುದಾಗಿದೆ. ಅದು, ಮೂರು ಪ್ರಮುಖ ಪಕ್ಷಗಳ ನಾಯಕರು ಬಹಿರಂಗವಾಗಿ ಮಾಡುತ್ತಿರುವ ಆರೋಪಗಳನ್ನು ಆಧರಿಸಿ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ವಿಚಾರಣೆ ನಡೆಸಬೇಕು. ತಪ್ಪಿತಸ್ಥರಿಗೆ ಶಿಕ್ಷೆ ನೀಡಿ ಸಾರ್ವಜನಿಕ ರಂಗವನ್ನು ಸ್ವಚ್ಛಗೊಳಿಸಬೇಕು.

ಎಸ್. ಜನಾರ್ದನ ಮರವಂತೆ, ಉಡುಪಿ

ರಾಜಕೀಯ ಎಂದರೆ...?

ಒಬ್ಬರನ್ನೊಬ್ಬರು
ರಾಜಾರೋಷವಾಗಿ ಹೀಗಳೆದು,
ಜಟಾಪಟಿ ನಡೆಸಿ ಕಿತ್ತಾಟಕ್ಕೆ
ಮಾರ್ಗ ತೋರುವ
ಯಥಾವತ್ ರೂಪವೇ ರಾಜಕೀಯ!

ಹರಳಹಳ್ಳಿ ಪುಟ್ಟರಾಜು
ಪಾಂಡವಪುರ

ಕಾಡಿಗೆ ಲಗ್ಗೆ: ಯಾವ ನೀತಿ, ಯಾವ ನಿಯಮ?

ರಾಜ್ಯದಲ್ಲಿ ಹರಡಿರುವ 20 ಸಾವಿರ ಚದರ ಕಿ.ಮೀ.ಗೂ ಹೆಚ್ಚಿನ ಪರಿಸರ ಸೂಕ್ಷ್ಮ ಅರಣ್ಯವಲಯಕ್ಕೆ ಹಿಂದಿನ ನಲವತ್ತು ವರ್ಷಗಳಲ್ಲಿ ಯಾವ ರೀತಿಯ ಆಪತ್ತು ಒದಗಿಬಂದಿದೆ ಎಂಬ ಬಗ್ಗೆ ಪತ್ರಿಕಾ ಲೇಖನಗಳು ಮತ್ತು ವರದಿಗಳು ಬೆಳಕು ಚೆಲ್ಲಿವೆ. ಕರ್ನಾಟಕವು ಹೇಗೆ ತನ್ನ ಪರಿಸರವನ್ನು ಕಾಪಾಡಿಕೊಳ್ಳಲಿದೆ ಎಂಬುದರ ಮೇಲೆ, ಬರೀ ಕರ್ನಾಟಕವಲ್ಲದೆ ದೇಶದ ಬಹುಪಾಲು ಭೂಭಾಗದ ಭವಿಷ್ಯದ ಆರೋಗ್ಯ ನಿಂತಿದೆ. ಪಶ್ಚಿಮಘಟ್ಟದ ಕಾಡುಗಳು ಪೋಷಿಸುವ ಮಳೆಗಾಳಿಯ ಬೀಸು ದಕ್ಷಿಣ ಭಾರತದ ಎಲ್ಲಾ ದೊಡ್ಡ ನದಿಗಳ ಜೀವಸೆಲೆಯಾಗಿರುವುದು ಒಂದೆಡೆಯಾದರೆ, ಕರ್ನಾಟಕದ ಪ್ರಸ್ಥಭೂಮಿಯು ಆ ಕಾಡುಗಳ ಹೊರತಾಗಿ ಬಹುತೇಕ ಮರುಭೂಮಿಗೆ ಸಮನಾದ ಬೆಂಕಿಯ ಬಾಣಲೆ ಎನ್ನುವುದು ಇನ್ನೊಂದು ಕಹಿ ಸತ್ಯ. ಕಾಡುಗಳನ್ನು ಎಗ್ಗಿಲ್ಲದೇ ಸವರುವ ಅಥವಾ ಕಬಳಿಸುವ ಜನ ಯಾರು ಎಂದರೆ ರೆಸಾರ್ಟುಗಳು, ಕೋಟ್ಯಧಿಪತಿಗಳ ಖಾಸಗಿ ಬಂಗಲೆ ಕಾಲೊನಿಗಳು, ಕಣ್ಣು ನೋಡಿದಷ್ಟೂ ದೂರಕ್ಕೆ ತೋಟ, ಎಸ್ಟೇಟುಗಳ ಹೆಸರಿನಲ್ಲಿ ನಡೆಯುತ್ತಿರುವ ಭೂ ಪರಿವರ್ತನೆಯ ಕರಾಳ ಜಾಲದ ಸಂಪರ್ಕವುಳ್ಳ ಅಧಿಕಾರವರ್ಗದವರು ಎನ್ನುವುದು ಸರ್ವವಿಧಿತ. ಇವರೊಂದಿಗೆ ಇಂದು ಕಾಡನ್ನು ಒತ್ತುವರಿ ಮಾಡಿಕೊಂಡು, ಮುಂದೊಂದು ದಿನ ಹಕ್ಕು ಸಿಕ್ಕೇ ಸಿಗಲಿದೆ ಎಂಬ ದೂರಗಾಮಿ ರಾಜಕೀಯ ಆಟದಲ್ಲಿ ಪಾಲುದಾರರಾಗಿರುವ, ಸ್ವಂತ ನೆಲದ ಒಡೆತನ ಇರುವ ಬಲಿಷ್ಠ ರೈತರು ಮತ್ತು ಒಡೆತನ ಇರದ ಬಗರ್‌ಹುಕುಂ ಉಳುಮೆ ಮಾಡುವ ಬಡಮಂದಿಯ ಕೈವಾಡವೂ ಇದೆ. ಕಳ್ಳರ ಸಂತೆಯಲ್ಲಿ ಯಾವ ನೀತಿ, ಯಾವ ನಿಯಮ?

ರಾಜ್ಯ ಸರ್ಕಾರಕ್ಕೆ ನಿಜವಾದ ಕಾಳಜಿ ಇದ್ದರೆ, ತನ್ನವರು ಪರರು ಎನ್ನದೆ, ರಾಜ್ಯದ ಎಲ್ಲಾ ಕಾಡುಗಳಲ್ಲಿ ನಡೆದಿರುವ ಅವ್ಯವಹಾರಗಳನ್ನು ಮಟ್ಟಹಾಕುವ ಬದ್ಧತೆ ತೋರಬೇಕಾಗಿದೆ. ಅಧಿಕಾರಿಶಾಹಿಯ ಹಿತಾಸಕ್ತಿಯ ಮುಂದೆ ಯಾವ ಕಾಡು, ಯಾರ ಭವಿಷ್ಯ? ಕರ್ನಾಟಕದ ನಿಸರ್ಗ ಸಂಪತ್ತನ್ನು ತಾನೂ ಮುಕ್ಕುವುದಿಲ್ಲ, ಬೇರೆಯವರಿಗೂ ಮುಕ್ಕಲು ಗುತ್ತಿಗೆ ಕೊಡುವುದಿಲ್ಲ ಎಂದು ಕರ್ನಾಟಕವು ಪ್ರಪಂಚಕ್ಕೆ ವಾಗ್ದಾನ ಕೊಟ್ಟು ಉಳಿಸಿಕೊಳ್ಳುವುದೇ?

ಶ್ರೀಕಂಠ, ಬೆಂಗಳೂರು

ನೌಕರರ ಸಂಘದ ಚುನಾವಣೆ: ಮೀಸಲಾತಿ ಯಾಕಿಲ್ಲ?

ಸಮಾಜದಲ್ಲಿ ಅವಕಾಶವಂಚಿತ ಸಮುದಾಯಗಳಿಗೆ ಅವಕಾಶ ಸಿಗಬೇಕೆಂಬ ಕಾರಣಕ್ಕೆ, ಶಾಸನಸಭೆಯೂ ಸೇರಿದಂತೆ ಸರ್ಕಾರದಿಂದ ಅನುಮೋದಿಸಲಾದ ಅನೇಕ ಸಂಘ-ಸಂಸ್ಥೆಗಳಲ್ಲಿ ಸಂವಿಧಾನಬದ್ಧವಾದ ಮೀಸಲಾತಿ ನೀಡಲಾಗಿದೆ. ಆದರೆ ಇಡೀ ರಾಜ್ಯದ ನೌಕರರನ್ನು ಪ್ರತಿನಿಧಿಸುವ, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ ನಡೆಯುವ ಸರ್ಕಾರಿ ನೌಕರರ ಸಂಘದ ಚುನಾವಣೆಗೆ ಮಾತ್ರ ಮೀಸಲಾತಿ ವ್ಯವಸ್ಥೆ ಇಲ್ಲ. ಹೀಗಾಗಿ, ಸಂಘದ ಚುನಾವಣೆಯಲ್ಲಿ ತಾಲ್ಲೂಕು ನಿರ್ದೇಶಕ ಸ್ಥಾನದಿಂದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದವರೆಗಿನ ಹುದ್ದೆಗಳು ಪ್ರಬಲರಿಗೆ ಮೀಸಲಾಗುತ್ತಿವೆ. ಸಂಘದ ಚುನಾವಣೆ ಇನ್ನೇನು ಕೆಲವೇ ತಿಂಗಳಲ್ಲಿ ನಡೆಯಲಿದ್ದು, ಅದರಲ್ಲಿ ಮಹಿಳೆಯರು, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ತರಬೇಕಾಗಿದೆ.

ಮಲ್ಲಪ್ಪ ಫ. ಕರೇಣ್ಣನವರ, ಮೋಟೆಬೆನ್ನೂರು, ಬ್ಯಾಡಗಿ

ಲಂಗು ಲಗಾಮಿಲ್ಲದ ಕೋಚಿಂಗ್ ಕೇಂದ್ರಗಳು

ದೆಹಲಿಯು ದೇಶದಾದ್ಯಂತದ ನಾಗರಿಕ ಸೇವಾ ಆಕಾಂಕ್ಷಿಗಳಿಗೆ ಬಹಳ ಹಿಂದಿನಿಂದಲೂ ಒಂದು ಆಕರ್ಷಣೆಯ ಸ್ಥಳವಾಗಿದೆ. ನಗರದ ಕೋಚಿಂಗ್ ಉದ್ಯಮವು ಬಹುಕೋಟಿ ಉದ್ಯಮವಾಗಿ ಬೆಳೆದಿದೆ. ದೇಶದ ಕಠಿಣ ಪರೀಕ್ಷೆಗಳಲ್ಲಿ ಒಂದಾದ ಯುಪಿಎಸ್‌ಸಿ ಪರೀಕ್ಷೆಯನ್ನು ಭೇದಿಸಲು ಬಯಸುವ ಸಾವಿರಾರು ಯುವಜನರು ಮೂಲ ಸೌಕರ್ಯಗಳಿಲ್ಲದ ಕೋಚಿಂಗ್ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಇತ್ತೀಚೆಗೆ ನೆಲಮಹಡಿಗೆ ಮಳೆನೀರು ನುಗ್ಗಿ ಮೂವರು ಆಕಾಂಕ್ಷಿಗಳು ಮೃತಪಟ್ಟ ಪ್ರಕರಣ ಇದಕ್ಕೆ ನಿದರ್ಶನ. ನಮ್ಮ ರಾಜ್ಯದಲ್ಲೂ ಪ್ರಮುಖ ನಗರಗಳಲ್ಲಿ ನಡೆಯುವ ಅನೇಕ ಕೋಚಿಂಗ್ ಕೇಂದ್ರಗಳು ಬರುವ ಲಾಭದ ಬಗ್ಗೆ ಮಾತ್ರ ಗಮನಹರಿಸುತ್ತಾ, ಅಭ್ಯರ್ಥಿಗಳಿಗೆ ಒದಗಿಸಬೇಕಾದ ಮೂಲ ಸೌಕರ್ಯಗಳನ್ನು ನಿರ್ಲಕ್ಷಿಸುತ್ತಿವೆ. ಲಂಗು ಲಗಾಮು ಇಲ್ಲದ ಇಂತಹ ಕೇಂದ್ರಗಳ ಮೇಲೆ ಸೂಕ್ತ ನಿಗಾ ಇಟ್ಟು ಕ್ರಮ ಜರುಗಿಸುವ ವ್ಯವಸ್ಥೆ ಕಟ್ಟುನಿಟ್ಟಾಗಿ ಜಾರಿಗೆ ಬರಲಿ.

ಲಗಮಣ್ಣಾ ಪೂಜಾರಿ, ಕೂಟನೂರ್, ಜೇವರ್ಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಬಾಂಗ್ಲಾ ದೇಶ: ಚರಿತ್ರೆ ಸೃಷ್ಟಿಸಿದ ವಿದ್ಯಾರ್ಥಿ ದಂಗೆ





ಹಲವು ಸೇನಾ ಕ್ರಾಂತಿಗಳ ಕಾರಣಕ್ಕೆ ಅಸ್ಥಿರವಾಗಿದ್ದ ಬಾಂಗ್ಲಾ ದೇಶದ ರಾಜಕಾರಣ ಮತ್ತು ಆಡಳಿತಕ್ಕೆ ಸ್ಥಿರತೆ ನೀಡಿದ್ದ ಶೇಖ್ ಹಸೀನಾ ನೇತೃತ್ವದ ಸರ್ಕಾರವು ಜನರೇ, ಅದರಲ್ಲೂ ಪ್ರಮುಖವಾಗಿ ವಿದ್ಯಾರ್ಥಿಗಳೇ ಮುನ್ನಡೆಸಿದ್ದ ದಂಗೆಯಿಂದಾಗಿ ಪತನವಾಗಿದೆ. ಸತತ ನಾಲ್ಕನೇ ಬಾರಿ ಅಧಿಕಾರಕ್ಕೆ ಏರಿದ್ದ ಹಸೀನಾ ದೇಶ ತೊರೆದಿದ್ದಾರೆ. ಮೀಸಲಾತಿ ವಿಚಾರವನ್ನು ಇಟ್ಟುಕೊಂಡು ಎರಡು ತಿಂಗಳ ಹಿಂದೆ ರೂಪುಗೊಂಡ ಚಳವಳಿ, ಬಾಂಗ್ಲಾ ದೇಶದ ರಾಜಕಾರಣದ ದಿಕ್ಕನ್ನೇ ಬದಲಿಸಿದೆ. ಶ್ರೀಲಂಕಾದಲ್ಲಿ ಆದಂತೆ, ಜನರೇ ಸರ್ಕಾರವನ್ನು ಉರುಳಿಸಿದ್ದಾರೆ

ಪ್ರಜಾವಾಣಿ ವಾರ್ತೆ

‘ಅಂತಿಮ ಹೋರಾಟದ ಗಳಿಗೆ ಹತ್ತಿರವಾಗಿದೆ. ವಿದ್ಯಾರ್ಥಿ ದಂಗೆಗೆ ಅಂತಿಮ ಸಹಿ ಹಾಕುವ ಕಾಲ ಬಂದಿದೆ. ಚರಿತ್ರೆಯ ಭಾಗವಾಗಲು ಢಾಕಾಕ್ಕೆ ಬನ್ನಿ. ವಿದ್ಯಾರ್ಥಿಗಳು ಹೊಸ ಇತಿಹಾಸ ಸೃಷ್ಟಿಸಲಿದ್ದಾರೆ...’

–ಹೀಗೆ ಕರೆ ಕೊಟ್ಟಿದ್ದು ‘ತಾರತಮ್ಯ ವಿರೋಧಿ ವಿದ್ಯಾರ್ಥಿ ಚಳವಳಿ’ಯ ಸಂಚಾಲಕ ಆಸಿಫ್ ಮಹಮ್ಮದ್. ಅವರು ಹೇಳಿದಂತೆಯೇ ಸೋಮವಾರ ಬಾಂಗ್ಲಾದೇಶದಲ್ಲಿ ಇತಿಹಾಸ ನಿರ್ಮಾಣವಾಗಿದೆ. 2024ರ ಜನವರಿಯಲ್ಲಿ ಸತತ ನಾಲ್ಕನೇ ಬಾರಿ ದೇಶದ ಪ್ರಧಾನಿಯಾಗಿ ಅಧಿಕಾರಕ್ಕೇರಿದ್ದ ಶೇಖ್ ಹಸೀನಾ ಅವರು ಅಧಿಕಾರದಿಂದ ಕೆಳಗಿಳಿದಿದ್ದಾರೆ. ಬಾಂಗ್ಲಾದ ರಾಜಕೀಯ ಇತಿಹಾಸದಲ್ಲಿ ಮಹತ್ವದ ವಿದ್ಯಮಾನವೊಂದು ಘಟಿಸಿದೆ.

ಜನವರಿಯಲ್ಲಿ ಪ್ರಧಾನಿಯಾಗಿ ಆಯ್ಕೆಯಾದಾಗಲೇ ಹಸೀನಾ ವಿರುದ್ಧ ಆರೋಪಗಳು ಬಂದಿದ್ದವು. ಚುನಾವಣೆ ಮುಕ್ತವಾಗಿ, ನ್ಯಾಯಸಮ್ಮತವಾಗಿ ನಡೆಯುವುದೇ ಎಂದು ವಿರೋಧ ಪಕ್ಷಗಳು ಅನುಮಾನ ವ್ಯಕ್ತಪಡಿಸಿದ್ದವು. ಕೆಲವು ವಿರೋಧ ಪಕ್ಷಗಳು ಚುನಾವಣೆಯನ್ನು ಬಹಿಷ್ಕರಿಸಿದ್ದವು. ಪ್ರಮುಖ ವಿರೋಧ ಪಕ್ಷವಾದ ಬಾಂಗ್ಲಾದೇಶ್ ನ್ಯಾಷನಲಿಸ್ಟ್ ಪಾರ್ಟಿಯ (ಬಿಎನ್‌ಪಿ) ಮುಖಂಡರನ್ನು ಬಂಧಿಸಲಾಗಿತ್ತು. ಬಹುತೇಕ ಕ್ಷೇತ್ರಗಳಲ್ಲಿ ಹಸೀನಾ ಅವರ ಪಕ್ಷ ಅವಾಮಿ ಲೀಗ್‌ಗೆ ಪ್ರತಿಸ್ಪರ್ಧಿಗಳೇ ಇರಲಿಲ್ಲ. ಚುನಾವಣೆಯಲ್ಲಿ ಶೇ 40ರಷ್ಟು ಮಾತ್ರ ಮತದಾನವಾಗಿತ್ತು. ಹಸೀನಾ ಪಕ್ಷ ಮೂರನೇ ಎರಡರಷ್ಟು ಬಹುಮತ ಪಡೆದಿತ್ತು.

ಹಸೀನಾ ಅವರ ಅಧಿಕಾರ ಅಬಾಧಿತ ಎಂದೇ ಎಲ್ಲರೂ ಭಾವಿಸಿದ್ದರು. ಅವರ ಅಧಿಕಾರಾವಧಿಯಲ್ಲಿ ದೇಶ ಹಲವು ವಲಯಗಳಲ್ಲಿ ಅಭಿವೃದ್ಧಿ ಸಾಧಿಸಿತ್ತು. ಆರ್ಥಿಕವಾಗಿಯೂ ಮುಂದುವರಿದ ದೇಶವಾಗುವ ದಿಕ್ಕಿನಲ್ಲಿ ಹೆಜ್ಜೆ ಇಟ್ಟಿತ್ತು. ಅದೇ ಹೊತ್ತಿಗೆ, ದೇಶದಲ್ಲಿ ಎಲ್ಲ ವಲಯಗಳ ಮೇಲೂ ಅವರ ಹಿಡಿತ ಪ್ರಬಲವಾಗಿತ್ತು. ಈ ಕಾರಣಕ್ಕೆ ಒಂದು ವರ್ಗದ ಜನರಲ್ಲಿ ಹಸೀನಾ ಅಧಿಕಾರದ ವಿರುದ್ಧದ ಅಸಮಾಧಾನ ತೀವ್ರವಾಗಿತ್ತು. ಬೂದಿ ಮುಚ್ಚಿದ ಕೆಂಡದಂತಿದ್ದ ಅದಕ್ಕೆ ಒಂದು ಸ್ಪಷ್ಟ ರೂಪ ಕೊಟ್ಟಿದ್ದು ವಿದ್ಯಾರ್ಥಿಗಳ ದಂಗೆ.

ಮೀಸಲಾತಿ ವಿರೋಧಿಸಿ ವಿದ್ಯಾರ್ಥಿಗಳು ‘ತಾರತಮ್ಯ ವಿರೋಧಿ ವಿದ್ಯಾರ್ಥಿ ಚಳವಳಿ’ ರೂಪಿಸಿದರು. ಸರ್ಕಾರ ಹಾಗೂ ಅವಾಮಿ ಲೀಗ್‌ನ ವಿದ್ಯಾರ್ಥಿ ವಿಭಾಗವಾದ ಛಾತ್ರಾ ಲೀಗ್‌ನಂಥ ಸಂಘಟನೆಗಳ ಸದಸ್ಯರು ಮೀಸಲಾತಿ ವಿರೋಧಿ ಹೋರಾಟದ ದಮನಕ್ಕೆ ಮುಂದಾದರು. ಅದರಿಂದ ವಿದ್ಯಾರ್ಥಿ ಹೋರಾಟ ಮತ್ತಷ್ಟು ತೀವ್ರಗೊಂಡಿತು.

ಜುಲೈ 16ರಂದು ಪ್ರತಿಭಟನೆನಿರತ ವಿದ್ಯಾರ್ಥಿಗಳು ಹಾಗೂ ಭದ್ರತಾ ಸಿಬ್ಬಂದಿ ಮತ್ತು ಸರ್ಕಾರದ ಪರವಾದ ಕಾರ್ಯಕರ್ತರ ನಡುವೆ ಸಂಘರ್ಷ ಉಂಟಾಗಿತ್ತು. ಪೊಲೀಸರು ಅಶ್ರುವಾಯು ಪ್ರಯೋಗಿಸಿದ್ದರು. ಕಂಡಲ್ಲಿ ಗುಂಡು ಆದೇಶ ನೀಡಿ ಕರ್ಫ್ಯೂ ಜಾರಿಗೊಳಿಸಿದ್ದರು. ಇಂಟರ್‌ನೆಟ್ ಮತ್ತು ಮೊಬೈಲ್ ಡೇಟಾ ಅನ್ನು ಕಡಿತಗೊಳಿಸಲಾಗಿತ್ತು. ಹೀಗೆ ಪ್ರತಿಭಟನೆ ಹಿಂಸಾರೂಪ ತಳೆಯಿತು. ಅದನ್ನು ದಮನ ಮಾಡಲು ಹಸೀನಾ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಂಡಿತು.

ಹಿಂಸಾಚಾರಕ್ಕೆ ಸಂಬಂಧಿಸಿ 11 ಸಾವಿರ ಜನರನ್ನು ಸರ್ಕಾರ ಬಂಧಿಸಿತ್ತು. ಜಮಾತ್-ಎ-ಇಸ್ಲಾಮಿ ಸಂಘಟನೆ ಮತ್ತು ಅದರ ವಿದ್ಯಾರ್ಥಿ ವಿಭಾಗವಾದ ಇಸ್ಲಾಮಿ ಛಾತ್ರಾ ಶಿಬಿರ್ ಅನ್ನು ಬಾಂಗ್ಲಾದ ಭಯೋತ್ಪಾದನಾ ನಿಗ್ರಹ ಕಾಯ್ದೆಯ ಅಡಿ ಆಗಸ್ಟ್ 1ರಂದು ನಿಷೇಧ ಮಾಡಲಾಗಿತ್ತು. ಈ ಸಂಘರ್ಷದಲ್ಲಿ 300ಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ ಎಂದು ಪ್ರತಿಭಟನಕಾರರು ಪ್ರತಿಪಾದಿಸಿದ್ದರು.

ಸುಪ್ರೀಂ ಕೋರ್ಟ್ ಮೀಸಲಾತಿಯನ್ನು ಹಿಂಪಡೆಯುವಂತೆ ಸರ್ಕಾರಕ್ಕೆ ಸೂಚನೆ ನೀಡಿತು. ಅದಕ್ಕೆ ಸರ್ಕಾರ ಸಮ್ಮತಿಸಿತು. ಅಲ್ಲಿಗೆ ಪ್ರತಿಭಟನೆ ನಿಲ್ಲಬಹುದು ಎನ್ನುವುದು ಸರ್ಕಾರದ ಲೆಕ್ಕಾಚಾರವಾಗಿತ್ತು. ಆದರೆ, ಹಿಂಸಾಚಾರಕ್ಕೆ ಹಾಗೂ ವಿದ್ಯಾರ್ಥಿಗಳ ಸಾವಿಗೆ ಕಾರಣರಾದ ಶೇಖ್ ಹಸೀನಾ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ವಿದ್ಯಾರ್ಥಿಗಳು ಪಟ್ಟು ಹಿಡಿದರು. ತಮ್ಮ ಜತೆಗೆ ಸಮಾಜದ ಎಲ್ಲ ವರ್ಗದವರನ್ನೂ ಸೇರಿಸಿಕೊಂಡು, ಪ್ರತಿಭಟನೆಯನ್ನು ಮತ್ತಷ್ಟು ವಿಸ್ತರಿಸಿದರು. ವಿರೋಧ ಪಕ್ಷಗಳೂ ಅವರ ಜತೆಗೂಡಿದವು. ಮೀಸಲಾತಿ ವಿರೋಧಿ ವಿದ್ಯಾರ್ಥಿ ದಂಗೆಯು ಸರ್ಕಾರ ವಿರೋಧಿ ಜನರ ದಂಗೆಯಾಗಿ ಪರಿವರ್ತನೆಗೊಂಡಿತು.

1971ರಲ್ಲಿ ಪ್ರತ್ಯೇಕ ರಾಷ್ಟ್ರವಾದ ಬಳಿಕ ಹಲವು ಸೇನಾ ಕ್ರಾಂತಿಗಳಿಗೆ ಸಾಕ್ಷಿಯಾಗಿದ್ದ ಬಾಂಗ್ಲಾದೇಶದಲ್ಲಿ ಜನರ ದಂಗೆಗೆ ಪ್ರಧಾನಿ ದೇಶ ತೊರೆದಿರುವುದು, ಸರ್ಕಾರ ಪತನವಾಗಿರುವುದು ಇದೇ ಮೊದಲು.

ಆಧಾರ: ಪಿಟಿಐ, ಬಿಬಿಸಿ, ರಾಯಿಟರ್ಸ್

ಕ್ಷಿಪ್ರ ಕ್ರಾಂತಿ ಬಾಂಗ್ಲಾಕ್ಕೆ ಹೊಸತಲ್ಲ

1975

ಸೇನಾ ಕ್ರಾಂತಿಯಲ್ಲಿ ದೇಶದ ಮೊದಲ ಪ್ರಧಾನಿ, ಶೇಖ್ ಮುಜೀಬುರ್ ರಹಮಾನ್ (ಶೇಖ್ ಹಸೀನಾ ತಂದೆ) ಮತ್ತು ಕುಟುಂಬದ ಸದಸ್ಯರ ಹತ್ಯೆ. ಸೇನಾ ಆಡಳಿತ ಜಾರಿ. ಅದೇ ವರ್ಷ 2 ಬಾರಿ ಸೇನಾ ಕ್ರಾಂತಿ ಮೂಲಕ ಜನರಲ್ ಜಿಯಾಉರ್ ರೆಹಮಾನ್ ಅಧಿಕಾರಕ್ಕೆ

1981

ಚಿತ್ತಗಾಂಗ್ ನಗರದಲ್ಲಿನ ಸರ್ಕಾರಿ ಅತಿಥಿಗೃಹಕ್ಕೆ ನುಗ್ಗಿದ ಬಂಡುಕೋರರಿಂದ ಜಿಯಾಉರ್ ರಹಮಾನ್ ಹತ್ಯೆ. ರಹಮಾನ್ ಅವರಿಗೆ ನಿಷ್ಠೆ ಪ್ರದರ್ಶಿಸಿದ್ದ ಸೇನೆಯಿಂದ ಬಂಡಾಯಕ್ಕೆ ಕಡಿವಾಣ

1982

ರಹಮಾನ್ ಉತ್ತರಾಧಿಕಾರಿ ಅಬ್ದುಸ್ ಸತ್ತಾರ್ ಅವರನ್ನು ರಕ್ತರಹಿತ ಕ್ರಾಂತಿಯ ಮೂಲಕ ಪದಚ್ಯುತಿಗೊಳಿಸಿದ ಹುಸೇನ್ ಮುಹಮ್ಮದ್ ಇರ್ಷಾದ್ ನೇತೃತ್ವದ ತಂಡ. ಮುಖ್ಯ ಸೇನಾ ಆಡಳಿತಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಸತ್ತಾರ್

2007

ಸೇನಾ ಮುಖ್ಯಸ್ಥರ ನೇತೃತ್ವದಲ್ಲಿ ನಡೆದ ಸೇನಾ ಕ್ರಾಂತಿ. ಹಂಗಾಮಿ ಸರ್ಕಾರಕ್ಕೆ ಬೆಂಬಲ ನೀಡಿದ ಸೇನೆ

2009

ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಶೇಖ್ ಹಸೀನಾ. ಅದೇ ವರ್ಷ, ವೇತನ ಮತ್ತು ಸೌಲಭ್ಯಗಳ ಬಗ್ಗೆ ಅಸಮಾಧಾನಗೊಂಡಿದ್ದ ಅರೆಸೇನಾ ಪಡೆಯ ಸಿಬ್ಬಂದಿಯಿಂದ ಬಂಡಾಯ. ಢಾಕಾದಲ್ಲಿ 70 ಮಂದಿಯ ಹತ್ಯೆ. ಮೃತಪಟ್ಟವರಲ್ಲಿ ಬಹುತೇಕರು ಸೇನಾ ಅಧಿಕಾರಿಗಳು. 10ಕ್ಕೂ ಹೆಚ್ಚು ನಗರಗಳಿಗೆ ಹಬ್ಬಿದ್ದ ದಂಗೆ ಆರು ದಿನಗಳಲ್ಲಿ ನಿಯಂತ್ರಣಕ್ಕೆ


2012

ನಿವೃತ್ತ ಮತ್ತು ಸೇವೆಯಲ್ಲಿದ್ದ ಅಧಿಕಾರಿಗಳು ಮಾಡಿದ ದಂಗೆ ಯತ್ನವನ್ನು ವಿಫಲಗೊಳಿಸಿದ್ದಾಗಿ ಬಾಂಗ್ಲಾ ಸೇನೆ ಹೇಳಿಕೆ. ದೇಶದಾದ್ಯಂತ ಷರಿಯಾ ಕಾನೂನು ಜಾರಿಗೆ ತರಬೇಕು ಎಂಬ ಅಭಿಯಾನದ ಭಾಗವಾಗಿ ದಂಗೆ ಯತ್ನ ನಡೆದಿತ್ತು ಎಂದು ಹೇಳಿದ್ದ ಸೇನೆ

ದಂಗೆಯಾದ ಆಕ್ರೋಶ

- 1971ರಲ್ಲಿ ಪಾಕಿಸ್ತಾನದೊಂದಿಗೆ ನಡೆದ ಯುದ್ಧದಲ್ಲಿ ಪಾಲ್ಗೊಂಡಿದ್ದ ಯೋಧರ ಕುಟುಂಬಸ್ಥರಿಗೆ ಸರ್ಕಾರಿ ಉದ್ಯೋಗದಲ್ಲಿ ಶೇ 30ರಷ್ಟು ಮೀಸಲಾತಿ ಕಲ್ಪಿಸುವ ವ್ಯವಸ್ಥೆ ಸಂಘರ್ಷದ ಮೂಲ
- 1972ರಲ್ಲಿ ಜಾರಿಗೆ ಬಂದ ಈ ಮೀಸಲಾತಿ ವ್ಯವಸ್ಥೆ 2018ರವರೆಗೂ ಜಾರಿಯಲ್ಲಿತ್ತು. ಆ ವರ್ಷ ಕೆಲವು ತಿಂಗಳ ಮಟ್ಟಿಗೆ ಈ ವ್ಯವಸ್ಥೆಯನ್ನು ರದ್ದುಪಡಿಸಲಾಗಿತ್ತು. ಆ ಬಳಿಕ ಮತ್ತೆ ಜಾರಿಗೆ ತರಲಾಗಿತ್ತು
- ಈ ಮೀಸಲಾತಿ ವ್ಯವಸ್ಥೆ ತಾರತಮ್ಯ ಮಾಡುತ್ತದೆ ಮತ್ತು ಹಸೀನಾ ನೇತೃತ್ವದ ಅವಾಮಿ ಲೀಗ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಗೆ ಪ್ರಯೋಜನಕಾರಿಯಾಗಿದೆ ಎಂಬುದು ಸರ್ಕಾರಿ ಉದ್ಯೋಗ ಆಕಾಂಕ್ಷಿಗಳು, ವಿದ್ಯಾರ್ಥಿಗಳು ಮತ್ತು ಯುವಜನರ ಪ್ರಮುಖ ಆರೋಪವಾಗಿತ್ತು
- ಈ ಮೀಸಲಾತಿ ವ್ಯವಸ್ಥೆಯನ್ನು ರದ್ದುಪಡಿಸಿ ಪ್ರತಿಭೆ ಆಧಾರದಲ್ಲಿ ಸರ್ಕಾರಿ ಉದ್ಯೋಗ ಕೊಡಬೇಕು ಎಂಬುದು ಯುವಜನರ ಆಗ್ರಹವಾಗಿತ್ತು
- ಬಾಂಗ್ಲಾದಲ್ಲಿ ನಿರುದ್ಯೋಗ ಸಮಸ್ಯೆ ಇದೆ. ಖಾಸಗಿ ಕಂಪನಿಗಳಲ್ಲಿ ನೀಡುವ ವೇತನವೂ ಕಡಿಮೆ. ಹೀಗಾಗಿ ಪದವೀಧರರು, ಸೇವಾ ಭದ್ರತೆ ಮತ್ತು ಸವಲತ್ತುಗಳಿರುವ ಸರ್ಕಾರಿ ಉದ್ಯೋಗದತ್ತ ಆಕರ್ಷಿತರಾಗಿದ್ದರು
- ದೇಶದಲ್ಲಿ ಹೆಚ್ಚಾದ ಭ್ರಷ್ಟಾಚಾರ, ಹಣದುಬ್ಬರ, ನಿರುದ್ಯೋಗ ಸಮಸ್ಯೆ ಕೂಡ ಹಸೀನಾ ಸರ್ಕಾರದ ಬಗ್ಗೆ ಜನರಲ್ಲಿ ಅಸಮಾಧಾನ ಹುಟ್ಟುಹಾಕಿತ್ತು
- ಜೂನ್ ತಿಂಗಳಲ್ಲಿ ಢಾಕಾ ವಿ.ವಿಯಲ್ಲಿ ಮೀಸಲಾತಿ ವ್ಯವಸ್ಥೆಯ ವಿರುದ್ಧ ಆರಂಭಗೊಂಡ ಪ್ರತಿಭಟನೆ ರಾಷ್ಟ್ರದಾದ್ಯಂತ ವ್ಯಾಪಿಸಿತ್ತು. 200ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದರು. ಇದಕ್ಕೆ ಶೇಖ್ ಹಸೀನಾ ಅವರೇ ಕಾರಣ ಎಂಬ ಆಕ್ರೋಶ ಯುವಜನರಲ್ಲಿ ಮಡುಗಟ್ಟಿತ್ತು
- ‘ಪ್ರತಿಭಟನೆ ವೇಳೆ ಉಂಟಾದ ಹಿಂಸಾಚಾರದಲ್ಲಿ ಪಾಲ್ಗೊಂಡವರು ವಿದ್ಯಾರ್ಥಿಗಳಲ್ಲ. ಘರ್ಷಣೆ ಮತ್ತು ಹಿಂಸಾಚಾರಕ್ಕೆ ಇಸ್ಲಾಮಿಕ್ ಪಾರ್ಟಿ, ಜಮಾತ್ ಎ–ಇಸ್ಲಾಮಿ ಮತ್ತು ಪ್ರಮುಖ ಪ್ರತಿಪಕ್ಷ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಕಾರಣ’ ಎಂದು ಹಸೀನಾ ಹೇಳಿದ್ದರು.
- ಜುಲೈ 21ರಂದು ಸುಪ್ರೀಂ ಕೋರ್ಟ್ ಶೇ 30ರಷ್ಟು ಮೀಸಲಾತಿ ವ್ಯವಸ್ಥೆಯನ್ನು ರದ್ದುಪಡಿಸಿ, 1971ರ ಯುದ್ಧದಲ್ಲಿ ಭಾಗವಹಿಸಿದ್ದ ಯೋಧರ ಕುಟುಂಬದ ಸದಸ್ಯರಿಗೆ ಶೇ 5ರಷ್ಟು ಮೀಸಲಾತಿ ನಿಗದಿಪಡಿಸಿತು. ಶೇ 93ರಷ್ಟು ಉದ್ಯೋಗಗಳನ್ನು ಪ್ರತಿಭೆ ಆಧಾರದಲ್ಲಿ ಭರ್ತಿ ಮಾಡಲು ಮತ್ತು ಶೇ 2ರಷ್ಟು ಹುದ್ದೆಗಳನ್ನು ಜನಾಂಗೀಯ ಅಲ್ಪಸಂಖ್ಯಾತರು, ಲೈಂಗಿಕ ಅಲ್ಪಸಂಖ್ಯಾತರು ಮತ್ತು ಅಂಗವಿಕಲರಿಗೆ ಕಾಯ್ದಿರಿಸಿ ತೀರ್ಪು ನೀಡಿತು. ನಂತರ ಕೆಲವು ದಿನ ಪ್ರತಿಭಟನೆ ತಣ್ಣಗಾಗಿತ್ತು
- ಹೋರಾಟದ ಸಂದರ್ಭದಲ್ಲಿ ಪ್ರತಿಭಟನಕಾರರು ಮೃತಪಡಲು ಪ್ರಧಾನಿ ಶೇಖ್ ಹಸೀನಾ ಕಾರಣ, ಇದಕ್ಕೆ ಅವರು ಕ್ಷಮೆ ಕೋರಬೇಕು, ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಮತ್ತೆ ಯುವಜನರು ಚಳವಳಿ ಆರಂಭಿಸಿದರು
- ಅಸಹಕಾರ ಚಳವಳಿಯ ಜೊತೆಗೆ ಆಗಸ್ಟ್ 5ಕ್ಕೆ ‘ಢಾಕಾದತ್ತ ಮೆರವಣಿಗೆ’ ನಡೆಸಲು ನೀಡಿದ ಕರೆಗೆ ಜನರಿಂದ ಅಭೂತಪೂರ್ವ ಬೆಂಬಲ ದೊರೆತು, ಅದು ದಂಗೆಯಾಗಿ ಮಾರ್ಪಟ್ಟಿತು

ಶೇಖ್ ಹಸೀನಾ ನಡೆದು ಬಂದ ದಾರಿ...



ಶೇಖ್ ಹಸೀನಾ, ಪೂರ್ವ ಬಂಗಾಳದಲ್ಲಿ 1947ರಲ್ಲಿ ಜನಿಸಿದರು. ಅವರ ತಂದೆ ಶೇಖ್ ಮುಜೀಬುರ್ ರಹಮಾನ್, ಬಾಂಗ್ಲಾದ ರಾಷ್ಟ್ರಪಿತ. ಪಾಕಿಸ್ತಾನದಿಂದ ಬಾಂಗ್ಲಾ ಪ್ರತ್ಯೇಕಗೊಳ್ಳುವ ನಿರ್ಣಾಯಕ ಹೋರಾಟದ ನಾಯಕತ್ವ ವಹಿಸಿದ್ದರು. ಅಷ್ಟೊತ್ತಿಗಾಗಲೇ ಢಾಕಾ ವಿಶ್ವವಿದ್ಯಾಲಯದಲ್ಲಿ ಶೇಖ್ ಹಸೀನಾ ವಿದ್ಯಾರ್ಥಿ ನಾಯಕಿಯಾಗಿ ಗುರುತಿಸಿಕೊಂಡಿದ್ದರು.

1975ರಲ್ಲಿ ನಡೆದ ಸೇನಾ ಕಾರ್ಯಾಚರಣೆಯಲ್ಲಿ ಮುಜೀಬುರ್ ರಹಮಾನ್ ಸೇರಿದಂತೆ ಅವರ ಕುಟುಂಬದ ಬಹುತೇಕ ಮಂದಿ ಹತ್ಯೆಗೊಳಗಾಗಿದ್ದರು. ಭಾರತದಲ್ಲಿ ಆಶ್ರಯ ಪಡೆದಿದ್ದ ಹಸೀನಾ ಅವರು, 1981ರಲ್ಲಿ ಬಾಂಗ್ಲಾಕ್ಕೆ ಹಿಂದಿರುಗಿ ತನ್ನ ತಂದೆಯ ಅವಾಮಿ ಲೀಗ್ ಪಕ್ಷದ ನಾಯಕತ್ವ ವಹಿಸಿಕೊಂಡರು. ಜನರಲ್ ಇರ್ಷಾದ್ ಅವರ ಸೇನಾ ಆಡಳಿತವನ್ನು ವಿರೋಧಿಸಿ ಇತರೆ ಪಕ್ಷಗಳೊಂದಿಗೆ ಆಂದೋಲನ ನಡೆಸಿ, ಜನಪ್ರಿಯ ನಾಯಕಿಯಾಗಿ ರೂಪುತಳೆದರು.

1996ರಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ಹಸೀನಾ, ಭಾರತದೊಂದಿಗೆ ಉತ್ತಮ ಸಂಬಂಧ ಕಾಪಾಡಿಕೊಂಡಿದ್ದರು. ನಂತರದ ಚುನಾವಣೆಯಲ್ಲಿ ಹಸೀನಾ ಅವರನ್ನು ಕೆಳಕ್ಕಿಳಿಸಿ, ಬೇಗಂ ಖಲೀದಾ ಝಿಯಾ ಪ್ರಧಾನಿ ಆಗಿದ್ದರು. ಮೂರು ದಶಕಕ್ಕೂ ಹೆಚ್ಚು ‘ಇಬ್ಬರು ಬೇಗಂ’ಗಳು ಬಾಂಗ್ಲಾವನ್ನು ಆಳಿದರು.

2009ರಲ್ಲಿ ಮತ್ತೆ ಅಧಿಕಾರಕ್ಕೇರಿದ ಹಸೀನಾ, ನಂತರ ಸತತವಾಗಿ ನಾಲ್ಕು ಬಾರಿ ದೇಶದ ಪ್ರಧಾನಿ ಆಗಿದ್ದರು. ಅವರ ಮೇಲೆ ಹಲವು ಭ್ರಷ್ಟಾಚಾರದ ಪ್ರಕರಣಗಳು ದಾಖಲಾಗಿದ್ದವು. ಅವರನ್ನು ದೇಶ ಬಿಟ್ಟು ಓಡಿಸುವ ಪ್ರಯತ್ನಗಳೂ ನಡೆದವು. 2004ರಲ್ಲಿ ಸೇರಿದಂತೆ ಹಲವು ಬಾರಿ ಅವರ ಹತ್ಯಾಯತ್ನಗಳು ನಡೆದಿವೆ.

ಸಿನಿ ಬಿಟ್ಸ್

‘ರಾನಿ’ಗೆ ಯು/ಎ ಪ್ರಮಾಣಪತ್ರ

ನಟ ಕಿರಣ್‌ರಾಜ್ ನಟನೆಯ ‘ರಾನಿ’ ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದ್ದು, ಚಿತ್ರಕ್ಕೆ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣಪತ್ರ ನೀಡಿದೆ. ಸಿನಿಮಾ ಆಗಸ್ಟ್ 30ರಂದು ತೆರೆಕಾಣುತ್ತಿದೆ.

‘ಬಡ್ಡೀಸ್’ ಸಿನಿಮಾ ಮೂಲಕ ಚಂದನವನದಲ್ಲಿ ಮಿಂಚಿದ ಕಿರಣ್‌ರಾಜ್, ‘ಕನ್ನಡತಿ’ ಧಾರಾವಾಹಿ ಬಳಿಕ ‘ರಾನಿ’ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದರು. ಗುರುತೇಜ್ ಶೆಟ್ಟಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ‘ಈ ಬಾರಿ ಆ್ಯಕ್ಷನ್ ಕಮರ್ಷಿಯಲ್ ಸಿನಿಮಾ ಮಾಡಿದ್ದೇನೆ’ ಎನ್ನುವ ಗುರುತೇಜ್ ಶೆಟ್ಟಿ, ‘ಇದೊಂದು ಗ್ಯಾಂಗ್‌ಸ್ಟರ್ ಸಿನಿಮಾ ಆದರೂ ಕುಟುಂಬ ಸಮೇತ ನೋಡುವಂತಹ ಭಾವನಾತ್ಮಕ ವಿಷಯಗಳೂ ಚಿತ್ರದಲ್ಲಿವೆ’ ಎಂದಿದ್ದಾರೆ. ಸ್ಟಾರ್ ಕ್ರಿಯೇಷನ್ ಬ್ಯಾನರ್‌ನಲ್ಲಿ ಸಿನಿಮಾ ನಿರ್ಮಾಣವಾಗಿದ್ದು, ರವಿಶಂಕರ್, ಮೈಕೋ ನಾಗರಾಜ್, ಉಗ್ರಂ ರವಿ, ಉಗ್ರಂ ಮಂಜು, ಬಿ.ಸುರೇಶ, ಮಂಡ್ಯ ರಮೇಶ್, ಸುಜಯ್ ಶಾಸ್ತ್ರಿ, ಸೂರ್ಯ ಕುಂದಾಪುರ, ಧರ್ಮಣ್ಣ ಕಡೂರು, ಗಿರೀಶ್ ಹೀಗೆ ದೊಡ್ಡ ಕಲಾವಿದರ ದಂಡೇ ಚಿತ್ರದಲ್ಲಿದೆ.

ಸಮೀಕ್ಷಾ, ಅಪೂರ್ವ, ರಾಧ್ಯಾ ಈ ಚಿತ್ರದ ನಾಯಕಿಯರು. ರಾಘವೇಂದ್ರ ಬಿ.ಕೋಲಾರ್ ಛಾಯಾಚಿತ್ರಗ್ರಹಣ, ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನವಿರುವ ಈ ಚಿತ್ರಕ್ಕೆ ಸಚಿನ್ ಬಸ್ರೂರ್ ಹಿನ್ನಲೆ ಸಂಗೀತ ನೀಡಿದ್ದಾರೆ.



‘ರಾನಿ’ ಚಿತ್ರದ ಪೋಸ್ಟರ್

ಲಂಗ ದಾವಣಿಯಲ್ಲಿ ಮಿಂಚಿದ ಮೇಘಾ ಶೆಟ್ಟಿ

ಕಿರುತೆರೆಯಲ್ಲಿ ‘ಜೊತೆ ಜೊತೆಯಲಿ’ ಧಾರಾವಾಹಿ ಮೂಲಕ ಗುರುತಿಸಿಕೊಂಡು ಬೆಳ್ಳಿತೆರೆಗೆ ಹೆಜ್ಜೆ ಇಟ್ಟ ನಟಿ ಮೇಘಾ ಶೆಟ್ಟಿ ‘ತ್ರಿಬಲ್ ರೈಡಿಂಗ್’, ‘ದಿಲ್‌ಪಸಂದ್’, ‘ಕೈವ’ ಸಿನಿಮಾಗಳ ಮೂಲಕ ಚಂದನವನದಲ್ಲಿ ಸದ್ದು ಮಾಡಿದವರು. ಇದೀಗ ಅವರ ನಟನೆಯ ಮತ್ತೊಂದು ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದೆ.

ಸಡಗರ ರಾಘವೇಂದ್ರ ನಿರ್ದೇಶನದ ‘After ಆಪರೇಷನ್ ಲಂಡನ್ CAFE’ ಸಿನಿಮಾ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಶೀಘ್ರದಲ್ಲೇ ಟೀಸರ್ ಬಿಡುಗಡೆಗೊಳಿಸುವುದಾಗಿ ರಾಘವೇಂದ್ರ ತಿಳಿಸಿದ್ದಾರೆ. ಮೇಘಾ ಶೆಟ್ಟಿ ಅವರ ಹುಟ್ಟಿದ ದಿನದಂದು ಪೋಸ್ಟರ್ ಬಿಡುಗಡೆಗೊಳಿಸುವ ಮೂಲಕ ರಾಘವೇಂದ್ರ ಈ ವಿಷಯ ತಿಳಿಸಿದ್ದಾರೆ. ಚಿತ್ರತಂಡ ಬಿಡುಗಡೆಗೊಳಿಸಿರುವ ಈ ಪೋಸ್ಟರ್‌ನಲ್ಲಿ ಹಳ್ಳಿ ಹುಡುಗಿಯಾಗಿ ಲಂಗ ದಾವಣಿಯಲ್ಲಿ ಮಿಂಚುತ್ತಿದ್ದಾರೆ ಮೇಘಾ ಶೆಟ್ಟಿ. ಕವೀಶ್ ಶೆಟ್ಟಿ ಮತ್ತು ಮೇಘಾ ಶೆಟ್ಟಿ ಕಾಂಬಿನೇಷನ್‌ನಲ್ಲಿ ಮೂಡಿಬಂದಿರುವ ಈ ಚಿತ್ರ ಕನ್ನಡ, ಮರಾಠಿ ಮತ್ತು ಇತರ ಭಾಷೆಗಳಲ್ಲಿ ಬಿಡುಗಡೆಗೊಳ್ಳಲಿದೆ ಎಂದಿದೆ ಚಿತ್ರತಂಡ. ಚಿತ್ರವನ್ನು ವಿಜಯ್ ಕುಮಾರ್ ಶೆಟ್ಟಿ, ರಮೇಶ್ ಕೊಠಾರಿ ಮತ್ತು ದೀಪಕ್ ರಾಣೆ ಜಂಟಿಯಾಗಿ ನಿರ್ಮಿಸಿದ್ದಾರೆ.


ಈ ಸಿನಿಮಾ ಜೊತೆಗೆ ‘ಗ್ರಾಮಾಯಣ’ ಹಾಗೂ ‘ಚೀತಾ’ ಮೇಘಾ ಶೆಟ್ಟಿ ಅವರ ಸಿನಿ ಬ್ಯಾಂಕ್‌ನಲ್ಲಿದೆ.



ಮೇಘಾ ಶೆಟ್ಟಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ನುಡಿ ಬೆಳಗು

ದೇಶದ ಭವಿಷ್ಯ



ಪಿ. ಚಂದ್ರಿಕಾ

ಭಾರತ ಸ್ವತಂತ್ರವಾಗುವ ಹೊತ್ತು. ಬಿಡುಗಡೆಯ ಸಂಕೇತವಾಗಿ ಅಧಿಕಾರವನ್ನು ಹಸ್ತಾಂತರಿಸುವ ಕಾರ್ಯಕ್ರಮವಿತ್ತು. ಆ ಕಾರ್ಯಕ್ರಮಕ್ಕೆ ಗಾಂಧೀಜಿಯವರನ್ನು ಕರೆತರಲು ತಮ್ಮ ಪ್ರತಿನಿಧಿಯೊಬ್ಬರನ್ನು ಕಳುಹಿಸಿದ್ದರು. ಅಷ್ಟು ಹೊತ್ತಿಗಾಗಲೆ ದೇಶ ವಿಭಜನೆಯ ದಳ್ಳುರಿಯಲ್ಲಿ ಸಿಕ್ಕು ನಲುಗಿಬಿಟ್ಟಿತ್ತು. ಸ್ವಾತಂತ್ರ್ಯಕ್ಕಾಗಿ ಕನಸಿದ್ದ ಗಾಂಧಿಗೆ ಆ ಕನಸು ಮರೆತುಹೋಗಿತ್ತು. ಹಿಂಸಾಚಾರದ ನಡುವೆಯೇ ಗಾಂಧೀಜಿ ಕಲ್ಕತ್ತಾದ ಬೀದಿ ಬೀದಿಗಳಲ್ಲಿ ಸುತ್ತುತ್ತಾ, ಸಹಿಷ್ಣುತೆಯ ಮಾತುಗಳನ್ನಾಡುತ್ತಾ ಒಡೆಯುತ್ತಿದ್ದ ಮನಸುಗಳನ್ನು ಒಂದು ಮಾಡುವ ಕೆಲಸದಲ್ಲಿ ತೊಡಗಿದ್ದರು.

ಗಾಂಧೀಜಿಯವರಿಗೆ ನೆಹರೂ ಪಟೇಲರು ಕಳಿಸಿದ್ದ ಆಹ್ವಾನದ ಪತ್ರವನ್ನು ಪ್ರತಿನಿಧಿಯು ನೀಡಿ, ‘ಇಡೀ ದೇಶ ಬಿಡುಗಡೆಗೊಳ್ಳುವಾಗ ಈ ಕನಸಿಗಾಗಿ ಹೋರಾಡಿದ ನೀವೂ ನಮ್ಮೊಂದಿಗಿರಬೇಕು ಎನ್ನುವ ಸಂದೇಶನ್ನು ಕಳಿಸಿದ್ದಾರೆ. ದಯವಿಟ್ಟು ನನ್ನೊಂದಿಗೆ ಬನ್ನಿ’ ಎನ್ನುತ್ತಾನೆ. ಪತ್ರವನ್ನು ಓದಿದ ಗಾಂಧಿ ಏನನ್ನೂ ಪ್ರತಿಕ್ರಿಯಿಸದೆ ಆ ಪತ್ರವನ್ನು ಹಿಂದಿರುಗಿಸುತ್ತಾರೆ. ಅದರಿಂದ ವಿಚಲಿತಗೊಂಡ ಪ್ರತಿನಿಧಿ, ‘ಅಂದರೆ ನಿಮ್ಮ ಉದ್ದೇಶ ದೆಹಲಿಗೆ ಬರುವುದಿಲ್ಲ ಎಂದೇ?! ಮಾನ್ಯ ಗಾಂಧೀಜಿಯವರೇ ನಿಮ್ಮ ಕನಸಿನ ಭಾರತ ರೂಪುಗೊಳ್ಳುತ್ತಿದೆ. ಇದು ನಿಮಗೆ ಸಂತೋಷವನ್ನು ಕೊಡುವುದಿಲ್ಲವೇ?’ ಎನ್ನುತ್ತಾನೆ. ಗಾಂಧೀಜಿ ಅವನನ್ನು ದಿಟ್ಟಿಸಿ, ‘ನಿಜ ಸ್ವಾತಂತ್ರ್ಯ ನನ್ನದು ಮಾತ್ರವಲ್ಲ 33 ಕೋಟಿ ಭಾರತೀಯರ ಕನಸು. ಆದರೆ ಆ ಕನಸು ಸಾಕಾರವಾಗುವ ಮುನ್ನವೇ ದೇಶ ನಲುಗಿ, ಇಬ್ಭಾಗವಾಗುತ್ತಿದೆ. ಈ ಹೊತ್ತಲ್ಲಿ ತ್ರಿವರ್ಣಧ್ವಜ ಹಾರುವುದು ಎಷ್ಟು ಮುಖ್ಯವೋ ಹಿಂಸೆಯನ್ನು ತಡೆಯುವುದೂ ಅಷ್ಟೇ ಮುಖ್ಯ. ನನಗೀಗ ಇಲ್ಲಿ ಕೆಲಸವಿದೆ’ ಎನ್ನುತ್ತಾರೆ. ಆ ದೊಡ್ಡ ಕಾರ್ಯಕ್ರಮಕ್ಕೆ ಗಾಂಧೀಜಿ ಬರುವುದಿಲ್ಲ ಎನ್ನುವ ವಿಷಯ ಸ್ಪಷ್ಟವಾದಾಗ ಖೇದಗೊಂಡ ಪ್ರತಿನಿಧಿ, ‘ಹಾಗಾದರೆ ಸಂದೇಶವನ್ನೇನಾದರೂ ಕೊಡುವಿರಾ?’ ಎಂದು ಕೇಳುತ್ತಾನೆ. ಆ ಪ್ರಶ್ನೆಗೆ ಗಾಂಧೀಜಿ ಅಲ್ಲಿದ್ದ ಮರದ ಮೇಲಕ್ಕೆ ನೋಡುತ್ತಾರೆ. ಕಣ್ಣು ಸಂಕುಚಿತಗೊಳ್ಳುತ್ತದೆ. ಹಣ್ಣೆಲೆಗಳ ನಡುವೆ ಹೊಸ ಚಿಗುರಿನ ಎಲೆಗಳು ಸೂರ್ಯನ ಕಿರಣಗಳು ಬಿದ್ದು ಥಳಥಳಿಸುತ್ತಿವೆ. ಇದ್ದಕ್ಕಿದ್ದ ಹಾಗೆ ಅದರಿಂದ ಹಣ್ಣೆಲೆಯೊಂದು ತೇಲಿ ಕೆಳಗೆ ಬೀಳುತ್ತದೆ. ಗಾಂಧೀಜಿ ಏನನ್ನೋ ಹುಡುಕಾಟ ನಡೆಸುವವರಂತೆ ಬಾಗಿ ಅದನ್ನು ಕೈಗೆತ್ತಿಕೊಂಡು ಕ್ಷಣ ಹೊತ್ತು ದಿಟ್ಟಿಸಿ, ಪ್ರತಿನಿಧಿಯ ಕೈಗೆ ಕೊಡುತ್ತಾರೆ. ‘ನನ್ನ ಪ್ರಶ್ನೆಗೆ ಈ ಹಣ್ಣೆಲೆಯೇ?’

ಅವನ ಮುಖದಲ್ಲಿ ಮೂಡಿದ ಪ್ರಶ್ನೆಗೆ ಗಾಂಧೀಜಿ ಮಾರ್ಮಿಕವಾಗಿ ನಕ್ಕು, ‘ನೋಡು ತಾನು ಬಿದ್ದ ಮೇಲೂ ತನ್ನ ಜಾಗದಲ್ಲಿ ಮತ್ತೊಂದು ಚಿಗುರು ಹುಟ್ಟುತ್ತದೆ ಎನ್ನುವ ಭರವಸೆ ಈ ಎಲೆಯದ್ದು. ಅದಕ್ಕೆ ನೆಲಕ್ಕೆ ಬಿದ್ದು ಗೊಬ್ಬರ ಆಗಿ ಮರಕ್ಕೆ ಚೈತನ್ಯ ಕೊಡುತ್ತದೆ. ಈ ಎಲೆ ಹೇಗೆ ಚಿಗುರಿನ ಪರವಾಗಿರುತ್ತದೋ ನಾನು ಕೂಡಾ ಭಾರತದ ಭವಿಷ್ಯದ ಪರವಾಗಿದ್ದೇನೆ. ಈಗ ಕಾಣುವ ಒಳಿತು ಮುಖ್ಯವಲ್ಲ, ಸ್ವತಂತ್ರ ಭಾರತದ ಭವಿಷ್ಯ ಭಯಾನಕ ಆಗಬಾರದು. ಅದಕ್ಕಾಗಿ ನಾನಿಲ್ಲಿಯೇ ಇರಬೇಕು. ಇದೇ ನನ್ನ ಸಂದೇಶ’ ಎನ್ನುತ್ತಾರೆ.

ಈ ಕ್ಷಣಕ್ಕೆ ಕಾಣುವುದರ ಹಿಂದೆ ಮಾತ್ರ ಹೋಗಬಾರದು. ಅದರ ಪರಿಣಾಮಗಳಲ್ಲಿ ಅಡಕವಾಗಿರುವ ಸಂಗತಿಗಳನ್ನು ಒರೆಹಚ್ಚಬೇಕು ಅಲ್ಲವೇ. ಗಾಂಧಿಯ ಆ ಕನಸು ಈಗಲಾದರೂ ನನಸಾಗಲಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಆಗಸ್ಟ್ 6, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ದ್ವಿತೀಯ ಗಂ. 19-53 ನಕ್ಷತ್ರ: ಮಘ ಗಂ. 17-44 ಯೋಗ: ವರಿಯಾನ್ ಗಂ. 11-00 ಕರಣ: ಬಾಲವ ಗಂ. 6-55, ಕರ್ಕಾಟಕ ಮಾಸದ 20 ನೇ ದಿನ, ಮಳೆನಕ್ಷತ್ರ: ಆಶ್ಲೇಷ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-20 ಸೂರ್ಯಾಸ್ತ : 06-52
ಮುಸ್ಲಿಂ ದಿನಾಂಕ : 26 ಮೊಹರಮ್
ಅದೃಷ್ಟ ಸಂಖ್ಯೆ : 6, 8

ಮೇಷ: ದೂರದ ಸಂಚಾರ ತೋರಿಬಂದರೂ ಅದನ್ನು ಮುಂದೂಡುವುದು ಅನಿವಾರ್ಯ. ಗಂಡನ ಹಣಕಾಸಿನ ಪರಿಸ್ಥಿತಿಗೆ ಶ್ರಮಿಸಿ ಸಹಕರಿಸಬೇಕಾದಂತೆ ಆಗುವುದು. ವಾಣಿಜ್ಯ ಅಥವಾ ಆರ್ಥಿಕ ಒಪ್ಪಂದಗಳು ಏರ್ಪಡುವುದು.

ವೃಷಭ: ಗೃಹ ನಿರ್ಮಾಣ ಕಾರ್ಯವು ಆಮೆಯ ವೇಗದಲ್ಲಿ ಸಾಗುವುದರಿಂದ ಮನಸ್ಸಿಗೆ ತುಸು ತಳಮಳ, ಹೆದರಿಕೆ, ಆತಂಕ ಮೂಡಲಿದೆ. ಕುಟುಂಬದ ಆಂತರಿಕ ಸಮಸ್ಯೆ ಸಾಮರಸ್ಯದಿಂದ ಬಗೆಹರಿಯಲಿದೆ.

ಮಿಥುನ: ಮನೆಯವರಿಗೆ ನಿರ್ಧಾರವನ್ನು ಸ್ಪಷ್ಟ ಹಾಗೂ ಮೃದುವಾದ ಮಾತುಗಳಲ್ಲಿ ತಿಳಿಸಿ. ಹಲವು ದಿನಗಳಿಂದ ಇದ್ದಂತಹ ಹಂಬಲವು ಮಿತ್ರರ ಸಹಾಯದಿಂದ ನೆರವೇರುವುದು. ಹಲ್ಲಿನ ಆರೋಗ್ಯ ಗಮನಿಸಿ.

ಕರ್ಕಾಟಕ: ಸಮಾಜದಲ್ಲಿ ಅದರಲ್ಲೂ ವಿಶೇಷವಾಗಿ ಹೆಂಡತಿಯ ಬಳಗದಲ್ಲಿ ಆದಷ್ಟು ಮೌನವಾಗಿರಲು ನಿಶ್ಚಯಿಸಿ. ಧಾನ್ಯಗಳ ರಫ್ತು ಮಾರಾಟಗಾರರು ಅನುಕೂಲವನ್ನು ಪಡೆಯುವಿರಿ. ಕಪ್ಪು ಬಣ್ಣವು ಅದೃಷ್ಟ ಬದಲಾಯಿಸಲಿದೆ.

ಸಿಂಹ: ಮಗನ ಮುಂದಿನ ಓದಿನ ವಿಷಯ ಚರ್ಚೆಗೆ ಬರುವುದು. ಅಸಹಾಯಕ ಪರಿಸ್ಥಿತಿಯಲ್ಲಿರುವ ನೀವು ಪರಿಣತರ ಸಲಹೆಗಳೊಂದಿಗೆ ಗಣಪತಿಯ ಆರಾಧನೆಯಿಂದ ಮುಂದುವರಿದರೆ ಪರಿಸ್ಥಿತಿ ತಿಳಿಯಾಗುತ್ತದೆ.

ಕನ್ಯಾ: ಕಲಾಕಾರರಿಗೆ ಕಲೆಯ ಪ್ರದರ್ಶನದಿಂದ ಪ್ರಶಂಸೆ ಮತ್ತು ಗೌರವಾದರಗಳಿಂದ ಮನೋಲ್ಲಾಸ ಉಂಟಾಗುವುದು. ಈ ದಿನದ ಘಟನೆ ಭಾವುಕರನ್ನಾಗಿ ಮಾಡಲಿದೆ. ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿ ಬರಲಿದೆ.

ತುಲಾ: ರಸಗೊಬ್ಬರ ಮತ್ತು ಕೀಟನಾಶಕಗಳನ್ನು ವ್ಯಾಪಾರ ಮಾಡುವವರಿಗೆ ಲಾಭದ ಜತೆ ಆಯಾಸವೂ ಕಾಡಲಿದೆ. ಸಿನಿಮಾ ರಂಗಕ್ಕೆ ಸೇರಿಕೊಳ್ಳುವ ಬಗ್ಗೆ ಯೋಚಿಸುವವರಿಗೆ ಈ ದಿನ ಸುದಿನ. ಹೋರಾಟದಿಂದ ಯಶಸ್ಸು ಲಭಿಸಲಿದೆ.

ವೃಶ್ಚಿಕ: ಮಾತಿನ ಚತುರತೆಯಿಂದ ಕೆಲಸಗಳು ಸರಾಗವಾಗಿ ನೆರವೇರುವುದು. ಉತ್ತಮ ಕಾರ್ಯದಿಂದ ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗುವಿರಿ. ಸ್ವತ್ತಿನ ವಿಚಾರದಲ್ಲಿ ಬಂಧುಗಳು ನೆರವಿಗೆ ಬರುವರು.

ಧನು: ಅಸಾಧ್ಯ ಕಾರ್ಯ ಸಾಧಿಸಿ ತೋರಿಸುವಷ್ಟು ಮನೋಬಲ ನಿಮ್ಮಲ್ಲಿದೆ. ಶತ್ರುಗಳ ಬಣ್ಣ ಬಯಲಾಗುವುದು ಸಂತೋಷಕ್ಕೆ ಕಾರಣವಾಗುತ್ತದೆ. ಸಣ್ಣ ಉದ್ಯಮಿಗಳಿಗೆ ಹೆಚ್ಚು ವ್ಯಾಪಾರ ನಡೆಯುವುದು.

ಮಕರ: ಉದ್ಯೋಗದಲ್ಲಿ ರಾಸಾಯನಿಕ ಪದಾರ್ಥಗಳ ಬಳಕೆ ಮಾಡುವವರು ಜಾಗ್ರತರಾಗಿರಿ. ಕೋರ್ಟು ವ್ಯವಹಾರಗಳನ್ನು ಶಾಂತ ರೀತಿಯಲ್ಲಿ ಬಗೆಹರಿಸಿಕೊಳ್ಳುವಿರಿ. ಕಾನೂನು ವಿದ್ಯಾರ್ಥಿಗಳಿಗೆ ಯಶಸ್ಸು ಕಂಡುಬರುವುದು.

ಕುಂಭ: ಅಣ್ಣ ತಮ್ಮಂದಿರ ನಡುವಿನ ವಿಚಾರದಲ್ಲಿ ತೆಗೆದುಕೊಂಡಿದ್ದ ನಿರ್ಧಾರಗಳು ಸರಿಯಾಗಿದೆಯೇ ಎಂದು ಇನ್ನೊಮ್ಮೆ ಪರಾಮರ್ಶಿಸಿಕೊಳ್ಳಿ. ಅನ್ನದಾನ ಮಾಡುವ ಯೋಚನೆಗಳು ಬರಲಿವೆ.

ಮೀನ: ಸಂಕೋಚವಿಲ್ಲದೆ ನೂತನ ಕಾರ್ಯಭಾರವನ್ನು ಹೆಗಲಿಗೇರಿಸಿಕೊಳ್ಳಿ. ಗಣಿತತಜ್ಞರಿಗೆ, ಆಧ್ಯಾತ್ಮ ಚಿಂತಕರಿಗೆ ವಿಶೇಷವಾದ ದಿನವೆನಿಸಲಿದೆ. ಭೂ ವ್ಯವಹಾರ ಪೂರ್ಣಗೊಂಡು ಹಣ ಕೈ ಸೇರುತ್ತದೆ.

ಪದಬಂಧ 5764


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹೊಟ್ಟೆ ಹೊರೆಯುವುದು (6)
3.ಪರಂಪರೆಯಲ್ಲಿರುವ ಗದ್ದಲ! (2)
5.ರಾಜಾಧಿರಾಜ ತಿರುಗಿದ್ದಾನಲ್ಲಾ! (4)
7.ದೇವ ಪೂಜಾತಂತ್ರವನ್ನು ತಿಳಿಸುವ ಶಾಸ್ತ್ರ (3)
9.ಮರೀಚಿಕೆ ಇಲ್ಲಿಕಾಣುತ್ತಿದೆ (5)
11.ಬಿಡದಿ ಹತ್ತಿರವಿರುವ ಪತ್ನಿ! (3)
12.ದೇವಾಲಯದ ಸಭಾಮಂಟಪ (4)
15.ಪರಿತ್ಯಕ್ತದಲ್ಲಿರುವ ಶೂನ್ಯತೆ! (2)
16.ವಿಚಾರಣೆ ನಡೆಸಲು ಬಂದ ಅಧಿಕಾರಿ (6)

ಮೇಲಿಂದ ಕೆಳಕ್ಕೆ

1.ಹುಟ್ಟುವ ಸ್ಥಾನ ಅಥವಾ ಮೂಲಸ್ಥಾನ (3)
2.ಒಂದು ಪ್ರದೇಶದಿಂದ ಹೊರಗೆ ಕಳಿಸುವುದು (2)
4.ಶ್ರೇಷ್ಠ ವರ್ಗದ ಸನ್ಯಾಸಿ (5)
6.ಸಾಹಸವನ್ನು ಮಾಡುವವನು (3)
7.ಆಶ್ರಯಕ್ಕೊಂದು ಪರ್ಯಾಯ ಪದ (3)
8.ಗುರಿಯಲ್ಲಿ ಪರಾಧೀನತೆ! (5)
9. ಅತಿಥಿಗಳ ಬಿಡಾರಕ್ಕೆಂದು ತೆರವು ಮಾಡಿರುವ ಮನೆ (3)
10.ದುಃಖದೊಡನೆ ಬರುವ ಜೋಡು ನುಡಿ (3)
13.ದೊಡ್ಡ ಹಾರೆ ಇಲ್ಲಿದೆ (3)
14.ಅಗಲ ಬಾಯುಳ್ಳ ಮಣ್ಣಿನ ಅಥವಾ ಕಲ್ಲಿನ ಪಾತ್ರೆ (2)



5763ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಜಯಘೋಷ
5.ಸಲಿಲ 7.ರಪಣ
9.ಸಾರಜನಕ 10.ಜಲಜನಕ
12,ವರದಿ 14.ನೀರದ
16.ಜಲಪಾತ

ಮೇಲಿಂದ ಕೆಳಕ್ಕೆ:
1.ಹಂಸ 2.ಜಲಚರ
3.ಷರಾ 4.ಗುಡಾಣ
6.ವನಪಾಲಕ 8.ಪರಿಷೇಕ
9.ಸಾಕ್ಷಾತ್ಕಾರ 11.ನವನೀತ
12.ವದಂತಿ 13.ರಾಜ
15.ದಡ

ಸುಡೊಕು 6149

2		8		7			6	
			4		2	3		1
	3	1		5			8	
6		4		3			5	
5	7	2	6		9			8
				2			4	
3				1			9	
	2	5	8			6		7
1				6			2	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6148 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	24,717
ಇಂದಿನ ಅಂತ್ಯ	24,055
▼	662
ದಿನದ ಕನಿಷ್ಠ	23,893

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹244-462
ದ್ವಿತಳಿ (ಬಿ.ವಿ)	₹313-590

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹470
12 ಕ್ಕೆ	₹68
ಮೈಸೂರು	
100ಕ್ಕೆ	₹470

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1560 (1560)
ಸೋಯಾ (ರಿಫೈನ್ಡ್)	₹950 (950)
ಸೂರ್ಯಕಾಂತಿ (ರಿಫೈನ್ಡ್)	₹955 (955)
ಪಾಮೋಲಿನ್	₹915 (908)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹8000-10000
ಕೆ.ಆರ್.ಪೇಟೆ	₹9502-9502
ತಿಪಟೂರು	₹9300-9800
ತುರುವೇಕೆರೆ	₹8100-9550

ಮುಂಬೈ ಧಾರಣೆ

ಶೇಂಗಾ

05-08-2024

ಜಾವಾ 70/80(ಹೊಸ)	11600-11700
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10200-10300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1570)
ಒಂದು ವಾರದ ಡೆಲಿವರಿ	1565 (1565)
ಸೋಯಾ ಕಚ್ಚಾ	890 (895)
ಪಾಮ್ ವಾರದ ಡೆಲಿವರಿ	913 (906)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ₹69,100 (69,700)
ಬೆಳ್ಳಿ ಕೆ.ಜಿ ₹79,500 (82,650)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಿನಿಮಯ ದರ

$ ಡಾಲರ್	84.09
£ ಪೌಂಡ್	106.88
€ ಯುರೊ	91.86
¥ ಯೆನ್ (100ಕ್ಕೆ)	59

ಹೂಡಿಕೆದಾರರ ಸಂಪತ್ತು: ಒಂದೇ ದಿನ ಕರಗಿದ ಮೊತ್ತ ₹15 ಲಕ್ಷ ಕೋಟಿ

ಕರಡಿ ಕುಣಿತಕ್ಕೆ ಷೇರುಪೇಟೆ ತತ್ತರ

ಮುಂಬೈ/ ನವದೆಹಲಿ (ಪಿಟಿಐ): ಬ್ಯಾಂಕಿಂಗ್, ಐ.ಟಿ, ಲೋಹ ಹಾಗೂ ತೈಲ ಮತ್ತು ಅನಿಲದ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಷೇರು ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಶೇ 3ರಷ್ಟು ಕುಸಿತ ಕಂಡಿವೆ.


ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹15 ಲಕ್ಷ ಕೋಟಿ ಕರಗಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ (ಎಂ-ಕ್ಯಾಪ್) ₹441 ಲಕ್ಷ ಕೋಟಿಗೆ ಇಳಿದಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 2,222 ಅಂಶ (ಶೇ 2.74) ಕುಸಿದು, 78,759ಕ್ಕೆ ಸ್ಥಿರಗೊಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 662 ಅಂಶ (ಶೇ 2.68) ಇಳಿಕೆಯಾಗಿ, 24,055ಕ್ಕೆ ಅಂತ್ಯಗೊಂಡಿತು.

ಲೋಕಸಭಾ ಚುನಾವಣೆಯ ಫಲಿತಾಂಶದ ದಿನವಾದ ಜೂನ್ 4ರಂದು ಸೆನ್ಸೆಕ್ಸ್ ಮತ್ತು ನಿಫ್ಟಿ ಶೇ 5ರಷ್ಟು ಕುಸಿತ ಕಂಡಿದ್ದವು.

ಇಳಿಕೆ ಕಂಡ ಕಂಪನಿಗಳು



ಸೆನ್ಸೆಕ್ಸ್ ಗುಚ್ಛದಲ್ಲಿ ಟಾಟಾ ಮೋಟರ್ಸ್ ಶೇ 7ರಷ್ಟು ಇಳಿಕೆ ಕಂಡಿದೆ. ಅದಾನಿ ಪೋರ್ಟ್ಸ್, ಟಾಟಾ ಸ್ಟೀಲ್, ಎಸ್‌ಬಿಐ, ಪವರ್ ಗ್ರಿಡ್, ಜೆಎಸ್‌ಡಬ್ಲ್ಯು ಸ್ಟೀಲ್ ಷೇರಿನ ಮೌಲ್ಯವು ಇಳಿಕೆ ಕಂಡಿದೆ.

ಹಿಂದುಸ್ತಾನ್ ಯೂನಿಲಿವರ್ ಮತ್ತು ನೆಸ್ಲೆ ಷೇರಿನ ಮೌಲ್ಯದಲ್ಲಿ ಏರಿಕೆ ಆಗಿದೆ.ಬಿಎಸ್‌ಇ ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 4.21 ಮತ್ತು ಮಿಡ್‌ಕ್ಯಾಪ್ ಸೂಚ್ಯಂಕ ಶೇ 3.60ರಷ್ಟು ಇಳಿಕೆಯಾಗಿವೆ.

ಏಷ್ಯಾದ ಮಾರುಕಟ್ಟೆಯಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್ ಕಾಂಗ್ ನಕಾರಾತ್ಮಕ ವಹಿವಾಟು ದಾಖಲಿಸಿವೆ. ಜಪಾನ್ ಷೇರುಪೇಟೆ ಸೂಚ್ಯಂಕ ನಿಕ್ಕಿ ಶೇ 12ಕ್ಕೂ ಹೆಚ್ಚು ಇಳಿಕೆ ಕಂಡಿದೆ.

ಸೂಚ್ಯಂಕ ಇಳಿಕೆಗೆ ಕಾರಣವೇನು?: ಅಮೆರಿಕದಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಳ ಮತ್ತು ಜಪಾನ್‌ನ ಯೆನ್ ಮೌಲ್ಯ ಏರಿಕೆಯಿಂದ ಅಮೆರಿಕದ ಆರ್ಥಿಕತೆಯು ಹಿಂಜರಿತದತ್ತ ಸಾಗಬಹುದು ಎಂಬ ಹೂಡಿಕೆದಾರರ ಕಳವಳಕ್ಕೆ ಜಾಗತಿಕ ಮಾರುಕಟ್ಟೆಗಳು ಸಿಲುಕಿದವು. ಇದರ ಪರಿಣಾಮ ದೇಶೀಯ ಮಾರುಕಟ್ಟೆಯ ಮೇಲೂ ಕಂಡುಬಂದಿದೆ ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬ್ಯಾಂಕ್ ಆಫ್ ಜಪಾನ್‌ನ ಬಡ್ಡಿ ದರ ಏರಿಕೆಯು ಜಾಗತಿಕ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರ ನಡೆದ ವಹಿವಾಟಿನಲ್ಲಿ ₹3,310 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದು ಸಹ ಷೇರು ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ರಿಲಯನ್ಸ್‌ಗೆ ₹70,195 ಕೋಟಿ ನಷ್ಟ

ಷೇರು ಸೂಚ್ಯಂಕಗಳ ಇಳಿಕೆಯಿಂದ ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯ ಶೇ 3ಕ್ಕೂ ಹೆಚ್ಚು ಇಳಿದಿದೆ.

ಇದರಿಂದ ಕಂಪನಿಯ ಪ್ರತಿ ಷೇರಿನ ಬೆಲೆ ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ₹2,894 ಆಗಿದೆ. ಷೇರಿನ ಮೌಲ್ಯ ಇಳಿಕೆಯಿಂದ ಕಂಪನಿಯ ಮಾರುಕಟ್ಟೆ ಮೌಲ್ಯ (ಎಂ-ಕ್ಯಾಪ್) ₹70,195 ಕೋಟಿ ಕರಗಿದ್ದು, ಒಟ್ಟು ಎಂ-ಕ್ಯಾಪ್ ₹19.58 ಲಕ್ಷ ಕೋಟಿಗೆ ಇಳಿದಿದೆ.

ಟಾಟಾ ಮೋಟರ್ಸ್ ಷೇರು ಮೌಲ್ಯ ಇಳಿಕೆ

ಟಾಟಾ ಮೋಟರ್ಸ್ ಷೇರಿನ ಮೌಲ್ಯ ಶೇ 7ರಷ್ಟು ಇಳಿಕೆಯಾಗಿದೆ. ಇದರಿಂದ ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಬೆಲೆ ₹1,016 ಆಗಿದೆ.

ಶುಕ್ರವಾರವು ಸಹ ಕಂಪನಿಯ ಷೇರಿನ ಮೌಲ್ಯ ಇಳಿದಿತ್ತು. ಎರಡು ವಹಿವಾಟು ದಿನಗಳಲ್ಲಿ ಮಾರುಕಟ್ಟೆ ಮೌಲ್ಯ ₹42,461 ಕೋಟಿ ಇಳಿಕೆಯಾಗಿದೆ. ಕಂಪನಿಯ ಒಟ್ಟು ಎಂ-ಕ್ಯಾಪ್ ₹3.38 ಲಕ್ಷ ಕೋಟಿಗೆ ಇಳಿದಿದೆ.

ಯುಪಿಐ: ಮೂರು ತಿಂಗಳಲ್ಲಿ ₹60 ಲಕ್ಷ ಕೋಟಿ ವಹಿವಾಟು

ನವದೆಹಲಿ (ಪಿಟಿಐ): 2024–25ರ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಯುಪಿಐ ವಹಿವಾಟು ಶೇ 36ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಖಾತೆ ಸಚಿವ ಪಂಕಜ್ ಚೌಧರಿ ಲೋಕಸಭೆಗೆ ಸೋಮವಾರ ತಿಳಿಸಿದ್ದಾರೆ.

ಜೂನ್ ತ್ರೈಮಾಸಿಕದಲ್ಲಿ ₹60 ಲಕ್ಷ ಕೋಟಿ ಮೌಲ್ಯದ 4,122 ಕೋಟಿ ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ವಹಿವಾಟು ನಡೆದಿವೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ 2,762 ಕೋಟಿ ವಹಿವಾಟು ನಡೆದಿದ್ದವು. ಇದರ ಮೊತ್ತ ₹44 ಲಕ್ಷ ಕೋಟಿಯಷ್ಟಾಗಿತ್ತು ಎಂದು ತಿಳಿಸಿದ್ದಾರೆ.

2023–24ರ ಪೂರ್ಣ ಹಣಕಾಸು ವರ್ಷದಲ್ಲಿ 13,113 ಕೋಟಿ ಯುಪಿಐ ವಹಿವಾಟು ನಡೆದಿದೆ. ಇದರ ಮೌಲ್ಯ ₹200 ಲಕ್ಷ ಕೋಟಿ ಆಗಿದೆ. 2022–23ರಲ್ಲಿ 8,371 ಕೋಟಿ ಮತ್ತು 2021–22ರಲ್ಲಿ 4,596 ಕೋಟಿ ವಹಿವಾಟು ನಡೆದಿವೆ. ಇದರ ಮೊತ್ತ ಕ್ರಮವಾಗಿ ₹139 ಲಕ್ಷ ಕೋಟಿ ಮತ್ತು ₹84 ಲಕ್ಷ ಕೋಟಿಯಷ್ಟಾಗಿತ್ತು ಎಂದು ಹೇಳಿದ್ದಾರೆ.

ಸೇವಾ ಚಟುವಟಿಕೆ: ಅಲ್ಪ ಇಳಿಕೆ

ಉತ್ಪಾದನಾ ವೆಚ್ಚ ಹೆಚ್ಚಳದಿಂದ ತಗ್ಗಿದ ಸೂಚ್ಯಂಕ: ಎಸ್ ಆ್ಯಂಡ್ ಪಿ ವರದಿ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಜುಲೈ ತಿಂಗಳಲ್ಲಿ ತುಸು ಇಳಿಕೆ ಕಂಡಿದೆ ಎಂದು ಸೋಮವಾರ ಬಿಡುಗಡೆಯಾಗಿರುವ ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆಯ ವರದಿ ತಿಳಿಸಿದೆ.

ಸೇವಾ ವಲಯದ ಚಟುವಟಿಕೆಗಳನ್ನು ಸೂಚಿಸುವ ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಬ್ಯುಸಿನೆಸ್ ಸೂಚ್ಯಂಕವು, ಜೂನ್ ತಿಂಗಳಿನಲ್ಲಿ 60.5 ದಾಖಲಾಗಿತ್ತು. ಇದು ಜುಲೈ ತಿಂಗಳಲ್ಲಿ 60.3ಕ್ಕೆ ಇಳಿದಿದೆ.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) 50ರ ಮೇಲಿದ್ದರೆ ಬೆಳವಣಿಗೆಯು ಸಶಕ್ತವಾಗಿದೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಬೆಳವಣಿಗೆಯು ಕುಂಠಿತವಾಗಿದೆ ಎಂದರ್ಥ.

‘ಉತ್ಪಾದನೆ ವೆಚ್ಚದ ಏರಿಕೆಯಿಂದ ಜುಲೈನಲ್ಲಿ ದೇಶದ ಸೇವಾ ವಲಯದ ಚಟುವಟಿಕೆ ಅಲ್ಪ ಪ್ರಮಾಣದಲ್ಲಿ ಇಳಿಕೆ ಕಂಡಿದೆ. ಆದರೂ, ದೇಶೀಯ ಬೇಡಿಕೆಯಿಂದ ಹೊಸ ವ್ಯಾಪಾರವು ಹೆಚ್ಚಾಗುತ್ತಿದೆ. ಸೇವಾ ವಲಯದ ಸಂಸ್ಥೆಗಳು ಆಶಾದಾಯಕವಾಗಿವೆ’ ಎಂದು ಎಚ್‌ಎಸ್‌ಬಿಸಿಯ ಭಾರತದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.



ಜಗತ್ತಿನೆಲ್ಲೆಡೆ ಭಾರತದ ಸೇವಾ ಚಟುವಟಿಕೆಗಳಿಗೆ ಬೇಡಿಕೆ ಹೆಚ್ಚಾಗಿದೆ. ಆಸ್ಟ್ರೇಲಿಯಾ, ಬ್ರೆಜಿಲ್, ಚೀನಾ, ಜಪಾನ್, ಸಿಂಗಪುರ, ನೆದರ್ಲೆಂಡ್ಸ್ ಮತ್ತು ಅಮೆರಿಕಕ್ಕೆ ರಫ್ತು ಪ್ರಮಾಣ ಏರಿಕೆಯಾಗಿದೆ ಎಂದು ವರದಿ ಹೇಳಿದೆ.

ಉತ್ತಮ ಆರ್ಥಿಕ ಪರಿಸ್ಥಿತಿ ಮತ್ತು ಉತ್ಪಾದನೆಯ ಆಶಾದಾಯಕ ನಿರೀಕ್ಷೆಯು ಸೇವಾ ವಲಯದ ನೇಮಕಾತಿಗೆ ಹೆಚ್ಚಳಕ್ಕೆ ಕಾರಣವಾಯಿತು. ಸೇವಾ ಪೂರೈಕೆದಾರರು ಮುಂಬರುವ 12 ತಿಂಗಳಲ್ಲಿ ವ್ಯಾಪಾರ ಚಟುವಟಿಕೆಯಲ್ಲಿ ಏರಿಕೆಯಾಗುವ ವಿಶ್ವಾಸವನ್ನು ಹೊಂದಿದ್ದಾರೆ ಎಂದು ವರದಿ ಹೇಳಿದೆ.

ಉತ್ಪಾದನಾ ಸೂಚ್ಯಂಕ ಇಳಿಕೆ: ಎಚ್‌ಎಸ್‌ಬಿಸಿ ಇಂಡಿಯಾ ಕಾಂಪೊಸಿಟ್ ಉತ್ಪಾದನಾ ಸೂಚ್ಯಂಕವೂ ಇಳಿಕೆ ಕಂಡಿದೆ. ಜೂನ್‌ನಲ್ಲಿ 60.9 ಇದ್ದ ಸೂಚ್ಯಂಕ, ಜುಲೈನಲ್ಲಿ 60.7ಕ್ಕೆ ಇಳಿದಿದೆ. ಸತತ 36ನೇ ತಿಂಗಳೂ ಸೂಚ್ಯಂಕವು 50ಕ್ಕಿಂತ ಹೆಚ್ಚಿದೆ.

ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಿಂದ ಹೊಸ ಬೇಡಿಕೆಗಳು ಹೆಚ್ಚಾದವು. ಇದು ನೇಮಕಾತಿ ಹೆಚ್ಚಳಕ್ಕೆ ಕಾರಣವಾಯಿತು. ಹೆಚ್ಚಿದ ವೇತನ ಮತ್ತು ವಸ್ತುಗಳ ಬೆಲೆ ಏರಿಕೆಯಿಂದ ತಯಾರಿಕಾ ವೆಚ್ಚವು ಮತ್ತಷ್ಟು ಹೆಚ್ಚಳವಾಯಿತು. ಇದರ ಪರಿಣಾಮ ಉತ್ಪಾದನೆ ಬೆಲೆಯು 11 ವರ್ಷದಲ್ಲಿ ಅತಿ ವೇಗವಾಗಿ ಏರಿತು ಎಂದು ಭಂಡಾರಿ ಹೇಳಿದ್ದಾರೆ.

ಸೇವಾ ವಲಯದ 400 ಕಂಪನಿಗಳಿಂದ ಅಭಿಪ್ರಾಯ ಸಂಗ್ರಹಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ಸುದ್ದಿ 2 ನಿಮಿಷ


ಆರೋಗ್ಯ ವಿಮಾ ಪ್ರೀಮಿಯಂನಿಂದ ₹8,263 ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): 2023–24ರ ಹಣಕಾಸು ವರ್ಷದಲ್ಲಿ ಆರೋಗ್ಯ ವಿಮಾ ಕಂತಿನ ಮೇಲೆ ₹8,263 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ ಎಂದು ಕೇಂದ್ರವು ಲೋಕಸಭೆಗೆ ತಿಳಿಸಿದೆ.

ಜೀವ ವಿಮೆ ಮತ್ತು ಆರೋಗ್ಯ ವಿಮೆಯ ಮೇಲಿನ ಜಿಎಸ್‌ಟಿಗೆ ವಿನಾಯಿತಿ ಅಥವಾ ದರ ಕಡಿತಗೊಳಿಸುವಂತೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಕೆಯಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದ್ದಾರೆ. ಜಿಎಸ್‌ಟಿ ದರಗಳು ಮತ್ತು ವಿನಾಯಿತಿಯು ಜಿಎಸ್‌ಟಿ ಮಂಡಳಿಯ ಶಿಫಾರಸುಗಳ ಮೇಲೆ ಅವಲಂಬಿತ ಎಂದು ಹೇಳಿದರು.

ಆರೋಗ್ಯ ವಿಮಾ ಕಂತಿನಿಂದ 2022-23ರ ಆರ್ಥಿಕ ವರ್ಷದಲ್ಲಿ ₹7,638 ಕೋಟಿ, 2021–22ರಲ್ಲಿ ₹5,354 ಕೋಟಿ ಜಿಎಸ್‌ಟಿ ಸಂಗ್ರಹಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಜಿಎಸ್‌ಟಿ ಪ್ರಾರಂಭದಿಂದಲೂ, ಆರೋಗ್ಯ ವಿಮೆಗೆ ಪಾವತಿಸುವ ಕಂತಿಗೆ ಶೇ 18ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಸಮಾಜದ ಬಡ ವರ್ಗಗಳಿಗೆ ಮತ್ತು ಅಂಗವಿಕಲರಿಗಾಗಿ ಇರುವ ಕೆಲವು ವಿಮಾ ಯೋಜನೆಗಳು ತೆರಿಗೆಯಿಂದ ವಿನಾಯಿತಿ ಇದೆ ಎಂದು ಹೇಳಿದರು.



‘ಸಾಮಾನ್ಯ ವಿಮಾ ಕಂಪನಿಗಳ ವಿಲೀನಕ್ಕೆ ಪ್ರಸ್ತಾಪವಿಲ್ಲ’

ನವದೆಹಲಿ (ಪಿಟಿಐ): ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಕಂಪನಿಗಳ ವಿಲೀನಕ್ಕೆ ಯಾವುದೇ ಪ್ರಸ್ತಾವವಿಲ್ಲ ಎಂದು ಸರ್ಕಾರ ಸೋಮವಾರ ತಿಳಿಸಿದೆ.

ಲೋಕಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ, ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು 2019-20ರಿಂದ 2021-22ರ ಅವಧಿಯಲ್ಲಿ ಮೂರು ಸಾರ್ವಜನಿಕ ವಲಯ ಉದ್ಯಮ (ಪಿಎಸ್‌ಯು) ಸಾಮಾನ್ಯ ವಿಮಾ ಕಂಪನಿಗಳಾದ ಓರಿಯೆಂಟಲ್ ಇನ್ಶೂರೆನ್ಸ್, ನ್ಯಾಷನಲ್ ಇನ್ಶೂರೆನ್ಸ್ ಮತ್ತು ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್‌ಗೆ ₹17,450 ಕೋಟಿಗಳನ್ನು ಹೂಡಿಕೆ ಮಾಡಿದೆ ಎಂದರು.

‘ಸಾರ್ವಜನಿಕ ವಲಯದ ಸಾಮಾನ್ಯ ವಿಮಾ ಕಂಪನಿಗಳ ವಿಲೀನ ಮಾಡುವ ಕುರಿತು ಸದ್ಯಕ್ಕೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾಪವಿಲ್ಲ’ ಎಂದು ಹೇಳಿದರು.

2018–19ರ ಬಜೆಟ್‌ನಲ್ಲಿ ಅಂದಿನ ಹಣಕಾಸು ಸಚಿವ ಅರುಣ್ ಜೇಟ್ಲಿ, ಮೂರು ಕಂಪನಿಗಳನ್ನು ಒಂದು ವಿಮಾ ಘಟಕವಾಗಿ ವಿಲೀನಗೊಳಿಸಲಾಗುವುದು ಎಂದು ಘೋಷಿಸಿದ್ದರು.

ಈ ಕಂಪನಿಗಳ ಕಳಪೆ ಆರ್ಥಿಕ ಪರಿಸ್ಥಿತಿ ಸೇರಿದಂತೆ ವಿವಿಧ ಕಾರಣಗಳಿಂದ ಅವುಗಳನ್ನು ವಿಲೀನಗೊಳಿಸಲು ಸಾಧ್ಯವಾಗಿರಲಿಲ್ಲ.

ಸೈಬರ್ ವಂಚನೆ: ಜನರ ಖಾತೆಗಳಿಂದ ₹177 ಕೋಟಿ ಕಳವು–ಕೇಂದ್ರ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ದೇಶದಲ್ಲಿ ಸೈಬರ್ ವಂಚನೆಯ ಮೂಲಕ ಜನರ ಖಾತೆಗಳಿಂದ ₹177 ಕೋಟಿ ಕಳವು ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಲೋಕಸಭೆಯಲ್ಲಿ ಈ ಸಂಬಂಧ ಲಿಖಿತ ರೂಪದಲ್ಲಿ ಉತ್ತರಿಸಿರುವ ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹಾಗೂ ಇಂಟರ್‌ನೆಟ್ ಮೂಲಕ ಜನರಿಗೆ ₹177.05 ಕೋಟಿ ವಂಚನೆ ಎಸಗಲಾಗಿದೆ. 2022–23ನೇ ಆರ್ಥಿಕ ವರ್ಷದಲ್ಲಿ ಈ ಪ್ರಮಾಣ ₹69.68 ಕೋಟಿ ಇತ್ತು ಎಂದು ತಿಳಿಸಿದ್ದಾರೆ.

ಸೈಬರ್ ವಂಚಕರು 2021–22ನೇ ಸಾಲಿನಲ್ಲಿ ₹80.33 ಕೋಟಿ, 2020–21ನೇ ಸಾಲಿನಲ್ಲಿ ₹50.10 ಕೋಟಿ ಹಾಗೂ 2019–20ನೇ ಆರ್ಥಿಕ ವರ್ಷದಲ್ಲಿ ₹44.22 ಕೋಟಿ ವಂಚಿಸಿದ್ದಾರೆ. ಸೈಬರ್ ವಂಚನೆ ಅಪರಾಧಗಳ ಸಂಬಂಧ ಅನಧಿಕೃತ ಇ-ಬ್ಯಾಂಕಿಂಗ್ ವ್ಯವಹಾರಗಳಿಗೆ ಮಿತಿ ಹೇರುವಂತೆ ಬ್ಯಾಂಕುಗಳಿಗೆ ಆರ್‌ಬಿಐ ನಿರ್ದೇಶನ ನೀಡಿದೆ ಎಂದು ತಿಳಿಸಿದ್ದಾರೆ.

ಪ್ರಧಾನಿ ಹಸೀನಾ ರಾಜೀನಾಮೆ

ಒಂದನೇ ಪುಟದಿಂದ...

ಅಲ್ಲದೆ ಢಾಕಾದಲ್ಲಿನ ಗೃಹ ಸಚಿವ ಅಸದುಜ್ಜಮಾನ್ ಖಾನ್ ಕಮಾಲ್ ನಿವಾಸದ ಮೇಲೂ ದಾಳಿ ನಡೆಸಿದ ಪ್ರತಿಭಟನಕಾರರು, ಬೆಂಕಿ ಹಚ್ಚಿ ಧ್ವಂಸಗೊಳಿಸಿದರು. ಸೋಮವಾರ ಸಂಭವಿಸಿದ ಹಿಂಸಾಚಾರದಲ್ಲಿ 56 ಮಂದಿ ಮೃತಪಟ್ಟಿದ್ದಾರೆ.

ದೇಶ ತೊರೆದ ಹಸೀನಾ: ಆಶ್ರಯ ಬಯಸಿ ಲಂಡನ್ ಅಥವಾ ಫಿನ್ಲೆಂಡ್‌ಗೆ ತೆರಳಲು ಉದ್ದೇಶಿಸಿರುವ ಶೇಖ್ ಹಸೀನಾ ಅವರು ಬಾಂಗ್ಲಾದೇಶದ ವಾಯುಪಡೆಯ ಸಿ–130ಜೆ ವಿಮಾನದ ಮೂಲಕ ಭಾರತದ ಗಾಜಿಯಾಬಾದ್ ಬಳಿಯ ಹಿಂಡನ್ ವಾಯುನೆಲೆಗೆ (ನವದೆಹಲಿ ಸಮೀಪದ) ಬಂದಿಳಿದರು ಎಂದು ರಾಜತಾಂತ್ರಿಕ ಮೂಲಗಳು ತಿಳಿಸಿವೆ. ಭಾರತದಲ್ಲಿ ಎಷ್ಟು ದಿನ ಇರುತ್ತಾರೆ ಎಂಬುದು ಖಚಿತವಾಗಿಲ್ಲ.

ದೆಹಲಿಯಲ್ಲಿ ನೆಲೆಸಿರುವ ತಮ್ಮ ಮಗಳು ಸೈಮಾ ವಾಝೆದ್ ಅವರನ್ನು ಹಸೀನಾ ಭೇಟಿಯಾಗುವ ಸಾಧ್ಯತೆ ಇದೆ. ವಾಝೆದ್ ಅವರು ವಿಶ್ವ ಆರೋಗ್ಯ ಸಂಸ್ಥೆಯ ಆಗ್ನೇಯ ಏಷ್ಯಾ ಭಾಗದ ಪ್ರಾದೇಶಿಕ ನಿರ್ದೇಶಕರಾಗಿದ್ದಾರೆ.

ಢಾಕಾದ ಕೋರಿಕೆಯ ಮೇರೆಗೆ ಹಸೀನಾ ಅವರ ವಿಮಾನಕ್ಕೆ ಭಾರತೀಯ ವಾಯು ಪ್ರದೇಶದ ಮೂಲಕ ಸುರಕ್ಷಿತ ಮಾರ್ಗ ಒದಗಿಸಲು ಭಾರತ ನಿರ್ಧರಿಸಿದೆ ಎಂದು ಮೂಲಗಳು ಹೇಳಿವೆ. ಇದರ ನಡುವೆ, ಢಾಕಾದಲ್ಲಿನ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ತಿಳಿಸಿವೆ.

ಸೇನೆಯಿಂದ ಮಧ್ಯಂತರ ಸರ್ಕಾರ: ಈ ಬೆಳವಣಿಗೆಗಳ ಹಿಂದೆಯೇ ದೇಶವನ್ನು ಉದ್ದೇಶಿಸಿ ಮಾತನಾಡಿದ ಬಾಂಗ್ಲಾದೇಶದ ಸೇನಾ ಮುಖ್ಯಸ್ಥ ವಕಾರ್-ಉಝ್-ಝಮಾನ್, ‘ಪ್ರಧಾನಿ ಶೇಖ್ ಹಸೀನಾ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಸೇನೆ ಮಧ್ಯಂತರ ಸರ್ಕಾರ ರಚಿಸಲಿದೆ. ನಾನು ದೇಶದ ಎಲ್ಲ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿದ್ದೇನೆ. ಅದಕ್ಕೆ ಸಹಕರಿಸಿ’ ಎಂದು ಪ್ರಕಟಿಸಿದರು.

> **ಬಾಂಗ್ಲಾ ಪ್ರಧಾನಿಯಾಗಿದ್ದ ಶೇಖ್ ಹಸೀನಾ ಅವರಿಗೆ ಭಾರತ ಸುರಕ್ಷಿತವಾಗಿದೆ. ಮುಸ್ಲಿಂ ರಾಷ್ಟ್ರಗಳು ಮುಸ್ಲಿಮರಿಗೂ ಸಹ ಸುರಕ್ಷಿತವಾಗಿಲ್ಲ**
> **ಕಂಗನಾ ರನೌತ್,** ಬಿಜೆಪಿ ಸಂಸದೆ

‘ದೇಶದ ರಾಜಕೀಯ ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸಲಾಗಿದೆ. ದೇಶದ ಕಾನೂನು ಮತ್ತು ಸುವ್ಯವಸ್ಥೆಯ ಜವಾಬ್ದಾರಿಯನ್ನು ಸೇನೆ ವಹಿಸಿಕೊಳ್ಳುತ್ತದೆ ಎಂಬುದನ್ನು ಅವರಿಗೆ ತಿಳಿಸಲಾಗಿದೆ. ಪ್ರತಿಭಟನೆ ನಡೆಸುತ್ತಿರುವವರ ಮೇಲೆ ಗುಂಡಿನ ದಾಳಿ ನಡೆಸದಂತೆ ಸೇನೆ ಮತ್ತು ಪೊಲೀಸರಿಗೆ ಸೂಚಿಸಲಾಗಿದೆ’ ಎಂದು ಹೇಳಿದರು.

ಹಸೀನಾ ರಾಜೀನಾಮೆ ಕುರಿತು ವಕಾರ್ ಘೋಷಿಸಿದ ಬಳಿಕ, ಜನರು ವಿಜಯೋತ್ಸವ ಆಚರಿಸಿ, ಸಂಭ್ರಮಿಸಿದರು.

1971ರ ಬಾಂಗ್ಲಾ ವಿಮೋಚನಾ ಹೋರಾಟದಲ್ಲಿ ಭಾಗಿಯಾಗಿದ್ದ ಯೋಧರ ಕುಟುಂಬದವರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇ 30ರಷ್ಟು ಮೀಸಲಾತಿ ಒದಗಿಸುವ ನೀತಿಯನ್ನು ವಿರೋಧಿಸಿ ಮತ್ತು ಹಸೀನಾ ಅವರ ರಾಜೀನಾಮೆಗೆ ಒತ್ತಾಯಿಸಿ ದೇಶದಾದ್ಯಂತ ಕೆಲ ದಿನಗಳಿಂದ ಭಾರಿ ಪ್ರತಿಭಟನೆಗಳು ನಡೆಯುತ್ತಿವೆ.

76 ವರ್ಷದ ಶೇಖ್ ಹಸೀನಾ ಬಾಂಗ್ಲಾದೇಶದ ಸಂಸ್ಥಾಪಕ ಶೇಖ್ ಮುಜಿಬರ್ ರೆಹಮಾನ್ ಅವರ ಮಗಳು. 2009ರಿಂದ ನಿರಂತರವಾಗಿ ಅಧಿಕಾರದಲ್ಲಿದ್ದರು. ಜನವರಿಯಲ್ಲಿ ನಡೆದ 12ನೇ ಚುನಾವಣೆಯಲ್ಲಿ ಸತತ ನಾಲ್ಕನೇ ಬಾರಿ ಮತ್ತು ಒಟ್ಟಾರೆ ಐದನೇ ಅವಧಿಗೆ ಆಯ್ಕೆಯಾಗಿದ್ದರು.

ಸಾವಿನ ಸಂಖ್ಯೆ 156ಕ್ಕೆ ಏರಿಕೆ

ಒಂದನೇ ಪುಟದಿಂದ...

ಪ್ರತಿಭಟನಕಾರರು ಹಮ್ಮಿಕೊಂಡಿರುವ ‘ಢಾಕಾದೆಡೆಗೆ ನಡಿಗೆ’ಯಲ್ಲಿ ವಿವಿಧ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ರಸ್ತೆಗಿಳಿದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಕಾರರು ರಾಜಧಾನಿಯ ರಸ್ತೆಗಳಲ್ಲಿ ಜಮಾಯಿಸುತ್ತಿದ್ದಂತೆಯೇ ಪೊಲೀಸರು ಮತ್ತು ಯೋಧರು ಅವರನ್ನು ಚದುರಿಸಲು ಅಶ್ರುವಾಯು ಶೆಲ್ ದಾಳಿ ನಡೆಸಿದರು.

ಜತ್ರಾಬರಿ ಮತ್ತು ಢಾಕಾ ವೈದ್ಯಕೀಯ ಕಾಲೇಜು ಪ್ರದೇಶಗಳಲ್ಲಿ ಪ್ರತಿಭಟನಕಾರರು ಮತ್ತು ಪೊಲೀಸರ ನಡುವೆ ನಡೆದ ಘರ್ಷಣೆಯಲ್ಲಿ ಕನಿಷ್ಠ ಆರು ಮಂದಿ ಮೃತಪಟ್ಟರು ಎಂದು ಡೈಲಿ ಸ್ಟಾರ್ ವರದಿ ಮಾಡಿದೆ. ಅಲ್ಲದೆ ವಿವಿಧೆಡೆ ನಡೆದ ಘರ್ಷಣೆಯಲ್ಲಿ 50ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಢಾಕಾದೆಡೆಗಿನ ಯಾತ್ರೆಯಲ್ಲಿ ಪಾಲ್ಗೊಳ್ಳುವಂತೆ ಪ್ರತಿಭಟನಕಾರರು ದೇಶದ ಸಾರ್ವಜನಿಕರಲ್ಲಿ ಕೋರಿದ್ದ ಬೆನ್ನಲ್ಲೇ ಬಾಂಗ್ಲಾದೇಶ ಸರ್ಕಾರವು ದೇಶದಾದ್ಯಂತ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಿ ಆದೇಶಿಸಿತ್ತು. ಇದಕ್ಕೆ ತೀವ್ರ ಆಕ್ರೋಶ ವ್ಯಕ್ತವಾದ ಬಳಿಕ, ಸೋಮವಾರ ಮಧ್ಯಾಹ್ನ 1.15ರ ಬಳಿಕ ದೇಶದಲ್ಲಿ ಇಂಟರ್‌ನೆಟ್ ಬ್ರಾಡ್‌ಬ್ಯಾಂಡ್ ಸೇವೆ ಆರಂಭಿಸಲು ಮೌಖಿಕ ಆದೇಶ ಹೊರಡಿಸಿತ್ತು.

ವಕಾರ್‌ಗೆ 4 ದಶಕದ ಅನುಭವ

ನಾಲ್ಕು ದಶಕ ಸೇನೆಯಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿರುವ ವಕಾರ್-ಉಝ್-ಝಮಾನ್ (58) ಅವರು ಜೂನ್‌ನಲ್ಲಿ ಬಾಂಗ್ಲಾದೇಶದ ಸೇನಾ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ವಿಶ್ವಸಂಸ್ಥೆಯ ಶಾಂತಿಪಡೆಯಲ್ಲೂ ಕಾರ್ಯ ನಿರ್ವಹಿಸಿದ ಅನುಭವ ಹೊಂದಿದ್ದಾರೆ.

ಬಾಂಗ್ಲಾದೇಶದ ರಾಷ್ಟ್ರೀಯ ವಿಶ್ವವಿದ್ಯಾಲಯ ಮತ್ತು ಲಂಡನ್ ವಿಶ್ವವಿದ್ಯಾಲಯದ ಕಿಂಗ್ಸ್ ಕಾಲೇಜಿನಲ್ಲಿ ರಕ್ಷಣಾ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಅವರು ಪಡೆದಿದ್ದಾರೆ.

ಸೇನೆಯನ್ನು ಆಧುನೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಕ್ಕಾಗಿ ಅವರಿಗೆ ‘ಆರ್ಮಿ ಮೆಡಲ್ ಆಫ್ ಗ್ಲೋರಿ’ ಮತ್ತು ‘ಎಕ್ಸ್‌ಟ್ರಾ ಆರ್ಡಿನರಿ ಸರ್ವೀಸ್ ಮೆಡಲ್’ ಸಂದಿವೆ. ಪತ್ನಿ ಮತ್ತು ಇಬ್ಬರು ಪುತ್ರಿಯರನ್ನು ಹೊಂದಿರುವ ಅವರು ಶೇಖ್ ಹಸೀನಾ ಅವರ ದೂರದ ಸಂಬಂಧಿಯೂ ಹೌದು.

ಹಸೀನಾ ಅವರು 1996–2001ರವರೆಗೆ ಮೊದಲ ಬಾರಿ ಪ್ರಧಾನಿಯಾಗಿದ್ದ ಅವಧಿಯಲ್ಲಿ, ವಕಾರ್ ಅವರ ಮಾವ ಸೇನೆಯ ಮುಖ್ಯಸ್ಥರಾಗಿದ್ದರು.

ಭಾರತೀಯ ಸಾಂಸ್ಕೃತಿಕ ಕೇಂದ್ರ ಧ್ವಂಸ; 4 ದೇಗುಲಗಳಿಗೆ ಹಾನಿ

ಢಾಕಾ (ಪಿಟಿಐ): ಉದ್ರಿಕ್ತರ ಗುಂಪು ರಾಜಧಾನಿಯಲ್ಲಿನ ಭಾರತೀಯ ಸಾಂಸ್ಕೃತಿಕ ಕೇಂದ್ರವನ್ನು ಧ್ವಂಸಗೊಳಿಸಿದೆ.

‘ಇದೇ ವೇಳೆ ದೇಶದಾದ್ಯಂತ ನಾಲ್ಕು ಹಿಂದೂ ದೇವಾಲಯಗಳಿಗೂ ಹಾನಿಯಾಗಿದೆ ಎಂಬ ವರದಿಗಳು ಬಂದಿವೆ’ ಎಂದು ಹಿಂದೂ ಬೌದ್ಧ ಕ್ರಿಶ್ಚಿಯನ್ ಯೂನಿಟಿ ಕೌನ್ಸಿಲ್ ನಾಯಕಿ ಕಾಜೋಲ್ ದೇವನಾಥ್ ತಿಳಿಸಿದರು.

ಪ್ರತ್ಯಕ್ಷದರ್ಶಿಗಳ ಪ್ರಕಾರ, ಢಾಕಾದ ಧನ್ಮೊಂಡಿ ಪ್ರದೇಶದಲ್ಲಿರುವ ಇಂದಿರಾಗಾಂಧಿ ಸಾಂಸ್ಕೃತಿಕ ಕೇಂದ್ರವನ್ನು ಉದ್ರಿಕ್ತರ ಗುಂಪು ಹಾನಿಗೊಳಿಸಿದೆ. 2010ರ ಮಾರ್ಚ್‌ನಲ್ಲಿ ಉದ್ಘಾಟನೆಗೊಂಡ ಈ ಕೇಂದ್ರವು ಭಾರತ ಮತ್ತು ಬಾಂಗ್ಲಾದೇಶದ ನಡುವಿನ ದ್ವಿಪಕ್ಷೀಯ ಸಾಂಸ್ಕೃತಿಕ ಸಂಬಂಧವನ್ನು ಉತ್ತೇಜಿಸುತ್ತಾ ಬಂದಿದೆ. ಇಲ್ಲಿ ಯೋಗ, ಹಿಂದಿ ಭಾಷೆ, ಭಾರತೀಯ ಶಾಸ್ತ್ರೀಯ ಸಂಗೀತ ಗಾಯನ, ಕಥಕ್, ಮಣಿಪುರಿ ಸೇರಿ ಭಾರತೀಯ ನೃತ್ಯ ಪ್ರಾಕಾರಗಳ ಕಲಿಕೆಯನ್ನು ಭಾರತದ ಮೂಲದ ವೃತ್ತಿಪರರು ಮತ್ತು ತರಬೇತುದಾರರಿಂದಲೇ ಕಲಿಸಲಾಗುತ್ತಿದೆ. ಅಲ್ಲದೆ, 21,000ಕ್ಕೂ ಹೆಚ್ಚು ಪುಸ್ತಕಗಳಿರುವ ಗ್ರಂಥಾಲಯವನ್ನು ಸಹ ಹೊಂದಿದೆ.

ಬಂಗಬಂಧು ಮೆಮೋರಿಯಲ್ ಮ್ಯೂಸಿಯಂ ಎಂದೂ ಕರೆಯಲಾಗುವ ಬಂಗಬಂಧು ಭಾಬನ್ ಸೇರಿದಂತೆ ಢಾಕಾದ ಹಲವಾರು ಪ್ರಮುಖ ಸ್ಥಳಗಳಿಗೆ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದಾರೆ ಎಂದು ‘ಢಾಕಾ ಟ್ರಿಬ್ಯೂನ್’ ಪತ್ರಿಕೆ ವರದಿ ಮಾಡಿದೆ.

1975ರಲ್ಲಿ ಅಧ್ಯಕ್ಷರಾಗಿದ್ದಾಗ ಹತ್ಯೆಗೀಡಾದ ಹಸೀನಾ ಅವರ ತಂದೆ ಶೇಖ್ ಮುಜಿಬುರ್ ರೆಹಮಾನ್ ಅವರ ಹೆಸರಿನಲ್ಲಿ ಈ ವಸ್ತುಸಂಗ್ರಹಾಲಯ ನಿರ್ಮಿಸಲಾಗಿತ್ತು.

ಹಸೀನಾ ಅವರ ರಾಜೀನಾಮೆ ನಂತರ ದೇಶದಲ್ಲಿ ಉದ್ವಿಗ್ನ ಪರಿಸ್ಥಿತಿ ನೆಲೆಸಿರುವುದರಿಂದ ಕೆಲವು ಹಿಂದೂ ಸಮಾಜದ ಮುಖಂಡರು ಭಯಭೀತರಾಗಿದ್ದಾರೆ ಎಂದು ವರದಿಗಳು ಹೇಳಿವೆ.

> **ಶೇಖ್ ಹಸೀನಾ ಅವರು ರಾಜಕೀಯ ಪುನರಾಗಮನ ಮಾಡುವುದಿಲ್ಲ. ಅವರು ತಮ್ಮ ಕುಟುಂಬದ ಒತ್ತಾಯದ ಮೇರೆಗೆ ಸುರಕ್ಷತೆಗಾಗಿ ದೇಶ ತೊರೆದಿದ್ದಾರೆ**
> **ಸಜೀಬ್ ವಾಝೆದ್ ಜಾಯ್**
> ಹಸೀನಾ ಅವರ ಪುತ್ರ



ಢಾಕಾದಲ್ಲಿನ ಬಾಂಗ್ಲಾದೇಶದ ಪ್ರಧಾನಿಯ ಅಧಿಕೃತ ನಿವಾಸಕ್ಕೆ ಸೋಮವಾರ ನುಗ್ಗಿದ ಪ್ರತಿಭಟನಕಾರರು ಅಲ್ಲಿನ ಆಸನಗಳ ಮೇಲೆ ಕುಳಿತು ಘೋಷಣೆಗಳನ್ನು ಕೂಗಿದರು – ಎಎಫ್‌ಪಿ ಚಿತ್ರ

ಲಿಪ್‌ಸ್ಟಿಕ್, ಸೋಫಾ ಎತ್ತೊಯ್ದರು

- ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರ ರಾಜೀನಾಮೆ ಬೆನ್ನಲ್ಲೇ, ಢಾಕಾದಲ್ಲಿನ ಅವರ ಅಧಿಕೃತ ನಿವಾಸವಾದ ಗಾನಾಭವನಕ್ಕೆ ನುಗ್ಗಿದ ಪ್ರತಿಭಟನಕಾರರು, ಅಲ್ಲಿನ ಆವರಣದಲ್ಲಿ ಹರಿಯುವ ನದಿಯಲ್ಲಿ ಮಿಂದು ಸಂಭ್ರಮಿಸಿದರು
- ಪ್ರಧಾನಿ ನಿವಾಸದಿಂದ ಸೋಫಾ, ಕುರ್ಚಿ, ಹೂಕುಂಡಗಳನ್ನು ತೆಗೆದುಕೊಂಡು ಹೋದ ಪ್ರತಿಭಟನಕಾರರು
- ಒಬ್ಬ ಪ್ರತಿಭಟನಕಾರ ಲಿಪ್‌ಸ್ಟಿಕ್ ತೆಗೆದುಕೊಂಡು ಹೋದರು. ‘ನಮ್ಮ ಹೋರಾಟದ ಮೂಲಕ ನಿರಂಕುಶಾಧಿಕಾರಿಯನ್ನು ತೊಲಗಿಸಿದ್ದೇವೆ. ಅವರು ಈ ಲಿಪ್‌ಸ್ಟಿಕ್ ಅನ್ನು ಬಳಸುತ್ತಿದ್ದರು. ಹೋರಾಟದ ಸ್ಮರಣೆಗೆ ಇದನ್ನು ತೆಗೆದುಕೊಂಡಿದ್ದೇನೆ’ ಎಂದು ಆ ವ್ಯಕ್ತಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು

ಢಾಕಾಕ್ಕೆ ಏರ್ ಇಂಡಿಯಾ ವಿಮಾನ ಸೇವೆ ರದ್ದು

ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಸದ್ಯ ಪರಿಸ್ಥಿತಿ ಹದಗೆಟ್ಟಿರುವುದರಿಂದ ಢಾಕಾಕ್ಕೆ ಸಂಚರಿಸುವ ಎಲ್ಲ ವಿಮಾನಗಳನ್ನು ಏರ್ ಇಂಡಿಯಾ ತಕ್ಷಣವೇ ಜಾರಿಗೆ ಬರುವಂತೆ ಸೋಮವಾರದಿಂದಲೇ ರದ್ದುಪಡಿಸಿದೆ.

ರಾಷ್ಟ್ರೀಯ ರಾಜಧಾನಿಯಿಂದ ಢಾಕಾಗೆ ನಿತ್ಯ ಏರ್ ಇಂಡಿಯಾದ ಎರಡು ವಿಮಾನಗಳು ಸಂಚಾರ ನಡೆಸುತ್ತಿದ್ದವು.

‘ಬಾಂಗ್ಲಾದೇಶದ ಸದ್ಯದ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು, ತಕ್ಷಣವೇ ಜಾರಿಗೆ ಬರುವಂತೆ ಢಾಕಾಕ್ಕೆ ಹೋಗುವ ಮತ್ತು ಅಲ್ಲಿಂದ ಬರುವ ವಿಮಾನಗಳ ನಿಗದಿತ ಕಾರ್ಯಾಚರಣೆಯನ್ನು ನಾವು ರದ್ದುಗೊಳಿಸಿದ್ದೇವೆ. ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದೇವೆ’ ಎಂದು ಏರ್ ಇಂಡಿಯಾದ ವಕ್ತಾರರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಭಾರತ– ಬಾಂಗ್ಲಾ ನಡುವೆ ವ್ಯಾಪಾರ ಸ್ಥಗಿತ

ಕೋಲ್ಕತ್ತ (ಪಿಟಿಐ): ಭಾರತ -ಬಾಂಗ್ಲಾದೇಶದ ನಡುವೆ ವ್ಯಾಪಾರವು ಸೋಮವಾರ ಮಧ್ಯಾಹ್ನದಿಂದಲೇ ಸಂಪೂರ್ಣ ಸ್ಥಗಿತಗೊಂಡಿದೆ ಎಂದು ಇಲ್ಲಿನ ವರ್ತಕರು ತಿಳಿಸಿದ್ದಾರೆ.

ಬಾಂಗ್ಲಾದೇಶ ಸರ್ಕಾರವು ಅಗತ್ಯ ಸೇವೆಗಳನ್ನು ಹೊರತುಪಡಿಸಿ ಮೂರು ದಿನಗಳ ಮಟ್ಟಿಗೆ ವ್ಯಾಪಾರಕ್ಕೆ ರಜೆ ಘೋಷಿಸಿ ಭಾನುವಾರ ಅಧಿಸೂಚನೆ ಹೊರಡಿಸಿತ್ತು. ‘ಬಾಂಗ್ಲಾದೇಶದ ಕಸ್ಟಮ್ಸ್‌ನಿಂದ ತಮ್ಮ ಬಂದರುಗಳಲ್ಲಿ ಕ್ಲಿಯರೆನ್ಸ್ ಕೊರತೆಯಿಂದಾಗಿ, ಎಲ್ಲ ಭೂ ಬಂದರುಗಳಲ್ಲಿ ರಫ್ತು ಮತ್ತು ಆಮದು ಚಟುವಟಿಕೆಗಳು ಸ್ಥಗಿತಗೊಂಡಿವೆ.

ಪ್ರಾಥಮಿಕ ದೋಷಾರೋಪ ಪಟ್ಟಿ ಸಲ್ಲಿಸಿದ ಎಸ್‌ಐಟಿ

ವಾಲ್ಮೀಕಿ ನಿಗಮ: 3,072 ಪುಟಗಳ ಚಾರ್ಜ್‌ಶೀಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ₹94.73 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳದ (ಎಸ್‌ಐಟಿ) ಪೊಲೀಸರು, ನಗರದ 3ನೇ ಎಸಿಎಂಎಂ ನ್ಯಾಯಾಲಯಕ್ಕೆ ಏಳು ಸಂಪುಟಗಳಲ್ಲಿ 3,072 ಪುಟಗಳನ್ನು ಒಳಗೊಂಡಿರುವ ಪ್ರಾಥಮಿಕ ಆರೋಪ ಪಟ್ಟಿಯನ್ನು ಸೋಮವಾರ ಸಲ್ಲಿಸಿದ್ದಾರೆ.

'ಒಂದು ಹಂತದ ತನಿಖೆ ಪೂರ್ಣಗೊಳಿಸಿ, ಪ್ರಾಥಮಿಕ ಆರೋಪ ಪಟ್ಟಿ ಸಲ್ಲಿಸಲಾಗಿದೆ. ಆರೋಪಿಗಳಿಂದ ಇನ್ನೂ ಕೆಲವು ಮಾಹಿತಿ ಕಲೆ ಹಾಕಲಾಗುತ್ತಿದ್ದು, ತನಿಖೆ ಮುಂದುವರಿಸಲಾಗಿದೆ. ತನಿಖೆ ಪೂರ್ಣಗೊಂಡ ನಂತರ ಅಂತಿಮ ಆರೋಪ ಪಟ್ಟಿ ಸಲ್ಲಿಸಲಾಗುವುದು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಧೀಕ್ಷಕರಾಗಿದ್ದ ಪಿ.ಚಂದ್ರಶೇಖರನ್ ಅವರು ಮೇ 28 ರಂದು ಶಿವಮೊಗ್ಗದ ತಮ್ಮ ನಿವಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆಗೂ ಮುನ್ನ ಬರೆದಿಟ್ಟ ಮರಣ ಪತ್ರದಲ್ಲಿ ನಿಗಮದಲ್ಲಿ ನಡೆದಿದ್ದ ಅಕ್ರಮದ ಕುರಿತು ಕೆಲವು ಮಾಹಿತಿ ಉಲ್ಲೇಖಿಸಿದ್ದರು. ಅದಾದ ಮೇಲೆ, ನಿಗಮದ ಪ್ರಧಾನ ವ್ಯವಸ್ಥಾಪಕ ಎ.ರಾಜಶೇಖರ್ ಅವರು, 'ನಕಲಿ ದಾಖಲೆ ಸೃಷ್ಟಿಸಿ ಬೇರೆ ಬೇರೆ ಬ್ಯಾಂಕ್ ಖಾತೆಗಳಿಗೆ ವಾಲ್ಮೀಕಿ ಅಭಿವೃದ್ಧಿ ನಿಗಮದ ₹94.73 ಕೋಟಿ ಹಣ ವರ್ಗಾವಣೆ ಮಾಡಿಕೊಳ್ಳಲಾಗಿದೆ' ಎಂದು ಆರೋಪಿಸಿ, ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದ್ದರು.

ದೂರು ಆಧರಿಸಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಸಿಇಒ ಸೇರಿದಂತೆ ಬ್ಯಾಂಕ್‌ನ ಆರು ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಬಳಿಕ ಸರ್ಕಾರ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾಯಿಸಿತ್ತು. ತನಿಖೆಗೆ ಮನೀಶ್ ಖರ್ಬೀಕರ್ ನೇತೃತ್ವದಲ್ಲಿ ಎಸ್‌ಐಟಿ ರಚಿಸಲಾಗಿತ್ತು.

ಏಳು ಪ್ರಕರಣ ದಾಖಲು

ಪ್ರಕರಣ ಸಂಬಂಧ ವಿವಿಧ ಠಾಣೆಗಳಲ್ಲಿ ದಾಖಲಾದ ಏಳು ಪ್ರಕರಣಗಳ ತನಿಖೆಯನ್ನು ಎಸ್‌ಐಟಿ ವರ್ಗಾವಣೆ ಮಾಡಲಾಗಿತ್ತು. ಆ ಪ್ರಕರಣಗಳಿಗೆ ಸಂಬಂಧಿಸಿದ ಎಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗಿದೆ ಎಂದು ಉಲ್ಲೇಖಿಸಲಾಗಿದೆ.

ನಿಗಮದ ಮಾಜಿ ವ್ಯವಸ್ಥಾಪಕ ಜೆ.ಜಿ.ಪದ್ಮನಾಭ, ಮಾಜಿ ಲೆಕ್ಕಾಧಿಕಾರಿ ಪರಶುರಾಮ್ ದುರ್ಗಣ್ಣನವರ್, ಹೈದರಾಬಾದ್‌ನ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸತ್ಯನಾರಾಯಣ ಇಟಕಾರಿ, ಸ್ನೇಹಿತ ನಾಗರಾಜ್, ನಾಗರಾಜ್ ಅವರ ಸಂಬಂಧಿ ನಾಗೇಶ್ವರ ರಾವ್, ಹೈದರಾಬಾದ್‌ನ ಮಧ್ಯವರ್ತಿಗಳಾದ ಎಂ.ಚಂದ್ರಮೋಹನ್, ಗಾದಿರಾಜು ಸತ್ಯನಾರಾಯಣ ವರ್ಮಾ, ಉಡುಪಿಯ ಜೆ.ಕೆ.ಜಗದೀಶ್, ಬೆಂಗಳೂರಿನ ತೇಜ ತಮ್ಮಯ್ಯ, ಆಂಧ್ರಪ್ರದೇಶದ ಗಚ್ಚಿಬೌಲಿ ಪಿಟ್ಲ ಶ್ರೀನಿವಾಸ, ಹೈದರಾಬಾದ್‌ನ ಸಾಯಿತೇಜ, ಆಂಧ್ರಪ್ರದೇಶದ ಕಾಕಿ ಶ್ರೀನಿವಾಸ್ ಅವರನ್ನು ಬಂಧಿಸಲಾಗಿದೆ ಎಂದು ವಿವರಿಸಲಾಗಿದೆ.

ಬಂಧಿತರು ಮಾಜಿ ಸಚಿವ ನಾಗೇಂದ್ರ ಅವರ ಪಾತ್ರದ ಬಗ್ಗೆ ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾರೆ. ಆ ಮಾಹಿತಿ ಆಧರಿಸಿ ನಾಗೇಂದ್ರ ಅವರನ್ನೂ ಎಸ್‌ಐಟಿ ವಿಚಾರಣೆ ನಡೆಸಿತ್ತು. 'ಸ್ನೇಹಿತ ನಾಗರಾಜ್ ಅವರು ಮಾಜಿ ಸಚಿವ ಬಿ.ನಾಗೇಂದ್ರ ಅವರ ಆಪ್ತರೆಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಏನೇನು ಜಪ್ತಿ?

ಆರೋಪಿಗಳಿಂದ ₹16.83 ಕೋಟಿ ನಗದು, 16 ಕೆ.ಜಿ ಚಿನ್ನ (₹11.70 ಕೋಟಿ ಮೌಲ್ಯ), ಲ್ಯಾಂಬೊರ್ಗಿನಿ, ಮರ್ಸಿಡೀಸ್ ಬೆಂಜ್ ಕಾರು (₹4.51 ಕೋಟಿ ಮೌಲ್ಯ) ವಶಕ್ಕೆ ಪಡೆಯಲಾಗಿದೆ. ತನಿಖಾಧಿಕಾರಿಯ ಹೆಸರಿನಲ್ಲಿರುವ ಬ್ಯಾಂಕ್ ಖಾತೆಯಲ್ಲಿ ₹3.91 ಕೋಟಿ ಹಾಗೂ ವಿವಿಧ ಬ್ಯಾಂಕ್ ಖಾತೆಗಳಲ್ಲಿ ₹13.72 ಕೋಟಿ ಮಹಿವಾಟು ಸ್ಥಗಿತಗೊಳಿಸಲಾಗಿದೆ. ಒಟ್ಟು ₹49.96 ಕೋಟಿ ಚಿನ್ನ, ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಉಲ್ಲೇಖಿಸಲಾಗಿದೆ.

ಕಾರಾಗೃಹ ಡಿಜಿ ಖುದ್ದು ಹಾಜರಿಗೆ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ಎರಡನೇ ಆರೋಪಿಯಾಗಿರುವ ಹೈದರಾಬಾದ್‌ನ ಸತ್ಯನಾರಾಯಣ ವರ್ಮ ವಿರುದ್ಧ ಹೊರಡಿಸಲಾಗಿದ್ದ ಬಾಡಿ ವಾರಂಟ್ ಅನ್ನು ಜಾರಿಗೊಳಿಸದೆ ಕೋರ್ಟ್ ಆದೇಶ ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ ರಾಜ್ಯ ಕಾರಾಗೃಹಗಳ ಡಿಜಿ ಮತ್ತು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಸೂಪರಿಂಟೆಂಡೆಂಟ್ ಅವರ ಖುದ್ದು ಹಾಜರಿಗೆ ಜನಪ್ರತಿನಿಧಿಗಳ ಕೋರ್ಟ್ ಆದೇಶಿಸಿದೆ.

ಸೋಮವಾರ ವಿಡಿಯೊ ಕಾನ್ಫರನ್ಸ್ ಮುಖಾಂತರ ಪ್ರಕರಣದ ಮೊದಲ ಆರೋಪಿ ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ (ಸಿಸಿಎಚ್-82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದೆ ಹಾಜರುಪಡಿಸಲಾಯಿತು.

ವಿಚಾರಣೆ ವೇಳೆ ಇಡಿ ಪರ ಹಾಜರಾಗಿದ್ದ ಪಿ.ಪ್ರಸನ್ನ ಕುಮಾರ್, 'ಪ್ರಕರಣದ ಎರಡನೇ ಆರೋಪಿ ಸತ್ಯನಾರಾಯಣ ವರ್ಮ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಇಸಿಐಆರ್ (ಎನ್‌ಫೋರ್ಸ್‌ಮೆಂಟ್ ಕೇಸ್ ಇನ್‌ಫಾರ್ಮೇಷನ್ ರಿಪೋರ್ಟ್) ದಾಖಲಿಸಿದೆ. ಈ ಸಂಬಂಧ ಇ.ಡಿ ಕೋರಿದ್ದ ಅರ್ಜಿಯನ್ನು ಮಾನ್ಯ ಮಾಡಿದ್ದ ಕೋರ್ಟ್ ಅವರ ವಿರುದ್ಧ ಎರಡು ಬಾರಿ ಬಾಡಿ ವಾರಂಟ್ ಹೊರಡಿಸಿ ಆದೇಶಿಸಿತ್ತು. ಆದರೆ, ಕೋರ್ಟ್‌ನ ಈ ಆದೇಶವನ್ನು ಉಲ್ಲಂಘಿಸಿರುವ ಜೈಲು ಅಧಿಕಾರಿಗಳು ಅವರನ್ನು ಹಾಜರುಪಡಿಸದೆ ಸಂಬಂಧಿಸಿದಂತೆ ಮೂರನೇ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಅಧೀನದಲ್ಲಿರುವ ತನಿಖಾ ಸಂಸ್ಥೆಗಳ ವಿಚಾರಣೆಗಾಗಿ ಅವರ ವಶಕ್ಕೆ ಒಪ್ಪಿಸಿದೆ' ಎಂದು ಆಕ್ಷೇಪಿಸಿದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಾಧೀಶರು, ರಾಜ್ಯ ಕಾರಾಗೃಹಗಳ ಡಿಜಿ ಮತ್ತು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಸೂಪರಿಂಟೆಂಡೆಂಟ್ ಅವರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಲು ಮತ್ತು ಮುಂದಿನ ವಿಚಾರಣೆ ವೇಳೆ ಖುದ್ದು ಹಾಜರಿರುವಂತೆ ಆದೇಶಿಸಿದ್ದಾರೆ. ಇದೇ ವೇಳೆ ನಾಗೇಂದ್ರ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಯಿತು. ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಲಾಗಿದೆ.

ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಶಾಲಾ ಶಿಕ್ಷಣ ಇಲಾಖೆ ಅರ್ಜಿ ಆಹ್ವಾನಿಸಿದ್ದು, ಆ. 16ರ ಒಳಗೆ ಆನ್‌ಲೈನ್ ಅರ್ಜಿ ಸಲ್ಲಿಸಬಹುದು.

ಉತ್ತಮ ಬೋಧನೆಯ ಜೊತೆಗೆ ಮಕ್ಕಳ ಪ್ರತಿಭೆಯ ವಿಕಸನಕ್ಕೆ ಶ್ರಮಿಸಿದ, ವಿಶಿಷ್ಟ ಕೊಡುಗೆ ನೀಡಿದ ಶಿಕ್ಷಕರು, ವಿಶೇಷ ಶಿಕ್ಷಕರು, ಮುಖ್ಯ ಶಿಕ್ಷಕರು www.schooleducation.kar.nic.in ಮೂಲಕ ಅರ್ಜಿ ಸಲ್ಲಿಸಬಹುದು. ಆಯ್ಕೆಯಾದವರಿಗೆ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಆಯುಕ್ತೆ ಬಿ.ಬಿ. ಕಾವೇರಿ ತಿಳಿಸಿದ್ದಾರೆ.

₹42 ಕೋಟಿ ಅಕ್ರಮ ಬಹಿರಂಗ?

ಒಂದನೇ ಪುಟದಿಂದ..

ಉಳಿದವರನ್ನು ನಿಗಮದ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ. ನಾಗರಾಜಪ್ಪ ಅವರು 2022ರ ಜುಲೈ 1ರಂದು ನಿಗಮದ ಕೆಲಸದಿಂದ ಬಿಡುಗಡೆ ಹೊಂದಿದ್ದು, ಕರ್ನಾಟಕ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ಆಯೋಗಕ್ಕೆ ವರ್ಗಾವಣೆಯಾಗಿದ್ದಾರೆ. ಶಂಕರ ಜು. ದೇವರಮನಿ ಅವರು ವಿಜಯಪುರ ಜಿಲ್ಲೆಯ ಮಿಣಜಗಿ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದು, ಕೆ.ಎಸ್. ನಾಗಮೂರ್ತಿ ಕಲಬುರಗಿ ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಯಾದಗಿರಿಯ ಯೆಸ್ ಬ್ಯಾಂಕ್‌ನ ಶಾಖೆಯಲ್ಲಿ ನಾಗಮೂರ್ತಿ ಖಾತೆ ತೆರೆದು ₹11.80 ಕೋಟಿ ಅನುದಾನವನ್ನು 118 ಫಲಾನುಭವಿಗಳ ಪೈಕಿ 20 ಫಲಾನುಭವಿಗಳ ಹಣವನ್ನು ಆರ್‌ಟಿಜಿಎಸ್ ಮೂಲಕ ಸೋಮನಾಥೇಶ್ವರ ಎಂಟರ್‌ಪ್ರೈಸಸ್ ಖಾತೆಗೆ ವರ್ಗಾವಣೆ ಮಾಡಿದ್ದರು. ಅನ್ಯ ಕರ್ತವ್ಯದ ಮೇಲೆ ನಿಗಮದ ವಿಜಯಪುರ ಜಿಲ್ಲಾ ಅಭಿವೃದ್ಧಿ ಅಧಿಕಾರಿಯಾಗಿ ಪ್ರಭಾರ ಹುದ್ದೆಯಲ್ಲಿದ್ದ ಶಂಕರ ಜೂ ದೇವರಮನಿ ಅವರು ವಿಜಯಪುರದ ಯೆಸ್ ಬ್ಯಾಂಕಿನಲ್ಲಿ ಖಾತೆ ತೆರೆದು ₹8.15 ಕೋಟಿ ಅನುದಾನವನ್ನು 53 ಫಲಾನುಭವಿಗಳ ಖಾತೆಗೆ ವರ್ಗಾವಣೆ ಮಾಡಿದ್ದರು.

ಬೆಂಗಳೂರು ನಗರ ಜಿಲ್ಲೆಯಲ್ಲಿ ವಿವಿಧ ಬ್ಯಾಂಕ್‌ಗಳ ಖಾತೆಯಿಂದ ಒಟ್ಟು ₹11.65 ಕೋಟಿಯನ್ನು ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿತ್ತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೂ ಇದೇ ರೀತಿ ಹಣ ಬಿಡುಗಡೆ ಮಾಡಲಾಗಿತ್ತು. ರಾಯಚೂರು ಜಿಲ್ಲೆಯಲ್ಲಿ ಉದ್ಯಮ ಶೀಲತಾ ಯೋಜನೆಯಡಿ 100 ಫಲಾನುಭವಿಗಳಿಗೆ ತಲಾ ₹1 ಲಕ್ಷದಂತೆ ₹1 ಕೋಟಿಯನ್ನು ನೀಡದೆ ವಿವಿದ್ದೋಶ ಸಹಕಾರ ಸಂಘಕ್ಕೆ ಪಾವತಿಸಲಾಗಿತ್ತು. ಹೀಗೆ, ನಿಗಮದಲ್ಲಿ ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳಲ್ಲಿ ಹಣ ದುರ್ಬಳಕೆ ಆಗಿರುವುದು ಪತ್ತೆಯಾಗಿದೆ.

'ಗ್ರಾಮಗಳಿಗೆ ಭೇಟಿ ನೀಡದ ಸಮಿತಿ'

ಪ್ರಜಾವಾಣಿ ವಾರ್ತೆ



ಈಶ್ವರ ಖಂಡ್ರೆ

ಬೆಂಗಳೂರು: 'ಪಶ್ಚಿಮಘಟ್ಟದ ಜೀವವೈವಿಧ್ಯ ಸಂರಕ್ಷಣೆ ಕುರಿತ ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿ ಎಲ್ಲ ಬಾಧ್ಯಸ್ಥರ ಜೊತೆ ಚರ್ಚಿಸಿ, ಸಾಧಕ ಬಾಧಕಗಳ ಬಗ್ಗೆ ವರದಿ ನೀಡಲು ಕೇಂದ್ರ ಸರ್ಕಾರ ರಚಿಸಿದ್ದ ಐಎಫ್‌ಎಸ್ ಅಧಿಕಾರಿ ಸಂಜಯ್ ಕುಮಾರ್ ನೇತೃತ್ವದ ಸಮಿತಿಯು ರಾಜ್ಯದಲ್ಲಿನ ಯಾವುದೇ ಗ್ರಾಮಕ್ಕೆ ಭೇಟಿ ನೀಡಿಲ್ಲ' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಆಕ್ಷೇಪ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಈ ವರದಿಯಿಂದ ಬಾಧಿತರಾಗುವ 1,533 ಗ್ರಾಮಗಳ ವ್ಯಾಪ್ತಿಯ ಜನಪ್ರತಿನಿಧಿಗಳು, ನಿವಾಸಿಗಳ ಜೊತೆ ಸಮಾಲೋಚನೆ ನಡೆಸಿ ವರದಿ ನೀಡಲು ಈ ಸಮಿತಿಯನ್ನು ರಚಿಸಲಾಗಿತ್ತು. ನನ್ನನ್ನು ಔಪಚಾರಿಕವಾಗಿ ಆ ಸಮಿತಿಯ ಸದಸ್ಯರು ಭೇಟಿ ಮಾಡಿದ್ದರು. ಆದರೆ, ಜನರೊಂದಿಗೆ ಮಾತುಕತೆಯನ್ನೇ ನಡೆಸಿಲ್ಲ' ಎಂದರು.

ಚರ್ಚಿಸಿ ತೀರ್ಮಾನ: 'ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸುವ ತೀರ್ಮಾನವನ್ನು ರಾಜ್ಯ ಸರ್ಕಾರ ಈಗಾಗಲೇ ತೆಗೆದುಕೊಂಡಿದೆ. ಕೇಂದ್ರ ಸರ್ಕಾರ ಈಗ ಮತ್ತೊಂದು ಅಧಿಸೂಚನೆ ಹೊರಡಿಸಿದೆ. ಮತ್ತೊಮ್ಮೆ ಮುಖ್ಯಮಂತ್ರಿ ಮತ್ತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಸರ್ವಪಕ್ಷಗಳ ನಾಯಕರ ಅಭಿಪ್ರಾಯ ಪಡೆದ ನಂತರ ಈ ಕುರಿತು ತೀರ್ಮಾನಿಸಲಾಗುವುದು' ಎಂದರು.

'ರಾಜ್ಯದ 20,668 ಚ.ಕಿ. ಮೀ.ಗೂ ಹೆಚ್ಚು ವಿಸ್ತೀರ್ಣವನ್ನು ಪರಿಸರ ಸೂಕ್ಷ್ಮಪ್ರದೇಶವೆಂದು ಕಸ್ತೂರಿ ರಂಗನ್ ವರದಿ ಹೇಳಿದೆ. ರಾಜ್ಯದ 10 ಜಿಲ್ಲೆಗಳ ಅಂದರೆ, ಚಾಮರಾಜನಗರ, ಕೊಡಗು, ಮೈಸೂರು, ಹಾಸನ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಬೆಳಗಾವಿಯ 33 (ತಾಲ್ಲೂಕು ಪುನರ್ ವಿಂಗಡಣೆ ಬಳಿಕ 39) ತಾಲ್ಲೂಕುಗಳ 1,533 ಗ್ರಾಮ ಈ ವ್ಯಾಪ್ತಿಯಲ್ಲಿವೆ' ಎಂದರು.

ಕೋಚಿಂಗ್ ಸೆಂಟರ್‌ಗಳು ಮೃತ್ಯುಕೂಪಗಳು: 'ಸುಪ್ರೀಂ'

ನವದೆಹಲಿ (ಪಿಟಿಐ): ಕೋಚಿಂಗ್ ಸೆಂಟರ್‌ಗಳು ಮೃತ್ಯುಕೂಪಗಳಾಗಿದ್ದು, ವಿದ್ಯಾರ್ಥಿಗಳ ಜೀವದ ಜತೆಗೆ ಚೆಲ್ಲಾಟವಾಡುತ್ತಿವೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದ್ದು, ಈ ಸಂಬಂಧ ಕೇಂದ್ರ ಸರ್ಕಾರ ಮತ್ತು ದೆಹಲಿ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಇತ್ತೀಚೆಗೆ ದೆಹಲಿಯಲ್ಲಿ ಮೂವರು ಐಎಎಸ್ ಆಕಾಂಕ್ಷಿಗಳು ಕೋಚಿಂಗ್ ಕೇಂದ್ರದ ನೆಲಮಾಳಿಗೆಗೆ ನುಗ್ಗಿದ ಪ್ರವಾಹದ ನೀರಿನಲ್ಲಿ ಮುಳುಗಿ ಮೃತಪಟ್ಟ ಪ್ರಕರಣವನ್ನು ಸ್ವಯಂ ಪ್ರೇರಿತವಾಗಿ ವಿಚಾರಣೆಗೆ ಪರಿಗಣಿಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು, ಈ ಘಟನೆಯು ಎಲ್ಲರ ಕಣ್ಣು ತೆರೆಸುವಂತಿದೆ ಎಂದು ಹೇಳಿದೆ.

'ಈಗ ನಡೆದಿರುವ ಘಟನೆ ಭಯಾನಕವಾದುದು. ಅಗತ್ಯ ಬಿದ್ದರೆ ಈ ಕೋಚಿಂಗ್ ಸೆಂಟರ್‌ಗಳ ಬಾಗಿಲು ಮುಚ್ಚಿಸುತ್ತೇವೆ. ಸದ್ಯಕ್ಕೆ, ಕಟ್ಟಡದ ನಿಯಮಗಳು ಮತ್ತು ಇತರ ಸುರಕ್ಷತಾ ಮಾನದಂಡಗಳನ್ನು ಸರಿಯಾಗಿ ಪಾಲಿಸದೇ ಇದ್ದರೆ ಆನ್‌ಲೈನ್ ಕೋಚಿಂಗ್ ಸೂಕ್ತ' ಎಂದು ಪೀಠ ಹೇಳಿದೆ.

ಜುಲೈ 27ರಂದು ದೆಹಲಿಯ ಹಳೆಯ ರಾಜೇಂದರ್ ನಗರದ ರಾವ್ ಐಎಎಸ್ ಸ್ಟಡಿ ಸರ್ಕಲ್‌ನ ನೆಲಮಾಳಿಗೆಯ ಗ್ರಂಥಾಲಯದಲ್ಲಿ ಅಧ್ಯಯನ ನಿರತವಾಗಿದ್ದ ಮೂವರು ಐಎಎಸ್ ಆಕಾಂಕ್ಷಿಗಳು, ಗ್ರಂಥಾಲಯಕ್ಕೆ ನುಗ್ಗಿದ ಪ್ರವಾಹದ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದರು. ಈ ಪ್ರಕರಣದಲ್ಲಿ ರಾವ್ ಐಎಎಸ್ ಸ್ಟಡಿ ಸರ್ಕಲ್ ಸಿಇಒ ಅಭಿಷೇಕ್ ಗುಪ್ತಾ ಮತ್ತು ಸಂಯೋಜಕ ದೇಶಪಾಲ್ ಸಿಂಗ್ ಸೇರಿ ಏಳು ಮಂದಿಯನ್ನು ಬಂಧಿಸಲಾಗಿದೆ.

ಹಾಲಿ ಅಧಿವೇಶನದಲ್ಲಿ ಮಸೂದೆ ಮಂಡನೆಗೆ ಮುಂದಾಗಿರುವ ಕೇಂದ್ರ ಸರ್ಕಾರ

ವಕ್ಫ್ ಕಾಯ್ದೆ: 40 ತಿದ್ದುಪಡಿಗೆ ಸಿದ್ಧತೆ

ನವದೆಹಲಿ (ಪಿಟಿಐ): ವಕ್ಫ್ ಮಂಡಳಿಯ ಕಾರ್ಯದಲ್ಲಿ ಹೆಚ್ಚು ಪಾರದರ್ಶಕತೆ ಮತ್ತು ಹೊಣೆಗಾರಿಕೆ ತರಲು ಹಾಗೂ ಮಂಡಳಿಯಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಕಡ್ಡಾಯ ಮಾಡಲು ಕೇಂದ್ರ ಸರ್ಕಾರವು 1995ರ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದೆ. ಈ ಕುರಿತ ಮಸೂದೆಯನ್ನು ಹಾಲಿ ಅಧಿವೇಶನ ದಲ್ಲಿ ಮಂಡನೆ ಮಾಡಲು ಸರ್ಕಾರ ಸಿದ್ಧತೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮುಸ್ಲಿಂ ಸಮುದಾಯದ ಒಳಗೇ ಈ ಕುರಿತಂತೆ ಬೇಡಿಕೆ ಇದ್ದ ಕಾರಣ ಈ ಹೆಜ್ಜೆ ಇಡಲಾಗಿದೆ ಎಂದು ಹೇಳಿವೆ.

'ಪ್ರಸ್ತಾವಿತ ಮಸೂದೆ ಮೂಲಕ ಪ್ರಸ್ತುತ ಕಾಯ್ದೆಯಲ್ಲಿ 40ಕ್ಕೂ ಹೆಚ್ಚು ಬದಲಾವಣೆ ತರಲು ಉದ್ದೇಶಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ನ್ಯಾಯಮೂರ್ತಿ ಸಾಚಾರ್ ಆಯೋಗ ಮತ್ತು ಕೆ.ರೆಹಮಾನ್ ಖಾನ್ ಅವರ ನೇತೃತ್ವದ ಜಂಟಿ ಸಂಸದೀಯ ಸಮಿತಿಯು ಶಿಫಾರಸು ಮಾಡಿದ ಕಾರಣ ಸರ್ಕಾರವು ತಿದ್ದುಪಡಿ ತರಲು ಮುಂದಾಗಿದೆ ಎಂದು ಮೂಲಗಳು ಹೇಳಿವೆ.

'ವಕ್ಫ್ ಮಂಡಳಿಗಳಿಂದ ಸರ್ಕಾರಕ್ಕೆ ವಾರ್ಷಿಕ ಅಂದಾಜು ₹200 ಕೋಟಿ ಆದಾಯ ಬರುತ್ತಿದೆ. ಆದರೆ ಮಂಡಳಿಗಳು ಹೊಂದಿರುವ ಆಸ್ತಿಗಳಿಗೂ ಅವುಗಳಿಂದ ಬರುತ್ತಿರುವ ಕಂದಾಯಕ್ಕೂ ತಾಳೆಯಾಗುತ್ತಿಲ್ಲ' ಎಂದು ತಿಳಿಸಿವೆ.

'ವಕ್ಫ್ ಮಂಡಳಿಯ ನಿರ್ಧಾರಗಳನ್ನು ಕೋರ್ಟ್‌ನಲ್ಲಿ ಪ್ರಶ್ನಿಸುವಂತಿರಲಿಲ್ಲ. ತಿದ್ದುಪಡಿಯಿಂದ ಆ ಅಧಿಕಾರ ದೊರೆಯುತ್ತಿದೆ' ಎಂದು ವ್ಯಕ್ತಿಯೊಬ್ಬರು ಹೇಳಿದರು.

ದೇಶದಲ್ಲಿ 30 ವಕ್ಫ್ ಮಂಡಳಿಗಳಿವೆ. ಮೊದಲಿಗೆ ಇವು ದೇಶದಾದ್ಯಂತ 52,000 ಆಸ್ತಿ ಹೊಂದಿದ್ದವು. 2009ರಲ್ಲಿ 4 ಲಕ್ಷ ಎಕರೆ ವ್ಯಾಪ್ತಿಯಲ್ಲಿ ವಕ್ಫ್‌ನ 3,00,000 ನೋಂದಾಯಿತ ಆಸ್ತಿ ಇತ್ತು. ಪ್ರಸ್ತುತ 8 ಲಕ್ಷಕ್ಕೂ ಅಧಿಕ ಎಕರೆ ವ್ಯಾಪ್ತಿಯಲ್ಲಿ 8,72,292 ಆಸ್ತಿ ಇವೆ.

ವಿಪಕ್ಷಗಳಿಂದ ವಿರೋಧ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಮಾಜವನ್ನು ಒಡೆಯುವ ಉದ್ದೇಶದಿಂದ ವಕ್ಫ್ ಮಂಡಳಿ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದೆ. ಇದನ್ನು ಬಲವಾಗಿ ವಿರೋಧಿಸುತ್ತೇವೆ ಎಂದು ವಿರೋಧ ಪಕ್ಷಗಳ ಹಲವು ನಾಯಕರು ಸೋಮವಾರ ಪ್ರತಿಕ್ರಿಯಿಸಿದ್ದಾರೆ.

ಈ ಮಧ್ಯೆ ಹಲವು ಬಿಜೆಪಿ ನಾಯಕರು ಸರ್ಕಾರದ ನಡೆಯನ್ನು ಸ್ವಾಗತಿಸಿ ಸಮರ್ಥಿಸಿಕೊಂಡಿದ್ದಾರೆ. ಮೋದಿ ಸರ್ಕಾರವು ಎಲ್ಲ ಹಂತದಲ್ಲೂ ಪಾರದರ್ಶಕತೆ ತರುವ ಉದ್ದೇಶದಿಂದ ಕೆಲಸ ಮಾಡುತ್ತದೆ ಎಂದು ಹೇಳಿದ್ದಾರೆ.

ಅಖಿಲ ಭಾರತ ಮುಸ್ಲಿಂ ವೈಯಕ್ತಿಯ ಕಾನೂನು ಮಂಡಳಿಯು, 'ವಕ್ಫ್ ಮಂಡಳಿಗಳ ಅಧಿಕಾರ ಮತ್ತು ಹಕ್ಕುಗಳ ಮೇಲಿನ ಹಸ್ತಕ್ಷೇಪವನ್ನು ಸಹಿಸುವುದಿಲ್ಲ' ಎಂದು ಹೇಳಿದೆ.

ಮಸೂದೆಯನ್ನು ಸಂಪೂರ್ಣವಾಗಿ ವಿರೋಧಿಸುವಂತೆ ಎನ್‌ಡಿಎ ಮಿತ್ರಪಕ್ಷಗಳು ಮತ್ತು ವಿರೋಧ ಪಕ್ಷಗಳನ್ನು ಅದು ಕೋರಿದೆ.

ತಿದ್ದುಪಡಿ ಮಸೂದೆ: ಪ್ರಮುಖ ಅಂಶಗಳು

- ಮಂಡಳಿಯ ಆಸ್ತಿ ಕುರಿತು ಜಿಲ್ಲಾಧಿಕಾರಿಗಳ ಬಳಿ ಕಡ್ಡಾಯವಾಗಿ ನೋಂದಣಿ ಮಾಡಿಸಬೇಕು
- ವಕ್ಫ್ ಮಂಡಳಿಯು 'ವಕ್ಫ್ ಆಸ್ತಿ' ಎಂದು ಘೋಷಿಸುವ ಮುನ್ನ ಆಸ್ತಿಗಳ ಪರಿಶೀಲನೆ
- ವಕ್ಫ್ ಬಳಿ ಇರುವ ವಿವಾದಿತ ಭೂಮಿಗಳ ಪರಿಶೀಲನೆ. ಈ ಮೂಲಕ ಆಸ್ತಿ ವಿಚಾರದಲ್ಲಿ ಉಂಟಾಗಿರುವ ಅನಗತ್ಯ ವ್ಯಾಜ್ಯಗಳ ಪರಿಹಾರ
- ಮಂಡಳಿಯಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ

ವಕ್ಫ್ ಮಂಡಳಿಯಲ್ಲಿ ಪಾರದರ್ಶಕತೆ ತರಬೇಕು ಮತ್ತು ಸಾಮಾನ್ಯ ಮುಸ್ಲಿಮರಿಗೆ ಪ್ರಾತಿನಿಧ್ಯ ನೀಡಬೇಕೆಂದು ಸುದೀರ್ಘ ಕಾಲದಿಂದ ಬೇಡಿಕೆ ಇದೆ
ಕಿರಣ್ ರಿಜಿಜು, ಕೇಂದ್ರ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ

ಬಿಜೆಪಿಯು ಆರಂಭದಿಂದಲೂ ವಕ್ಫ್ ಮಂಡಳಿ ಮತ್ತು ಅದರ ಆಸ್ತಿಗೆ ವಿರುದ್ಧವಾಗಿದೆ. ಇದರ ಹಿಂದೆ ಆರ್‌ಎಸ್‌ಎಸ್‌ನ 'ಹಿಂದುತ್ವ ಅಜೆಂಡಾ' ಇದೆ
ಅಸಾದುದ್ದೀನ್ ಒವೈಸಿ, ಎಐಎಂಐಎಂ ಮುಖ್ಯಸ್ಥ

ದೇಶವನ್ನು ಒಡೆದು ಆಳುವ ನೀತಿಯಲ್ಲಿ ಬಿಜೆಪಿಯು ನಂಬಿಕೆ ಇಟ್ಟಿದೆ. ಕೇಂದ್ರ ಸರ್ಕಾರವು ವಕ್ಫ್ ಮಂಡಳಿಯನ್ನು ಬಲಪಡಿಸುವ ಬದಲಾಗಿ ಹಸ್ತಕ್ಷೇಪಕ್ಕೆ ಯತ್ನಿಸುತ್ತಿದೆ
ಅಮರಾ ರಾಮ್, ಸಿಪಿಎಂ ಸಂಸದ

ನರೇಂದ್ರ ಮೋದಿ ಅವರ ಸರ್ಕಾರವು ಪಾರದರ್ಶಕವಾಗಿದೆ. ಹಗರಣಕೋರರು ಮಾತ್ರ ಪಾರದರ್ಶಕತೆಗೆ ವಿರೋಧ ವ್ಯಕ್ತಪಡಿಸುತ್ತಾರೆ
ಸಂಜಯ್ ಜೈಸ್ವಾಲ್, ಬಿಜೆಪಿ ಸಂಸದ

ಹಿಂದೂ–ಮುಸ್ಲಿಂ ನಡುವೆ ಒಡಕು ಮೂಡಿಸುವುದೇ ಬಿಜೆಪಿ ಕೆಲಸ. ಅದು ಮುಸ್ಲಿಮರ ಹಕ್ಕುಗಳನ್ನು ಕಸಿಯಲು ಯತ್ನಿಸುತ್ತಿದೆ. ನಾವು ಇದನ್ನು ವಿರೋಧಿಸುತ್ತೇವೆ
ಅಖಿಲೇಶ್ ಯಾದವ್ ಸಮಾಜವಾದಿ ಪಕ್ಷದ ಮುಖ್ಯಸ್ಥ

ಸಿಬಿಐ ಬಂಧನ ಪ್ರಶ್ನಿಸಿದ್ದ ದೆಹಲಿ ಮುಖ್ಯಮಂತ್ರಿ

ಕೇಜ್ರಿವಾಲ್ ಅರ್ಜಿ ವಜಾ



ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ತನ್ನನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾಗೊಳಿಸಿದೆ.

ಸಿಬಿಐ ನಿರ್ಧಾರವನ್ನು ಎತ್ತಿಹಿಡಿದ ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರು, 'ಬಂಧನಕ್ಕೆ ತಡೆ ನೀಡಲು ಕೇಜ್ರಿವಾಲ್ ಸಮರ್ಪಕ ಕಾರಣ ನೀಡಿಲ್ಲ' ಎಂದು ತಿಳಿಸಿದ್ದಾರೆ.

ಕೇಜ್ರಿವಾಲ್ ಜಾಮೀನುಅರ್ಜಿಯನ್ನು ಕೂಡ ವಿಲೇವಾರಿ ಮಾಡಿದ ಹೈಕೋರ್ಟ್, ವಿಚಾರಣಾ ನ್ಯಾಯಾಲಯದ ಮೊರೆಹೋಗಲು ಅವಕಾಶ ನೀಡಿದೆ.

ಸಿಬಿಐ ಬಂಧನ ಪ್ರಶ್ನಿಸಿದ್ದ ಅರ್ಜಿಯ ವಿಚಾರಣೆಯನ್ನು ಜುಲೈ 17ಕ್ಕೆ ಪೂರ್ಣಗೊಳಿಸಿದ್ದ ನ್ಯಾಯಾಲಯವು ತೀರ್ಪನ್ನು ಕಾಯ್ದಿರಿಸಿತ್ತು. ಜುಲೈ 29ರಂದು ಜಾಮೀನು ಅರ್ಜಿ ಕುರಿತಾದ ತೀರ್ಪನ್ನು ಕಾಯ್ದಿರಿಸಿತ್ತು.

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಡಿ ತಿಹಾರ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಕೇಜ್ರಿವಾಲ್ ಅವರನ್ನು ಜೂನ್ 26ರಂದು ಸಿಬಿಐ ಬಂಧಿಸಿತ್ತು.

ಸುಪ್ರೀಂ ಕೋರ್ಟ್ ಮೊರೆಗೆ ನಿರ್ಧಾರ

'ಕೇಜ್ರಿವಾಲ್ ಜಾಮೀನು ಅರ್ಜಿ ವಿಲೇವಾರಿ ಮತ್ತು ಸಿಬಿಐ ಬಂಧಿಸಿರುವುದನ್ನು ಪ್ರಶ್ನಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ದೆಹಲಿ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು' ಎಂದು ಎಎಪಿ ತಿಳಿಸಿದೆ.

'ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಈಗಾಗಲೇ ಸುಪ್ರೀಂ ಕೋರ್ಟ್ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನನ್ನು ನೀಡಿದೆ. ಇದೀಗ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಕೇಜ್ರಿವಾಲ್ ಸುಪ್ರೀಂ ಕೋರ್ಟ್ ಮೊರೆ ಹೋಗಲಿದ್ದಾರೆ' ಎಂದು ಮಾಹಿತಿ ನೀಡಿದೆ.

'ಸಿಸೋಡಿಯಾ ಭಾಗಿಯಾಗಿದ್ದಕ್ಕೆ ಸಾಕ್ಷ್ಯಗಳಿವೆ'

ದೆಹಲಿಯ ಅಬಕಾರಿ ನೀತಿ ಹಗರಣದಲ್ಲಿ ಎಎಪಿ ನಾಯಕ ಮನೀಶ್ ಸಿಸೋಡಿಯಾ ಅವರು ಭಾಗಿಯಾಗಿದ್ದಕ್ಕೆ ತನ್ನ ಬಳಿ ದಾಖಲೆಗಳಿವೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ. ಈ ಮೂಲಕ ಸಿಸೋಡಿಯಾ ಅವರ ಜಾಮೀನು ಅರ್ಜಿಯನ್ನು ವಿರೋಧಿಸಿದೆ.

ಇ.ಡಿ ಬಂಧನದಲ್ಲಿರುವ ಸಿಸೋಡಿಯಾ, ತಮ್ಮ ಮೇಲೆ ಸಿಬಿಐ ದಾಖಲಿಸಿರುವ ಭ್ರಷ್ಟಾಚಾರ ಮತ್ತು ಇ.ಡಿ ದಾಖಲಿಸಿರುವ ಹಣ ಅಕ್ರಮ ವರ್ಗಾವಣೆ ಆರೋಪ ಸೇರಿದಂತೆ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಜಾಮೀನು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ದೆಹಲಿ ಲೆಫ್ಟಿನೆಂಟ್ ಗವರ್ನರ್ ಅಧಿಕಾರ ಎತ್ತಿಹಿಡಿದ 'ಸುಪ್ರೀಂ'

ನವದೆಹಲಿ (ಪಿಟಿಐ): ದೆಹಲಿ ಮಹಾನಗರ ಪಾಲಿಕೆಗೆ (ಎಂಸಿಡಿ) 10 ಮಂದಿ ನಾಮನಿರ್ದೇಶಿತ ಸದಸ್ಯರ ನೇಮಕ ಮಾಡಲು ಲೆಫ್ಟಿನಂಟ್ ಗವರ್ನರ್ (ಎಲ್‌ಜಿ) ಅವರಿಗಿರುವ ಅಧಿಕಾರವನ್ನು ಸುಪ್ರೀಂ ಕೋರ್ಟ್ ಸೋಮವಾರ ಎತ್ತಿಹಿಡಿದಿದೆ.



ಸಚಿವ ಸಂಪುಟದ ಸಲಹೆ, ಸೂಚನೆ ಪಡೆಯದೇ ಸದಸ್ಯರನ್ನು ನೇಮಿಸುವ ಎಲ್‌ಜಿ ಅವರ ಅಧಿಕಾರವನ್ನು ಪ್ರಶ್ನಿಸಿ ದೆಹಲಿ ಸರ್ಕಾರ ಅರ್ಜಿ ಸಲ್ಲಿಸಿತ್ತು. ಇದನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿ ಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ. ಪಾರ್ದೀವಾಲಾ ಅವರಿದ್ದ ನ್ಯಾಯಪೀಠ ತಿರಸ್ಕರಿಸಿತು.

ದೆಹಲಿ ಮಹಾನಗರ ಪಾಲಿಕೆ ಕಾಯ್ದೆಗೆ 1993ರಲ್ಲಿ ತಿದ್ದುಪಡಿ ತಂದ ವೇಳೆ, ವಿಶೇಷ ಕ್ಷೇತ್ರಗಳಲ್ಲಿ ಜ್ಞಾನವಿರುವ ವ್ಯಕ್ತಿಗಳನ್ನು ಪಾಲಿಕೆಯ ಸದಸ್ಯರನ್ನಾಗಿ ನೇಮಿಸುವ ಅಧಿಕಾರವನ್ನು ಎಲ್‌ಜಿ ಅವರಿಗೆ ನೀಡಲಾಗಿದೆ ಎಂದು ಕೋರ್ಟ್ ಹೇಳಿದೆ.

ದೆಹಲಿ ಸರ್ಕಾರ ಮತ್ತು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೆನಾ ನಡುವಿನ ಸಂಬಂಧ ಸರಿಯಿಲ್ಲದ ಈ ಹೊತ್ತಿನಲ್ಲಿ ಈ ತೀರ್ಪು ಹೊರಬಿದ್ದಿರುವುದರಿಂದ ಎಎಪಿಗೆ ಹಿನ್ನಡೆಯಾದಂತಾಗಿದೆ.

ಈ ತೀರ್ಪನ್ನು ಸುಪ್ರೀಂ ಕೋರ್ಟ್ ಸುಮಾರು 15 ತಿಂಗಳು ಕಾಯ್ದಿರಿಸಿತ್ತು.

ಎಂಸಿಡಿ ಸದಸ್ಯರನ್ನು ನೇಮಿಸಲು ಎಲ್‌ಜಿ ಅವರಿಗಿರುವ ಅಧಿಕಾರವನ್ನು ಎತ್ತಿಹಿಡಿದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು 'ಗೌರವ ಪೂರ್ವಕವಾಗಿ ನಿರಾಕರಿಸುತ್ತೇವೆ' ಎಎಪಿ ಹೇಳಿದೆ.

ಈ ತೀರ್ಪು 'ಭಾರತದ ಪ್ರಜಾಪ್ರಭುತ್ವಕ್ಕೆ ನೀಡಿದ ಪೆಟ್ಟು' ಎಂದು ಬಣ್ಣಿಸಿದೆ. ಈ ತೀರ್ಪು ಚುನಾಯಿತ ಸರ್ಕಾರವನ್ನು ಕಡೆಗಣಿಸಲು ಎಲ್‌ಜಿ ಅವರಿಗೆ ಅಧಿಕಾರ ಕೊಟ್ಟಂತಿದೆ ಎಂದು ಎಎಪಿ ರಾಜ್ಯಸಭಾ ಸಂಸದ ಸಂಜಯ್ ಸಿಂಗ್ ಹೇಳಿದ್ದಾರೆ.

'ಎಲ್‌ಜಿ ವಿ.ಕೆ. ಸಕ್ಸೇನಾ ಏನೇ ಮಾಡಿದರೂ ಅದನ್ನು ಪ್ರಶ್ನಿಸುವ ಚಟವನ್ನು ಎಎಪಿ ಬೆಳೆಸಿಕೊಂಡಿದೆ' ಎಂದು ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಅವರು ವ್ಯಂಗ್ಯವಾಡಿದ್ದಾರೆ.

ಕಾವಡ್ ಯಾತ್ರೆ: ಹೆಸರು ಪ್ರದರ್ಶನ ನಿರ್ದೇಶನಕ್ಕಿದ್ದ ತಡೆಯಾಜ್ಞೆ ವಿಸ್ತರಣೆ

ನವದೆಹಲಿ (ಪಿಟಿಐ): ಕಾವಡ್ ಯಾತ್ರೆಯ ಮಾರ್ಗಗಳಲ್ಲಿರುವ ತಿಂಡಿ–ತಿನಿಸುಗಳ ಮಳಿಗೆಗಳ ಮಾಲೀಕರು ತಮ್ಮ ಹೆಸರು ಮತ್ತು ಇತರ ವಿವರಗಳನ್ನು ಮಳಿಗೆಗಳ ಮುಂದೆ ಪ್ರದರ್ಶಿಸುವಂತೆ ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಮಧ್ಯಪ್ರದೇಶ ಸರ್ಕಾರಗಳು ನೀಡಿದ್ದ ನಿರ್ದೇಶನಕ್ಕೆ ನೀಡಿರುವ ಮಧ್ಯಂತರ ತಡೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ಮತ್ತೆ ವಿಸ್ತರಿಸಿದೆ.

ನ್ಯಾಯಮೂರ್ತಿ ಹೃಷಿಕೇಶ ರಾಯ್ ಮತ್ತು ಆರ್.ಮಹಾದೇವನ್ ಅವರಿದ್ದ ನ್ಯಾಯಪೀಠವು ಸಮಯದ ಅಭಾವದಿಂದಾಗಿ ಪ್ರಕರಣದ ವಿಚಾರಣೆ ನಡೆಸಲಿಲ್ಲ, ಆದರೆ ಮಧ್ಯಂತರ ತಡೆಯನ್ನು ವಿಸ್ತರಿಸಿದೆ.

'ಕಾವಡ್ ಯಾತ್ರಿಕರಿಗೆ ಉಂಟಾಗುವ ಗೊಂದಲಗಳನ್ನು ದೂರ ಮಾಡುವ ಉದ್ದೇಶದಿಂದ ವರ್ತಕರು ತಮ್ಮ ಹೆಸರು ಮತ್ತು ಮಾಹಿತಿಯನ್ನು ಅಂಗಡಿ ಫಲಕಗಳಲ್ಲಿ ಅಳವಡಿಸಬೇಕು ಎಂದು ಉತ್ತರಪ್ರದೇಶ, ಉತ್ತರಾಖಂಡ ಮತ್ತು ಮಧ್ಯಪ್ರದೇಶ ಸರ್ಕಾರಗಳು ಆದೇಶಿಸಿದ್ದವು. ಈ ಆದೇಶವು ಮುಸ್ಲಿಂ ವಿರೋಧಿಯಾಗಿದೆ ಎಂದು ವಿರೋಧ ಪಕ್ಷಗಳು ಟೀಕಿಸಿದ್ದವು.

ಈ ಆದೇಶವನ್ನು ರದ್ದುಗೊಳಿಸುವಂತೆ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ಕೈಗೆತ್ತಿಕೊಂಡಿದ್ದ ಸುಪ್ರೀಂ ಕೋರ್ಟ್ ಜುಲೈ 22ರಂದು ಮಧ್ಯಂತರ ತಡೆ ನೀಡಿತ್ತು.

ವಿದ್ಯುತ್ ತಗುಲಿ 9 ಯಾತ್ರಿಕರು ಮೃತ

ಹಾಜಿಪುರ, ಬಿಹಾರ (ಪಿಟಿಐ): ವಿದ್ಯುತ್ ಸ್ಪರ್ಶದಿಂದಾಗಿ ಒಂಬತ್ತು ಮಂದಿ ಕಾವಡ್ ಯಾತ್ರಿಗಳು ಮೃತಪಟ್ಟು, ಮತ್ತಿಬ್ಬರು ಗಾಯಗೊಂಡಿರುವ ಘಟನೆ ಬಿಹಾರದ ವೈಶಾಲಿ ಜಿಲ್ಲೆಯ ಸುಲ್ತಾನ್‌ಪುರ ಗ್ರಾಮದಲ್ಲಿ ಭಾನುವಾರ ತಡರಾತ್ರಿ ಸುಮಾರು 11.15ಕ್ಕೆ ನಡೆದಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಯಾತ್ರಿಕರು ಸೋನೆಪುರದ ಬಾಬಾ ಹರಿನಾಥ್ ದೇವಾಲಯದಲ್ಲಿ ಜಲಾಭಿಷೇಕ ನೆರವೇರಿಸಲು ತೆರಳುತ್ತಿದ್ದ ವಾಹನದ ಮೇಲ್ಭಾಗವು ಹೈಟೆನ್ಷನ್ ತಂತಿಗೆ ತಗುಲಿ ಈ ದುರ್ಘಟನೆ ಸಂಭವಿಸಿದೆ.

ಸಂಕ್ಷಿಪ್ತ ಸುದ್ದಿ

ಜಮ್ಮು ಕಾಶ್ಮೀರ: 2 ಉಗ್ರರ ಬಂಧನ

ಶ್ರೀನಗರ (ಪಿಟಿಐ): ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಅವಂತಿಪುರದಲ್ಲಿ ಶಂಕಿತ ಇಬ್ಬರು ಉಗ್ರರನ್ನು ಭದ್ರತಾ ಪಡೆಯು ಬಂಧಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಅವಂತಿಪುರದಲ್ಲಿ ಭಯೋತ್ಪಾದನೆ ವಿರೋಧಿ ಕಾರ್ಯಾಚರಣೆಯಲ್ಲಿ ಜುಬೇರ್ ಅಹ್ಮದ್ ಮತ್ತು ಹಿಜಾಜ್ ನಜೀರ್ ಅವರನ್ನು ಬಂಧಿಸಲಾಗಿದೆ.

ಬಂಧಿತರಿಂದ ಎರಡು ಪಿಸ್ತೂಲ್ ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಕೇರಳ: ಮೂವರಿಗೆ ಮಿದುಳು ಜ್ವರ ದೃಢ

ತಿರುವನಂತಪುರ (ಪಿಟಿಐ): ಕೇರಳದ ತಿರುವನಂತಪುರ ಜಿಲ್ಲೆಯ ಕೆರೆಯೊಂದರಲ್ಲಿ ಸ್ನಾನ ಮಾಡಿದ್ದ ಮೂವರಿಗೆ ಮಿದುಳು ಜ್ವರ ಸೋಂಕು (ಅಮೀಬಿಕ್‌ಮೆನಿಂಗೊಎನ್ಸೆಫಾಲಿಟಿಸ್) ಇರುವುದು ಪತ್ತೆಯಾಗಿದೆ ಎಂದು ರಾಜ್ಯ ಆರೋಗ್ಯ ಸಚಿವೆ ವೀಣಾ ಜಾರ್ಜ್ ಸೋಮವಾರ ತಿಳಿಸಿದ್ದಾರೆ.

ತಿರುವನಂತಪುರದಲ್ಲಿ ಇತ್ತೀಚೆಗೆ ಮಿದುಳು ಜ್ವರ ಕಾಯಿಲೆಯಿಂದ ಒಬ್ಬರು ಮೃತಪಟ್ಟಿರುವುದು ದೃಢವಾಗಿದೆ. ಈ ರೋಗ ಪತ್ತೆಯಾದ ಮೂವರು ಪ್ರಸ್ತುತ ಜಿಲ್ಲಾ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರು.

ಬಿಜೆಪಿಗೆ 7–8, 'ಕೈ'ಗೆ 3 ಅಧ್ಯಕ್ಷ ಸ್ಥಾನ

ನವದೆಹಲಿ (ಪಿಟಿಐ): ಲೋಕಸಭೆಯ 16 ಸಂಸದೀಯ ಸಮಿತಿಗಳಲ್ಲಿ ಬಿಜೆಪಿಯು ಏಳರಿಂದ ಎಂಟು ಸಮಿತಿಯ ಅಧ್ಯಕ್ಷತೆ ಪಡೆದರೆ, ಕಾಂಗ್ರೆಸ್ ಮೂರು ಹಾಗೂ ಸಮಾಜವಾದಿ ಪಕ್ಷವು ಒಂದು ಸಮಿತಿಯ ಅಧ್ಯಕ್ಷತೆಯನ್ನು ಪಡೆದುಕೊಳ್ಳಬಹುದು ಎಂದು ಮೂಲಗಳು ಸೋಮವಾರ ತಿಳಿಸಿವೆ.

ಸಮಿತಿಗಳ ರಚನೆಗೆ ಸಂಬಂಧಿಸಿದಂತೆ ಪ್ರಕ್ರಿಯೆ ನಡೆದಿದೆ ಎಂದಿವೆ.

ಲೋಕಸಭೆಯಲ್ಲಿ 29 ಸದಸ್ಯ ಬಲ ಹೊಂದಿರುವ ನಾಲ್ಕನೇ ಅತಿದೊಡ್ಡ ಪಕ್ಷವಾಗಿರುವ ತೃಣಮೂಲ ಕಾಂಗ್ರೆಸ್ ಸೇರಿದಂತೆ ಬೇರೆ ಇನ್ಯಾವ ಪಕ್ಷಗಳು ಸಮಿತಿಯ ಅಧ್ಯಕ್ಷತೆಯ ಮೇಲೆ ಹಕ್ಕು ಪಡೆಯುವಷ್ಟು ಸಂಖ್ಯಾಬಲವನ್ನು ಹೊಂದಿಲ್ಲ ಎಂದು ಹೇಳಿವೆ.

ಉಳಿದ ಸಮಿತಿಗಳಿಗೆ ಅಧ್ಯಕ್ಷರು, ಸದಸ್ಯರನ್ನು ನೇಮಿಸುವ ಸಂದರ್ಭ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ತಮ್ಮ ವಿವೇಚನೆ ಬಳಸಿಕೊಂಡು ನ್ಯಾಯಯುತ ಪ್ರಾತಿನಿಧ್ಯ ಕಲ್ಪಿಸಲಿದ್ದಾರೆ ಎಂದು ತಿಳಿಸಿವೆ.

ಕೇಂದ್ರ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ಹೊಂದಿರದ ತನ್ನ ಮಿತ್ರ ಪಕ್ಷ ಶಿವಸೇನೆಗೆ (ಶಿಂದೆ ಬಣ) ಬಿಜೆಪಿಯು ಒಂದು ಸಮಿತಿಯ ಅಧ್ಯಕ್ಷ ಸ್ಥಾನ ನೀಡಬಹುದು ಎಂದು ಕಮಲ ಪಾಳೆಯದ ಮೂಲಗಳು ಹೇಳಿವೆ.

ದಲಿತ ವ್ಯಕ್ತಿ ಮೇಲೆ ಹಲ್ಲೆ; ಮೂತ್ರ ಕುಡಿಸಿದ ಆರೋಪ

ನರಸಿಂಹಪುರ (ಪಿಟಿಐ): ಮಧ್ಯಪ್ರದೇಶದ ನರಸಿಂಹಪುರ ಜಿಲ್ಲೆಯಲ್ಲಿ ಪ್ರಬಲ ಜಾತಿಯ ಇಬ್ಬರು ವ್ಯಕ್ತಿಗಳು ದಲಿತ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದ್ದು, ಆತನನ್ನು ತಮ್ಮ ಸೆರೆಯಲ್ಲಿರಿಸಿಕೊಂಡು ಮೂತ್ರ ಕುಡಿಯುವಂತೆ ಮಾಡಿದ್ದಾರೆ ಎಂಬ ದೂರು ಕೇಳಿಬಂದಿದೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

'ಗಾಡರವಾರಾ ತಾಲ್ಲೂಕಿನ ಬರ್ಹಾ ಗ್ರಾಮದಲ್ಲಿ ಜುಲೈ 30ರಂದು ಈ ಘಟನೆ ನಡೆದಿದೆ. ಆರೋಪಿಗಳಿಬ್ಬರನ್ನೂ ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗೊಳಪಡಿಸಲಾಗಿದೆ' ಎಂದು ಎಸ್‌ಪಿ ಅಮಿತ್‌ಕುಮಾರ್ ತಿಳಿಸಿದ್ದಾರೆ.

ಹಿಮಾಚಲಪ್ರದೇಶ, ಗುಜರಾತ್ ಪ್ರವಾಹ; ಉತ್ತರಾಖಂಡದಲ್ಲಿ ಭೂಕುಸಿತ

ರಾಜಸ್ಥಾನ: ಭಾರಿ ಮಳೆ; ಜನಜೀವನ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ



ರಾಜಸ್ಥಾನದ ಬೆವಾರ್‌ನಲ್ಲಿ ವಾಹನವೊಂದು ಜಖಂಗೊಂಡಿತ್ತು – ಪಿಟಿಐ ಚಿತ್ರ

ಜೈಪುರ: ರಾಜಸ್ಥಾನದ ವಿವಿಧೆಡೆ ಕಳೆದ 24 ಗಂಟೆಗಳಲ್ಲಿ ದಾಖಲೆ ಪ್ರಮಾಣ ಮಳೆಯಾಗಿದೆ. ಇಲ್ಲಿನ ಟೋಂಕ್ ಜಿಲ್ಲೆಯ ನಾಗರ್‌ಫೋರ್ಟ್‌ನಲ್ಲಿ 32.1 ಸೆಂ.ಮೀ, ಧುನಿ ಎಂಬಲ್ಲಿ 21.9 ಸೆಂ.ಮೀ., ಪಾಲಿ ಜಿಲ್ಲೆಯ ಸೋಜತ್‌ನಲ್ಲಿ 26.1 ಸೆಂ.ಮೀ, ಬೂಂಧಿ ಜಿಲ್ಲೆಯ ಹಿಂಡೋಲಿಯಲ್ಲಿ 21.7 ಸೆಂ.ಮೀ, ಭಿಲಾವಾಡ ಜಿಲ್ಲೆಯ ಜಹಜ್‌ಪುರ್‌ನಲ್ಲಿ 21.3 ಸೆಂ.ಮೀ. ಮಳೆ ಸುರಿದಿದೆ ಎಂದು ರಾಜ್ಯ ಹವಾಮಾನ ಇಲಾಖೆ ತಿಳಿಸಿದೆ.

ಬಾರ್ಮೇರ್ ಜಿಲ್ಲೆಯ ಕಲ್ಯಾಣದಲ್ಲಿ 19 ಸೆಂ.ಮೀ, ಜಲ್ವಾರ್ ಜಿಲ್ಲೆಯ ಬಕಾನಿಯಲ್ಲಿ 13.3 ಸೆಂ.ಮೀ, ಬರಾನ್ ಜಿಲ್ಲೆಯ ಕಿಶನ್ ಗಂಜ್‌ನಲ್ಲಿ 15.8 ಸೆಂ.ಮೀ, ಅಜ್ಮೇರ್ ಜಿಲ್ಲೆಯ ಸಾರವಾಡ, ಕೆಕ್ರಿ, ಗೆವಾಲ್ ಹಾಗೂ ಮಂಗಲಿಯಾವಾಸ್‌ನಲ್ಲಿ ಕ್ರಮವಾಗಿ 18.1. 18, 16.6 ಹಾಗೂ 15.5 ಸೆಂ.ಮೀನಷ್ಟು ಮಳೆ ಸುರಿದಿದೆ ಎಂದು ತಿಳಿಸಿದೆ.

ಮಳೆಯ ಆರ್ಭಟ ಮುಂದುವರಿದಿದ್ದು, ಅಜ್ಮೇರ್, ಪಾಲಿ, ರಾಜಸಮಂದ್, ಜಲೋರ್, ಶಿರೋಹಿ, ಆಗೌರ್, ಜೋಧಪುರ, ಜೈಸಲ್ಮೇರ್, ಬರ್ಮೆರ್‌ನಲ್ಲಿ ಗರಿಷ್ಠ 20 ಸೆಂ.ಮೀ. ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಭರತ್‌ಪುರ, ಜೈಪುರ್, ಕೋಟಾ ಹಾಗೂ ಬಿಕಾನೇರ್‌ನಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ತಿಳಿಸಿದೆ.

'ಜೋಧಪುರ ವಿಭಾಗದ ಕೇರಳ–ಪಾಲಿಯಾರ್ಡ್ ಭಾರಿ ಮಳೆಯಿಂದಾಗಿ ಜಲಾವೃತಗೊಂಡಿದ್ದು, ರೈಲ್ವೆ ಸಂಚಾರಕ್ಕೂ ತೊಂದರೆ ಉಂಟಾಯಿತು. ಹೀಗಾಗಿ, ಜೋಧಪುರ– ಸಾಬರಮತಿ, ಸಾಬರಮತಿ–ಜೋಧಪುರ ಎಕ್ಸ್‌ಪ್ರೆಸ್ ರೈಲುಗಳನ್ನು ಆ.5ರಂದು ರದ್ದುಗೊಳಿಸಲಾಯಿತು' ಎಂದು ವಾಯವ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಶಶಿಕಿರಣ್ ತಿಳಿಸಿದರು. ಅಜ್ಮೇರ್, ಜೋಧಪುರ, ಬಿಕಾನೇರ್ ವಿಭಾಗಗಳಲ್ಲಿ ಆಗಸ್ಟ್ 6ರಂದು ಮಳೆ ಮುಂದುವರಿಯಲಿದೆ ಎಂದು ಇಲಾಖೆ ತಿಳಿಸಿದೆ.

130 ಯಾತ್ರಾರ್ಥಿಗಳ ರಕ್ಷಣೆ: (ರುದ್ರಪ್ರಯಾಗ್, ಉತ್ತರಾಖಂಡ): ಕೇದಾರನಾಥ ಯಾತ್ರಾ ಮಾರ್ಗದಲ್ಲಿ ಸಿಲುಕಿದ್ದ 130 ಯಾತ್ರಾರ್ಥಿಗಳನ್ನು ಹೆಲಿಕಾಪ್ಟರ್ ಮೂಲಕ ಸೋಮವಾರ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಯಿತು.

ಬಂಗಾಳದಲ್ಲಿ ಪ್ರವಾಹ ಭೀತಿ: ಪಶ್ಚಿಮ ಬಂಗಾಳ ವಿವಿಧ ಜಿಲ್ಲೆಗಳಲ್ಲಿ ಆಗಸ್ಟ್ 9ರವರೆಗೂ ಭಾರಿ ಪ್ರಮಾಣದಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆಯು ಸೋಮವಾರ ಎಚ್ಚರಿಕೆ ನೀಡಿದೆ.

ಹಿಮಾಚಲದಲ್ಲಿ ಮುಚ್ಚಿದ 87 ರಸ್ತೆಗಳು

ಶಿಮ್ಲಾ, ಹಿಮಾಚಲಪ್ರದೇಶ: ಭಾರಿ ಮಳೆಯಿಂದ ಹಲವೆಡೆ ಭೂಕುಸಿತ ಸಂಭವಿಸಿದ್ದು, ರಾಜ್ಯದ ವಿವಿಧೆಡೆ 87 ಪ್ರಮುಖ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಲಾಗಿದೆ ಎಂದು ರಾಜ್ಯ ತುರ್ತು ಕಾರ್ಯಾಚರಣಾ ತಂಡ ಕೇಂದ್ರವು ಸೋಮವಾರ ತಿಳಿಸಿದೆ.

ಗುರುವಾರದವರೆಗೂ ರಾಜ್ಯದ ಹಲವೆಡೆ ಹವಾಮಾನ ಇಲಾಖೆಯು 'ಯೆಲ್ಲೋ ಅಲರ್ಟ್' ಘೋಷಿಸಿದೆ.

ಗುಜರಾತ್: ಸಾವಿರ ಮಂದಿ ಸ್ಥಳಾಂತರ

ಅಹಮದಾಬಾದ್: ದಕ್ಷಿಣ ಗುಜರಾತ್‌ನ ನವಸಾರಿ, ವಲಸಾಡ್‌ನಲ್ಲಿ ಭಾರಿ ಮಳೆಯಾಗಿದ್ದು, ತಗ್ಗು ಪ್ರದೇಶದಲ್ಲಿ ವಾಸಿಸುತ್ತಿದ್ದ ಒಂದು ಸಾವಿರಕ್ಕೂ ಅಧಿಕ ಮಂದಿಯನ್ನು ಸೋಮವಾರ ಸ್ಥಳಾಂತರಿಸಲಾಗಿದೆ.

ನವಸಾರಿಯ ಕೆರ್‌ಗಾಮ್ ತಾಲ್ಲೂಕಿನಲ್ಲಿ ಕಳೆದ 24 ಗಂಟೆಗಳಲ್ಲಿ 22 ಸೆಂ.ಮೀ. ಮಳೆಯಾಗಿದೆ. ತಾಪಿ, ಡಾಂಗ್ ಜಿಲ್ಲೆಯ 12 ತಾಲ್ಲೂಕುಗಳಲ್ಲಿ 10 ಸೆಂ.ಮೀಗೂ ಅಧಿಕ ಮಳೆಯಾಗಿದೆ ಎಂದು ರಾಜ್ಯ ತುರ್ತು ನಿರ್ವಹಣಾ ಕೇಂದ್ರ ತಿಳಿಸಿದೆ.



ಪುರುಷರ 100 ಮೀ ಫೈನಲ್ ಓಟದಲ್ಲಿ ಸ್ಪರ್ಧಿಸಿದವರು (ಎಡದಿಂದ ಬಲಕ್ಕೆ), ಅಮೆರಿಕದ ನೊವಾ ಲೈಲ್ಸ್ (ಚಿನ್ನ), ಜಮೈಕಾದ ಒಬ್ಲಿಕ್ ಸೆವಿಯೆ, ದಕ್ಷಿಣ ಆಫ್ರಿಕಾದ ಅಕಾನಿ ಸಿಂಬಿನೆ, ಜಮೈಕಾದ ಕಿಶೇನ್ ಥಾಮ್ಸನ್ (ಬೆಳ್ಳಿ), ಅಮೆರಿಕದ ಫ್ರೆಡ್ ಕೆರ್ಲೆ (ಕಂಚು) –ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್

10 ಸೆಕೆಂಡುಗಳೊಳಗೆ ಗುರಿ ಮುಟ್ಟಿದ 8 ವೇಗಿಗಳು; 100 ಮೀ ಓಟದಲ್ಲಿ ಅಪರೂಪದ ದಾಖಲೆ

ಫೋಟೊ ಫಿನಿಷ್‌ನಲ್ಲಿ ಲೈಲ್ಸ್ ವೇಗದ ರಾಜ

ಸೇಂಟ್ ಡೆನಿಸ್, ಫ್ರಾನ್ಸ್ (ಎಎಫ್‌ಪಿ): ಆಧುನಿಕ ಒಲಿಂಪಿಕ್ಸ್ ಇತಿಹಾಸದಲ್ಲಿಯೇ ಅತ್ಯಂತ ರೋಚಕ ಪೈಪೋಟಿ ಕಂಡ ಪುರುಷರ 100 ಮೀಟರ್ ಓಟದಲ್ಲಿ ಅಮೆರಿಕದ ನೋವಾ ಲೈಲ್ಸ್ ಚಿನ್ನದ ಪದಕ ಜಯಿಸಿದರು.

ಅತ್ಯಂತ ನಿಕಟ ಪೈಪೋಟಿ ಕಂಡ ಸ್ಪರ್ಧೆ ಇದಾಗಿತ್ತು. 9.79 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಲೈಲ್ಸ್ ತಮ್ಮ ಪ್ರತಿಸ್ಪರ್ಧಿ ಜಮೈಕಾದ ಕಿಶೇನ್ ಥಾಮ್ಸನ್ ಎದುರು ಅಕ್ಷರಶಃ ಕೂದಲೆಳೆ (0.005 ಸೆಕೆಂಡು) ಅಂತರದಲ್ಲಿ ಗೆದ್ದರು. ಇದೇ ಸ್ಪರ್ಧೆಯಲ್ಲಿ ಅಪರೂಪದ ದಾಖಲೆಯೂ ನಿರ್ಮಾಣ ಆಯಿತು. ಫೈನಲ್‌ನಲ್ಲಿ ಸ್ಪರ್ಧಿಸಿದ್ದ ಎಲ್ಲ ಎಂಟು ಅಥ್ಲೀಟ್‌ಗಳೂ 10 ಸೆಕೆಂಡುಗಳಿಗಿಂತ ಕಡಿಮೆ ಅವಧಿಯಲ್ಲಿ ಗೆಲುವಿನ ಗುರಿ ಮೆಟ್ಟಿದರು. ಇದರಿಂದಾಗಿ ಸ್ಪರ್ಧೆಯ ಮೊದಲ ಮೂವರು ವಿಜೇತರನ್ನು ನಿರ್ಧರಿಸಲು ತೀರ್ಪುಗಾರರು ವಿಡಿಯೊ ರಿವೀವ್ ಮೊರೆ ಹೋಗಬೇಕಾಯಿತು.

ಅದರಲ್ಲಿ ಜಮೈಕಾದ ಥಾಮ್ಸನ್ ಕೂಡ 9.79 ಸೆಕೆಂಡುಗಳಲ್ಲಿ ಓಡಿದ್ದರು. ಆದರೆ ಲೈಲ್ಸ್ ಮತ್ತು ಥಾಮ್ಸನ್ ನಡುವೆ 0.005ರಷ್ಟು ಸೂಕ್ಷ್ಮ ಅಂತರವನ್ನು ಗಮನಿಸಲಾಯಿತು. ರೌಂಡೆಡ್ ಅಪ್ ಟೈಮ್‌ನಲ್ಲಿ ಲೈಲ್ಸ್ (.784) ಪ್ರಥಮ ಸ್ಥಾನ ಪಡೆದರೆ, ಕಿಶೇನ್ (.789) ಬೆಳ್ಳಿ ಹಾಗೂ ಅಮೆರಿಕದ ಫ್ರೆಡ್ ಕೆರ್ಲೆ ಕಂಚಿನ ಪದಕ ಜಯಿಸಿದರು.

ಇದರೊಂದಿಗೆ 2004ರ ನಂತರ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದ ಅಮೆರಿಕದ ಅಥ್ಲೀಟ್ ಎಂಬ ಹೆಗ್ಗಳಿಕೆಯು ಲೈಲ್ಸ್ ಅವರದ್ದಾಯಿತು. ಅವರು 200 ಮೀ ಓಟದಲ್ಲಿ ಸ್ಪರ್ಧಿಸಲಿದ್ದಾರೆ.

ಎಲ್ಲ ಪ್ರತಿಸ್ಪರ್ಧಿಗಳೂ ಅಮೋಘ ರೀತಿಯಲ್ಲಿ ಸಿದ್ಧಗೊಂಡಿದ್ದರು. ಕಠಿಣ ಪೈಪೋಟಿಯೊಡ್ಡಿದರು. ಅವರೆಲ್ಲರಲ್ಲಿ ನಾನು ಪ್ರಥಮ ಎಂಬುದನ್ನು ತೋರಿಸುವ ಛಲ ನನ್ನದಾಗಿತ್ತು. ಇದೊಂದು ಅದ್ಭುತವಾದ ಮತ್ತು ಕಡುಕಠಿಣ ರೇಸ್ ಆಗಿತ್ತು

ನೋವಾ ಲೈಲ್ಸ್ ಚಿನ್ನದ ಪದಕ ವಿಜೇತ



ಅವಿನಾಶ್ ಸಾಬಳೆ –ಪಿಟಿಐ ಚಿತ್ರ

ಫೈನಲ್‌ಗೆ ಸಾಬಳೆ

ಪ್ಯಾರಿಸ್ (ಪಿಟಿಐ): ಭಾರತದ ಅವಿನಾಶ್ ಸಾಬಳೆ ಸೋಮವಾರ ಪುರುಷರ 3000 ಮೀಟರ್ ಸ್ಟೀಪಲ್‌ಚೇಸ್ ಫೈನಲ್‌ಗೆ ಅರ್ಹತೆ ಪಡೆದ ಭಾರತದ ಮೊದಲ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರವಾದರು.

29 ವರ್ಷ ವಯಸ್ಸಿನ ಸಾಬಳೆ ಅವರು 8 ನಿಮಿಷ 15.43 ಸೆಕೆಂಡ್‌ನಲ್ಲಿ ಗುರಿ ತಲುಪಿ ತಮ್ಮ ಹೀಟ್‌ನಲ್ಲಿ ಐದನೇ ಸ್ಥಾನ ಪಡೆದರು. ಮೂರು ಹೀಟ್ಸ್‌ಗಳಲ್ಲಿ ಅಗ್ರ ಐದು ಸ್ಥಾನ ಪಡೆಯುವ ಅಥ್ಲೀಟ್‌ಗಳು ಫೈನಲ್‌ಗೆ ಅರ್ಹತೆ ಪಡೆಯುತ್ತಾರೆ.

ಸಾಬಳೆ ಅವರಿದ್ದ ಹೀಟ್‌ನಲ್ಲಿ ಮೊರಾಕ್ಕೊದ ಮೊಹಮ್ಮದ್ ಟಿಂಡೌಫ್ಟ್ 8 ನಿಮಿಷ 10.62 ಸೆಕೆಂಡ್‌ನಲ್ಲಿ ಗುರಿ ತಲುಪಿ, ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಅಗ್ರಸ್ಥಾನ ಪಡೆದರು.

100 ಮೀ. ಓಟ: ಫೈನಲ್ ಸ್ಪರ್ಧೆಯ ಫಲಿತಾಂಶ (ಸೆಕೆಂಡುಗಳಲ್ಲಿ)

1	ನೊವಾ ಲೈಲ್ಸ್ (ಅಮೆರಿಕ)	9.79
2	ಕಿಶೇನ್ ಥಾಮ್ಸನ್(ಜಮೈಕಾ)	9.79
3	ಫ್ರೆಡ್ ಕೆರ್ಲೆ (ಅಮೆರಿಕ)	9.81
4	ಅಕಾನಿ ಸಿಂಬಿನಿ (ದ.ಆಫ್ರಿಕಾ)	9.82
5	ಲಮೊಂಟ್ ಮಾರ್ಸೆಲ್ ಜೇಕಬ್ಸ್ (ಇಟಲಿ)	9.85
6	ಲೆಟ್ಸಿಲಿ ಟೆಬೊಗೊ (ಬೋತ್ಸವಾನ)	9.86
7	ಕೆನಿ ಬೆಡ್ನರೆಕ್ (ಅಮೆರಿಕ)	9.88
8	ಓಬ್ಲಿಕ್ ಸೆವಿಯೆ (ಜಮೈಕಾ)	9.91

ಹ್ಯಾಮರ್ ಥ್ರೋ: ಇಥಾನ್‌ಗೆ ಚಿನ್ನದ ಪದಕ

ಪ್ಯಾರಿಸ್ (ಪಿಟಿಐ): ವಿಶ್ವ ಚಾಂಪಿಯನ್ ಕೆನಡಾ ಇಥಾನ್ ಕೆಟ್ಜಬರ್ಗ್ ಅವರು ಪ್ಯಾರಿಸ್ ಒಲಿಂಪಿಕ್ಸ್ ಪುರುಷರ ಹ್ಯಾಮರ್ ಥ್ರೋನಲ್ಲಿ ಚಿನ್ನದ ಪದಕ ಗೆದ್ದರು. ಭಾನುವಾರ ನಡೆದ ಸ್ಪರ್ಧೆಯಲ್ಲಿ ಅವರು ಮೊದಲ ಎಸೆತದಲ್ಲೇ ಚಿನ್ನದ ಪದಕವನ್ನು ಖಚಿತಪಡಿಸಿಕೊಂಡರು. 22 ವರ್ಷ ವಯಸ್ಸಿನ ಇಥಾನ್, 85.12 ಮೀಟರ್ ಎಸೆದು ಮೊದಲ ಸ್ಥಾನ ಪಡೆದರು. ಹಂಗೇರಿ ದೇಶದ ಬೆನ್ಸಿ ಹಲಾಜ್ ಅವರು 79.97 ಮೀಟರ್ ದೂರ ಎಸೆದು ಬೆಳ್ಳಿಗೆ ತೃಪ್ತಿಪಟ್ಟುಕೊಂಡರು. ಉಕ್ರೇನ್ ಇಖಾಯಿಲೊ ಕೊಖನ್ ಅವರು 79.39 ಮೀಟರ್ ಸಾಧನೆಯೊಂದಿಗೆ ಕಂಚು ಗೆದ್ದರು.



ಪ್ಯಾರಿಸ್ ಒಲಿಂಪಿಕ್ಸ್‌ನ ಪುರುಷರ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಕೆನಡಾ ಇಥಾನ್ ಕ್ಯಾಟ್ಸ್‌ಬರ್ಗ್ ಅವರ ಸಂಭ್ರಮ
ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ರೆಪೆಷಾಜ್ ಸುತ್ತಿಗೆ ಕಿರಣ್ ಪಹಲ್

ಪ್ಯಾರಿಸ್ (ಪಿಟಿಐ): ಭಾರತದ ಕಿರಣ್ ಪಹಲ್ ಸೋಮವಾರ ಒಲಿಂಪಿಕ್ಸ್‌ನ ಮಹಿಳೆಯರ 400 ಮೀಟರ್ ಸ್ಪರ್ಧೆ ಯಲ್ಲಿ ನೇರವಾಗಿ ಸೆಮಿಫೈನಲ್ ಅರ್ಹತೆ ಪಡೆಯಲು ವಿಫಲವಾದರು. ತಮ್ಮ ಹೀಟ್‌ನಲ್ಲಿ ಏಳನೇ ಸ್ಥಾನ ಗಳಿಸಿ ಇದೀಗ ರೆಪೆಷಾಜ್ ಸುತ್ತಿನಲ್ಲಿ ಓಡಲಿದ್ದಾರೆ.

24ನೇ ವರ್ಷದ ಜನ್ಮದಿನದ ಸಂಭ್ರಮದಲ್ಲಿದ್ದ ಪಹಲ್ ಅವರು 52.51 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಗಿಂತ (50.92) ಕಡಿಮೆಯಾಗಿದೆ.

ವಿಶ್ವ ಚಾಂಪಿಯನ್ ಡೊಮಿನಿಕಾದ ಮರಿಲಿಡಿ ಪಾಲಿನೊ (49.42) ಹೀಟ್ ಗಳಲ್ಲಿ ಅಗ್ರಸ್ಥಾನ ಪಡೆದರು. ನಂತರದ ಸ್ಥಾನದಲ್ಲಿ ಅಮೆರಿಕದ ಆಲಿಯಾ ಬಟ್ಲರ್ (50.52) ಮತ್ತು ಆಸ್ಟ್ರಿಯಾದ ಸುಸಾನ್ನೆ ಗೊಗ್ಲ್ ವಾಲಿ (50.67) ಇದ್ದಾರೆ. ರಾಷ್ಟ್ರೀಯ ಅಂತರ ರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ 50.92 ಸೆಕೆಂಡ್ ಗಳಲ್ಲಿ ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದ್ದ ಪಹಲ್, ಪ್ಯಾರಿಸ್ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಗಳಿಸಿದ್ದರು

ಕೈನೋವಿಗೆ ಕಣ್ಣೀರಿಟ್ಟ ನಿಶಾ



ಸೋತ ಬಳಿಕ ಕಣ್ಣೀರು ಹಾಕಿದ ನಿಶಾ ದಹಿಯಾ –ಪಿಟಿಐ ಚಿತ್ರ

ಪ್ಯಾರಿಸ್ (ಪಿಟಿಐ): ಭಾರತದ ನಿಶಾ ದಹಿಯಾ ಅವರು ಒಲಿಂಪಿಕ್ಸ್ ಮಹಿಳೆಯರ 68 ಕೆ.ಜಿ. ವಿಭಾಗದ ಕುಸ್ತಿ ಬೌಟ್‌ನಲ್ಲಿ ಉತ್ತರ ಕೊರಿಯಾದ ಪಾಕ್ ಸೋಲ್ ಗುಮ್ ಅವರ ಎದುರು ಮಣಿಕಟ್ಟಿನ ನೋವಿನಿಂದ ಬಳಲಿದರು. ಇದರಿಂದಾಗಿ ಅವರು 8–10 ರಿಂದ ಸೋತರು.

ಸೋಮವಾರ ನಡೆದ ಈ ಪಂದ್ಯದ ಆರಂಭದಲ್ಲಿ ಅವರು ಗೆಲುವಿನ ಭರವಸೆ ಮೂಡಿಸಿದ್ದರು. ಆದರೆ ಮಣಿಕಟ್ಟಿಗೆ ಆದ ಗಾಯದ ವೇದನೆ ತಡೆಯಲಾರದೆ ಕಣ್ಣೀರಿಟ್ಟರು. ಗಾಯಗೊಂಡ ಅವರ ಬಲಗೈನ ಮಣಿಕಟ್ಟಿನ ಭಾಗವನ್ನು ಸ್ಕ್ಯಾನ್‌ಗೆ ಒಳಪಡಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಒಂದು ಹಂತದಲ್ಲಿ, 90 ಸೆಕೆಂಡುಗಳು ಉಳಿದಿರುವಾಗ ಅವರು 8–1ರಿಂದ ಮುಂದಿದ್ದರು. ಆದರೆ ಈ ವೇಳೆ ಬಲಗೈಗೆ ಆದ ತೀವ್ರ ನೋವಿನಿಂದ ಕಷ್ಟಪಟ್ಟು ಹೋರಾಟ ಮುಂದುವರಿಸಿದರು. 10 ಸೆಕೆಂಡುಗಳಿದ್ದಾಗ ಸ್ಕೋರ್ 8–8ರಲ್ಲಿ ಸಮನಾಗಿತ್ತು. ಆದರೆ ನಂತರದ ಅತ್ಯಲ್ಪ ಅವಧಿಯಲ್ಲಿ ಉತ್ತರ ಕೊರಿಯಾ ಸ್ಪರ್ಧಿ ಮೇಲುಗೈ ಸಾಧಿಸಿ ಗೆಲುವು ತಮ್ಮದಾಗಿಸಿಕೊಂಡರು. ಕೊನೆಕೊನೆಯಲ್ಲಿ ನಿಶಾ ಹೋರಾಟ ಮಾಡುವ ಸ್ಥಿತಿಯಲ್ಲಿರಲಿಲ್ಲ.

ಉತ್ತರ ಕೊರಿಯಾದ ಸ್ಪರ್ಧಿ ಪಾಕ್ ಸೋಲ್ ಫೈನಲ್ ತಲುಪಿದರೆ, ನಿಶಾ ಅವರಿಗೆ ರೆಪೆಷಾಜ್ ಮೂಲಕ ಪದಕ ಗಳಿಸಲು ಇನ್ನೊಂದು ಅವಕಾಶ ದೊರೆಯಲಿದೆ. ಆದರೆ ನೋವು ತಾಳಲಾಗದೇ ಅಳುತ್ತಿದ್ದ ಅವರು ಮತ್ತೆ ಮ್ಯಾಟ್‌ಗೆ ಹಿಂತಿರುಗುವ ಬಗ್ಗೆ ಸಂದೇಹ ಮೂಡಿದೆ. ಇದಕ್ಕೆ ಮೊದಲು ನಿಶಾ ಅವರು ಉಕ್ರೇನ್‌ನ ಸೊವಾ ರಿಝ್ಕೊ ಅವರನ್ನು 6–4 ರಿಂದ ಸೋಲಿಸಿದ್ದರು.

ಏಷ್ಯನ್ ಚಾಂಪಿಯನ್ ಬೆಳ್ಳಿ ವಿಜೇತೆಯಾಗಿರುವ ನಿಶಾ, ಹೆವಿವೇಟ್ ವಿಭಾಗದಲ್ಲಿ ಭಾರತದ ಏಕೈಕ ಸ್ಪರ್ಧಿಯಾಗಿದ್ದಾರೆ.

'ನಿಶಾ ಮೇಲೆ ಉದ್ದೇಶಪೂರ್ವಕ ದಾಳಿ ಮಾಡಿ, ಆಕೆಯಿಂದ ಪದಕ ಕಸಿದುಕೊಂಡಿದ್ದಾರೆ' ಎಂದು ರಾಷ್ಟ್ರೀಯ ಕೋಚ್ ವೀರೇಂದ್ರ ದಹಿಯಾ ದೂರಿದ್ದಾರೆ.

ವಿನೇಶಾಗೆ ಕಠಿಣ ಸವಾಲು: ಭಾರತದ ವಿನೇಶಾ ಫೋಗಾಟ್ (50 ಕೆ.ಜಿ. ವಿಭಾಗ) ಅವರಿಗೆ ಮೊದಲ ಸುತ್ತಿನಲ್ಲಿ ಕಠಿಣ ಸವಾಲು ಎದುರಾಗಿದೆ. ಅವರು ಹೋದ ಒಲಿಂಪಿಕ್ಸ್‌ನ ಚಾಂಪಿಯನ್ ಮತ್ತು ನಾಲ್ಕು ಬಾರಿಯ ವಿಶ್ವ ಚಾಂಪಿಯನ್, ಜಪಾನಿನ ಯುಇ ಸುಸಾಕಿ ಅವರನ್ನು ಎದುರಿಸಲಿದ್ದಾರೆ.



ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳೆಯರ ಹೈಜಂಪ್‌ನಲ್ಲಿ ಚಿನ್ನ ಗೆದ್ದ ಉಕ್ರೇನ್‌ನ ಯರೊಸ್ಲಾವಾ ಮಹುಚಿಕ್ (ಎಡ) ಕಂಚಿನ ಪದಕ ಗೆದ್ದ ಎರಿನಾ ಜೆರಾಶ್‌ಚೆಂಕೊ ಸಂಭ್ರಮಿಸಿದರು. ಅವರು ತಮ್ಮ ಪದಕವನ್ನು 2022ರಲ್ಲಿ ರಷ್ಯಾ ದಾಳಿಯಲ್ಲಿ ಮೃತರಾದ ತಮ್ಮ ದೇಶದ ಅಥ್ಲೀಟ್‌ಗಳಿಗೆ ಹಾಗೂ ಕೋಚ್‌ಗಳಿಗೆ ಅರ್ಪಿಸಿದರು.
ಪ್ರಜಾವಾಣಿ ಚಿತ್ರ/ ಕೆ.ಎನ್.ಶಾಂತಕುಮಾರ್

ರೆಬೆಕಾಗೆ ಚಿನ್ನ, ಬೈಲ್ಸ್‌ಗೆ ಬೆಳ್ಳಿ ಪದಕ

ಪ್ಯಾರಿಸ್ (ಎಪಿ): ಅಮೆರಿಕದ ಜಿಮ್ನ್ಯಾಸ್ಟಿಕ್ ತಾರೆ ಸಿಮೊನ್ ಬೈಲ್ಸ್ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಪದಕ ಗೆದ್ದರು.

ಇಲ್ಲಿ ಹ್ಯಾಟ್ರಿಕ್ ಚಿನ್ನ ಗೆದ್ದಿರುವ 27 ವರ್ಷ ವಯಸ್ಸಿನ ಬೈಲ್ಸ್ ಸೋಮವಾರ ನಡೆದ ಫ್ಲೋರ್ ಎಕ್ಸ್‌ರ್‌ಸೈಜ್ ಫೈನಲ್ಸ್‌ನಲ್ಲಿ ಬೆಳ್ಳಿ ಪದಕ ಗಳಿಸಿದರು.

ಬ್ರೆಜಿಲ್‌ನ ರೆಬೆಕಾ ಆ್ಯಂಡ್ರೆಡ್ ಅವರು ಪ್ರಮುಖ ಅಂತರರಾಷ್ಟ್ರೀಯ ಕೂಟದ ಫ್ಲೋರ್ ಫೈನಲ್‌ನಲ್ಲಿ ಬೈಲ್ಸ್ ಅವರನ್ನು ಹಿಂದಿಕ್ಕಿದ ಮೊದಲ ಜಿಮ್ನ್ಯಾಸ್ಟ್ ಎನಿಸಿದರು.

14.166 ಸ್ಕೋರ್ ದಾಖಲಿಸಿದ ರೆಬೆಕಾ ಅವರು ಚಿನ್ನದ ಪದಕ ಮತ್ತು 14.133 ಸ್ಕೋರ್ ದಾಖಲಿಸಿದ ಬೈಲ್ಸ್ ಅವರು ಬೆಳ್ಳಿ ಪದಕ ಪಡೆದರು. ಜೋರ್ಡಾನ್ ಚಿಲ್ಸ್ ಕಂಚು ಗೆದ್ದರು.

ಒಲಿಂಪಿಕ್ಸ್‌ನಲ್ಲಿ ಇಂದು
(ಭಾರತದ ಸ್ಪರ್ಧೆ)

ಟೇಬಲ್ ಟೆನಿಸ್
ಪುರುಷರ ತಂಡ 16ರ ಸುತ್ತು: ಭಾರತ (ಹರ್ಮಿತ್ ದೇಸಾಯಿ, ಶರತ್ ಕಮಲ್ ಮತ್ತು ಮಾನವ್ ಠಕ್ಕರ್) ವಿರುದ್ಧ ಚೀನಾ, ಮಧ್ಯಾಹ್ನ **1.30**

ಅಥ್ಲೆಟಿಕ್ಸ್
ಜಾವೆಲಿನ್ ಅರ್ಹತಾ ಸುತ್ತು: ಕಿಶೋರ್ ಜೆನಾ, ಮಧ್ಯಾಹ್ನ 1.50, ನೀರಜ್ ಚೋಪ್ರಾ, ಮಧ್ಯಾಹ್ನ **3.20.**
ಮಹಿಳೆಯರ 400 ಮೀ.ಓಟ (ರೆಪೆಷಾಜ್): ಕಿರಣ್ ಪಹಲ್ ಮಧ್ಯಾಹ್ನ **2.50**

ಪುರುಷರ ಹಾಕಿ:
ಸೆಮಿಫೈನಲ್: ಭಾರತ ವಿರುದ್ಧ ಜರ್ಮನಿ, ರಾತ್ರಿ **10.30**

ನೇರ ಪ್ರಸಾರ ಸ್ಪೋರ್ಟ್ಸ್ 18 ಮತ್ತು ಜಿಯೊ ಸಿನಿಮಾ ಆ್ಯಪ್

ನಿರ್ಣಾಯಕ ಪಂದ್ಯದಲ್ಲಿ ಗೆದ್ದ ಮಣಿಕಾ ಬಾತ್ರಾ

ಕ್ವಾರ್ಟರ್‌ಗೆ ಮಹಿಳಾ ತಂಡ

ಪ್ಯಾರಿಸ್ (ಪಿಟಿಐ): ತಾರಾ ಆಟಗಾರ್ತಿ ಮಣಿಕಾ ಬಾತ್ರಾ ಮುಂದಾಳತ್ವದಲ್ಲಿ ಭಾರತ ತಂಡ ಪ್ಯಾರಿಸ್ ಒಲಿಂಪಿಕ್ಸ್ ಮಹಿಳಾ ಟೇಬಲ್ ಟೆನಿಸ್ ಸ್ಪರ್ಧೆಯಲ್ಲಿ ತನಗಿಂತ ಮೇಲಿನ ಕ್ರಮಾಂಕದ ರುಮೇನಿಯಾ ವಿರುದ್ಧ ರೋಚಕ ಹಣಾಹಣಿಯನ್ನು 3-2ರಿಂದ ಗೆದ್ದು ಸೋಮವಾರ ಎಂಟರ ಘಟ್ಟ ಪ್ರವೇಶಿಸಿತು.

ಭಾರತ 2–0ರ ಮುನ್ನಡೆಯಲ್ಲಿದ್ದಾಗ ಪ್ರಬಲ ಪೈಪೋಟಿ ಮೂಲಕ ಚೇತರಿಸಿಕೊಂಡ ರುಮೇನಿಯಾ 2–2ರಲ್ಲಿ ಸಮಬಲ ಸಾಧಿಸಿತು. ಆದರೆ ನಿರ್ಣಾಯಕ ಸಿಂಗಲ್ಸ್ ಪಂದ್ಯದಲ್ಲಿ ಮಣಿಕಾ ಯಶಸ್ಸು ಗಳಿಸಿದರು.

ಡಬಲ್ಸ್ ಪಂದ್ಯದಲ್ಲಿ ಭಾರತದ ಶ್ರೀಜಾ ಅಕುಲಾ ಮತ್ತು ಅರ್ಚನಾ ಕಾಮತ್ ಜೋಡಿಯು 11-9, 12-10, 11-7ರಿಂದ ರುಮೇನಿಯಾದ ಅಡಿನಾ ಡೈಕೊನ್ ಮತ್ತು ಎಲಿಜಬೆತ್ ಸಮರಾ ಜೋಡಿಯನ್ನು ಸೋಲಿಸಿ ಜಯದ ಆರಂಭ ಒದಗಿಸಿತು.

ನಂತರ ಸಿಂಗಲ್ಸ್ ಪಂದ್ಯದಲ್ಲಿ ಮಣಿಕಾ ಅವರು 11-5, 11-7, 11-7ರಿಂದ ತಮಗಿಂತ ಮೇಲಿನ ರ‍್ಯಾಂಕಿನ ಆಟಗಾರ್ತಿ ಬೆರ್ನಾಡೆಟ್ ಸೂಕ್ಸ್ ವಿರುದ್ಧ ಜಯ ಗಳಿಸಿದರು. ಈ ಜಯದೊಂದಿಗೆ ಭಾರತ ನಾಲ್ಕನೇ ಶ್ರೇಯಾಂಕದ ಎದುರಾಳಿಗಳ ವಿರುದ್ಧ 2–0 ಮುನ್ನಡೆ ಪಡೆಯಿತು. ಭಾರತ ಈ ಸ್ಪರ್ಧೆಯಲ್ಲಿ 11ನೇ ಶ್ರೇಯಾಂಕ ಪಡೆದಿದೆ. ಆದರೆ ಎರಡನೇ ಸಿಂಗಲ್ಸ್ ಪಂದ್ಯದಲ್ಲಿ ಶ್ರೀಜಾ ಅಕುಲಾ ಅವರು 2–3 (11-8 4-11, 11-7, 6-11, 8-11)ರಲ್ಲಿ ಯುರೋಪಿಯನ್ ಚಾಂಪಿಯನ್ ಸಮರಾ ವಿರುದ್ಧ ಸೋಲನುಭವಿಸಿದರು.

ಶ್ರೀಜಾ ಅವರ ಸೋಲು ಅರ್ಚನಾ ಮತ್ತು ಬೆರ್ನಾಡೆಟ್ ಮುಖಾಮುಖಿಗೆ ದಾರಿಮಾಡಿಕೊಟ್ಟಿತು. 11–5ರಿಂದ ಮೊದಲ ಗೇಮ್ ಸೋತ ನಂತರ ಭಾರತದ ಆಟಗಾರ್ತಿ ಎರಡನೇ ಗೇಮ್ ಅನ್ನು 11–8ರಿಂದ ತಮ್ಮದಾಗಿಸಿಕೊಂಡರು. ಆದಾಗ್ಯೂ ಬೆರ್ನಾಡೆಟ್ ಮುಂದಿನ ಎರಡು ಗೇಮ್‌ಗಳನ್ನು 11–7, 11–9ರಿಂದ ಗೆದ್ದು ಪಂದ್ಯ ತಮ್ಮದಾಗಿಸಿಕೊಂಡರು. ಹೀಗಾಗಿ ಪಂದ್ಯ ನಿರ್ಣಾಯಕ ಸಿಂಗಲ್ಸ್‌ಗೆ ಬೆಳೆಯಿತು.

ಈ ಪಂದ್ಯದಲ್ಲಿ ಮಣಿಕಾ ಅವರು 3-0 (11-5, 11-9, 11-9) ಯಿಂದ ಅಡಿನಾ ವಿರುದ್ಧ ಜಯಗಳಿಸಿದ್ದರಿಂದ ಭಾರತ ಮುನ್ನಡೆಯಿತು. ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡವು, ಅಮೆರಿಕ ಅಥವಾ ಜರ್ಮನಿಯನ್ನು ಎದುರಿಸಲಿದೆ.

ಜಪಾನ್, ಪೋಲೆಂಡ್, ಫ್ರಾನ್ಸ್ ಮತ್ತು ಥಾಯ್ಲೆಂಡ್ ಕೂಡ ಡ್ರಾನಲ್ಲಿ ಒಂದೇ ಕಡೆ ಇವೆ.

ಕಳೆದ ವಾರ ಮಣಿಕಾ ಮತ್ತು ಶ್ರೀಜಾ ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ಮೊದಲ ಭಾರತೀಯ ಆಟಗಾರ್ತಿಯರೆನಿಸಿದ್ದರು.



ಪಂದ್ಯವನ್ನು ಗೆದ್ದ ನಂತರ ತಂಡದ ಆಟಗಾರ್ತಿಯರಾದ ಅರ್ಚನಾ ಕಾಮತ್, ಶ್ರೀಜಾ ಅಕುಲಾ ಮತ್ತು ಮಣಿಕಾ ಬಾತ್ರಾ ಅವರನ್ನು ಭಾರತ ತಂಡದ ಮುಖ್ಯ ಕೋಚ್ ಮಾಸ್ಸಿಮೊ ಕಾನ್ಸ್‌ಟೆಂಟಿನಿ ಅಭಿನಂದಿಸಿದರು –ಎಎಫ್‌ಪಿ ಚಿತ್ರ

ಭಾರತದ ಸ್ಕೀಟ್ ಮಿಶ್ರ ತಂಡಕ್ಕೆ ತಪ್ಪಿದ ಕಂಚಿನ ಪದಕ

ಚಟೌರೊಕ್ಸ್, ಫ್ರಾನ್ಸ್ (ಪಿಟಿಐ): ಶೂಟರ್‌ಗಳಾದ ಮಹೇಶ್ವರಿ ಚೌಹಾನ್ ಮತ್ತು ಅನಂತ್‌ಜೀತ್ ಸಿಂಗ್ ನರುಕಾ ಅವರನ್ನು ಒಳಗೊಂಡ ಭಾರತದ ಸ್ಕೀಟ್ ಮಿಶ್ರ ತಂಡವು ಪ್ಯಾರಿಸ್ ಒಲಿಂಪಿಕ್ಸ್ ನಲ್ಲಿ ಕೂದಲೆಳೆಯ ಅಂತರದಲ್ಲಿ ಕಂಚಿನ ಪದಕವನ್ನು ತಪ್ಪಿಸಿಕೊಂಡಿತು.

ಕಂಚಿನ ಪದಕದ ಸುತ್ತಿಗೆ ಅರ್ಹತೆ ಪಡೆದಿದ್ದ ಭಾರತ ತಂಡವು 44–43 ಅಂಕಗಳಿಂದ ಚೀನಾ ವಿರುದ್ಧ ಪರಾಭವಗೊಂಡು ನಾಲ್ಕನೇ ಸ್ಥಾನ ಪಡೆಯಿತು. ಚೀನಾದ ಶೂಟರ್‌ಗಳಾದ ಜಿಯಾಂಗ್ ಯಿಟಿಂಗ್ ಮತ್ತು ಜಿಯಾನ್ಲಿನ್ ಲ್ಯು ಕಂಚಿನ ಪದಕ ಗೆದ್ದರು.

ಅರ್ಹತಾ ಸುತ್ತಿನಲ್ಲಿ ತಲಾ 146 ಅಂಕ ಪಡೆದ ಭಾರತ ಮತ್ತು ಚೀನಾ ತಂಡಗಳು ಕಂಚಿನ ಸುತ್ತಿಗೆ ಅರ್ಹತೆ ಪಡೆದಿದ್ದವು.

ಈ ಸ್ಪರ್ಧೆಯಲ್ಲಿ ಇಟಲಿ (45) ಚಿನ್ನ ಗೆದ್ದರೆ, ಅಮೆರಿಕ (44) ಬೆಳ್ಳಿ ಜಯಿಸಿತು.

ಸಮಾರೋಪ: ಮನು ಭಾಕರ್ ಭಾರತದ ಧ್ವಜಧಾರಿ



ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಎರಡು ಕಂಚಿನ ಪದಕ ಗೆದ್ದಿರುವ ಶೂಟಿಂಗ್ ತಾರೆ ಮನು ಭಾಕರ್ ಮುಂದಿನ ಭಾನುವಾರ ನಡೆಯಲಿರುವ ಒಲಿಂಪಿಕ್ಸ್ ಸಮಾರೋಪ ಸಮಾರಂಭ ದಲ್ಲಿ ಭಾರತ ಪಾಳೆಯದ ಧ್ವಜಧಾರಿಯಾಗಲಿದ್ದಾರೆ.

ಮನು ಭಾಕರ್ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದು, ಭಾರತದ ಪದಕ ಖಾತೆ ತೆರೆದಿದ್ದರು. ಶೂಟಿಂಗ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಮಹಿಳಾ ಶೂಟರ್ ಎಂಬ ಹಿರಿಮೆಯೂ ಹರಿಯಾಣದ 22 ವರ್ಷ ವಯಸ್ಸಿನ ಸ್ಪರ್ಧಿಗೆ ಸಂದಿತ್ತು. ಸರಬ್ಜೋತ್ ಜೊತೆಗೂಡಿ 10 ಮೀ. ಮಿಶ್ರ ವಿಭಾಗದಲ್ಲೂ ಅವರು ಕಂಚಿನ ಪದಕ ಗಳಿಸಿದ್ದರು. ಪುರುಷರ ವಿಭಾಗದ ಧ್ವಜಧಾರಿಯನ್ನು ಐಒಎ ಇನ್ನೂ ಹೆಸರಿಸಿಲ್ಲ. ಆದರೆ ಮುಂದಿನ ದಿನಗಳಲ್ಲಿ ಅವರ ಹೆಸರನ್ನು ಪ್ರಕಟಿಸುವ ಸಾಧ್ಯತೆಯಿದೆ.

ಒಲಿಂಪಿಯನ್ ಕ್ರೀಡಾಪಟುಗಳಿಗೆ ಮನೋಬಲ ತುಂಬುತ್ತಿರುವ ಕನ್ನಡತಿ ಡಾ. ಸಂಜನಾ ಕಿರಣ್

ಒಲಿಂಪಿಕ್ಸ್‌ನಲ್ಲಿ ಮೈಸೂರಿನ ಮನಃಶಾಸ್ತ್ರಜ್ಞೆ

• ಗಿರೀಶ ದೊಡ್ಡಮನಿ

ಪ್ರಜಾವಾಣಿ ವಿಶೇಷ



ಡಾ. ಸಂಜನಾ ಕಿರಣ್

• ಇವತ್ತಿನ ಕಾಲಘಟ್ಟದಲ್ಲಿ ಹದಿಹರೆಯದ (20 ವರ್ಷದೊಳಗಿನವರು) ಹೆಚ್ಚಿನ ಸಂಖ್ಯೆಯಲ್ಲಿ ಉನ್ನತ ಯಶಸ್ಸು ಸಾಧಿಸುತ್ತಿದ್ದಾರೆ. ಅವರು ತಮ್ಮ ಜೀವನದಲ್ಲಿ ಯಾವ ರೀತಿಯ ಸವಾಲುಗಳನ್ನು ಎದುರಿಸುತ್ತಿದ್ದಾರೆ?

– 12 ರಿಂದ 19 ವರ್ಷದೊಳಗಿನ ಬಾಲಕ, ಬಾಲಕಿಯರು ಪ್ರೌಢಾವಸ್ಥೆಗೆ ಬರುತ್ತಾರೆ. ಈ ಹಂತದಲ್ಲಿ ಹಾರ್ಮೋನುಗಳ ಬದಲಾವಣೆಯಾಗುವುದು ಸಹಜ ಪ್ರಕ್ರಿಯೆ. ಇದು ಭಾವನಾತ್ಮಕವಾದ ಕಾಲಘಟ್ಟ. ಇದೇ ಹಂತದಲ್ಲಿ ಲಭಿಸುವ ಉನ್ನತ ಯಶಸ್ಸು ನಿಭಾಯಿಸುವುದು ಬಹಳ ಸೂಕ್ಷ್ಮವಾದ ಕಾರ್ಯ. ಸಾಧನೆಯೆಂದರೆ ಇದಷ್ಟೇ ಅಲ್ಲ. ಇನ್ನೂ ಬಹಳಷ್ಟಿದೆ. ಅದಕ್ಕಾಗಿ ಮುನ್ನಡೆಯಬೇಕು ಎಂಬ ಭಾವನೆಯನ್ನು ಅವರಲ್ಲಿ ಮೂಡಿಸಬೇಕು.

ಬೆಂಗಳೂರು: 'ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದ ಕ್ರೀಡಾಪಟುಗಳ ಬಗ್ಗೆ ಇದೀಗ ಭಾರತದಲ್ಲಿಯೂ ಸಹಾನುಭೂತಿ ಮತ್ತು ಮೆಚ್ಚುಗೆ ವ್ಯಕ್ತವಾಗುತ್ತಿರುವುದು ಉತ್ತಮ ಬೆಳವಣಿಗೆ. ಇದು ಆ ಕ್ರೀಡಾಪಟುವಿನ ಪರಿಶ್ರಮವನ್ನು ಗೌರವಿಸಿ, ಮನೋಬಲವನ್ನು ಹೆಚ್ಚಿಸುವ ಕಾರ್ಯವಾಗಿದೆ'–

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೈಸೂರಿನ ಕ್ರೀಡಾ ಮನಃಶಾಸ್ತ್ರಜ್ಞರಾದ ಡಾ. ಸಂಜನಾ ಕಿರಣ್ ಅವರ ಮಾತುಗಳು ಇವು. ಎರಡು ದಶಕಗಳಿಗಿಂತ ಹೆಚ್ಚಿನ ವೃತ್ತಿ ಅನುಭವ ಅವರಿಗೆ ಇದೆ. 17 ಕ್ರೀಡೆಗಳಲ್ಲಿ ಭಾರತವೂ ಸೇರಿದಂತೆ 11 ದೇಶಗಳ 51 ಮಂದಿ ಒಲಿಂಪಿಯನ್ ಕ್ರೀಡಾಪಟುಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 2020–21ರಲ್ಲಿ ಐಪಿಎಲ್‌ನಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಕ್ರಿಕೆಟ್ ತಂಡದಲ್ಲಿಯೂ ಕಾರ್ಯನಿರ್ವಹಿಸಿದ್ದರು. ಹಲವು ವರ್ಷಗಳಿಂದ ಅವರು ತಮ್ಮ ಪತಿ, ಟೆನಿಸ್ ಕೋಚ್ ಕಿರಣ್ ನಮಶಿವಾಯ ಅವರೊಂದಿಗೆ ಸಿಂಗಪುರದಲ್ಲಿ ನೆಲೆಸಿದ್ದಾರೆ. 2004ರ ಅಥೆನ್ಸ್ ಒಲಿಂಪಿಕ್ಸ್‌ನಿಂದಲೂ ಅವರು ಒಲಿಂಪಿಯನ್ ಅಥ್ಲೀಟ್‌ಗಳಿಗಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ತಮ್ಮ ವೃತ್ತಿ ಅನುಭವದ ಕುರಿತು 'ಪ್ರಜಾವಾಣಿ'ಗೆ ಪ್ಯಾರಿಸ್‌ನಿಂದ ದೂರವಾಣಿ ಮೂಲಕ ನೀಡಿದ ಸಂದರ್ಶನ ಇಲ್ಲಿದೆ.

• ಕ್ರೀಡೆಯಲ್ಲಿ ಮನೋವಿಜ್ಞಾನದ ಪಾತ್ರ ಏನು?

ಇವತ್ತಿನ ಯುಗದಲ್ಲಿ ಕ್ರೀಡೆ ಕೇವಲ ದೈಹಿಕ ಚಟುವಟಿಕೆಯಾಗಿ ಉಳಿದಿಲ್ಲ. ವಾಣಿಜ್ಯ ಅಂಶಗಳೂ ಒಳಗೊಂಡಿರುವುದರಿಂದ ಸ್ಪರ್ಧೆಯ ಮಟ್ಟ ಹೆಚ್ಚಾಗಿದೆ. ಪೈಪೋಟಿಯ ಒತ್ತಡ ತಡೆದುಕೊಳ್ಳುವುದು ಸುಲಭವಲ್ಲ. ಇಂದಿನ ಮಕ್ಕಳಲ್ಲಿ ಆಟದ ಕುರಿತ ಜ್ಞಾನ ಮತ್ತು ತರಬೇತಿಯ ಕುರಿತ ಅರಿವು ಸಾಕಷ್ಟಿದೆ. ಆದರೆ ಪ್ರಮುಖ ಹಂತಗಳಲ್ಲಿ 'ಸ್ವಯಂ ವಿಶ್ವಾಸ'ದ ಕೊರತೆ ಅನುಭವಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಮನೋವಿಜ್ಞಾನ ಪ್ರಮುಖ ಪಾತ್ರ ವಹಿಸುತ್ತದೆ. ಕ್ರೀಡಾಪಟುವಿಗೆ ತನ್ನ ಸ್ವಸಾಮರ್ಥ್ಯದ ಕುರಿತು ಸ್ಪಷ್ಟತೆ ಇರಬೇಕು. ಅದರ ಅರಿವು ಮೂಡಿಸುವುದು ನಮ್ಮ ಕೆಲಸ. ಭಾವನಾತ್ಮಕವಾದ ಬೆಂಬಲ ನೀಡುವುದು ಮುಖ್ಯವಾಗುತ್ತದೆ. ಉತ್ತಮ ಸಾಮರ್ಥ್ಯ ಅಥವಾ ಕೊರತೆ ಯಾವುದೇ ಇರಲಿ ಅದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಮನೋಭಾವ ಬೆಳೆಸಬೇಕು.

• ಭಾರತದ ಕ್ರೀಡಾಪಟುಗಳು ಸಾಮಾನ್ಯವಾಗಿ ಎದುರಿಸುವ ತೊಂದರೆಗಳು ಯಾವುವು?

– ತೊಂದರೆಗಳು ಎನ್ನುವುದಕ್ಕಿಂತ ಸವಾಲುಗಳು ಎಂದು ಹೇಳಬಹುದು.

ನಮ್ಮ ದೇಶದಲ್ಲಿ ಗ್ರಾಮೀಣ ಭಾಗದಿಂದ ಕ್ರೀಡೆಗೆ ಬರುವವರ ಸಂಖ್ಯೆ ಹೆಚ್ಚು. ಶಿಕ್ಷಣ, ಉದ್ಯೋಗ ಪಡೆಯುವುದಕ್ಕೂ ಒತ್ತು ಕೊಡಬೇಕು. ಆದರೆ ಶಿಕ್ಷಣ ಮತ್ತು ಕ್ರೀಡೆಗಳೆರಡರ ಮಧ್ಯೆ ಸಮತೋಲನ ಸಾಧಿಸುವ ವ್ಯವಸ್ಥೆ ನಮ್ಮಲ್ಲಿ ಇನ್ನೂ ಪೂರ್ಣಪ್ರಮಾಣದಲ್ಲಿ ಇಲ್ಲ. ಇನ್ನೊಂದೆಡೆ ಇಂದಿನ ಮಕ್ಕಳು ಮೊಬೈಲ್ ಹೆಚ್ಚು ಬಳಕೆ ಮಾಡುತ್ತಿದ್ದಾರೆ. ಆದ್ದರಿಂದ ಜೀವನಶೈಲಿ ಬದಲಾಗಿದೆ. ಮಕ್ಕಳಲ್ಲಿ ಸಹಜವಾದ ಸೃಜನಶೀಲತೆ ಮತ್ತು ಸಹನಶೀಲತೆ ಗುಣಗಳ ಬೆಳವಣಿಗೆಗೆ ಇದು ಅಡ್ಡಿಯಾಗಿದೆ. ಮಕ್ಕಳಲ್ಲಿ ಆತುರ ಭಾವ ಹೆಚ್ಚಾಗಿದೆ. ನಮ್ಮ ಕಾಲದಲ್ಲಿದ್ದ ಜೀವನಶೈಲಿಯಿಂದ ತಾಳ್ಮೆಯನ್ನು ರೂಢಿಸಿಕೊಳ್ಳುವುದು ಸುಲಭವಾಗಿತ್ತು. ಇವತ್ತಿನ ಕ್ರೀಡಾರಂಗದಲ್ಲಿ ಆಟಗಾರರು ಕೂಡ ಪ್ರಾಯೋಜಕತ್ವ ಪಡೆಯಲು ಕೂಡ ಹೆಚ್ಚು ಶ್ರಮಪಡಬೇಕು. ಒಮ್ಮೆ ಸಿಕ್ಕ ಪ್ರಾಯೋಜಕತ್ವ ಉಳಿಸಿಕೊಳ್ಳಬೇಕು. ಅಲ್ಲದೇ ಕ್ರೀಡಾಪಟುಗಳು ಬೆಳೆದ ಪರಿಸರದ ಕ್ರೀಡಾ ಸಂಸ್ಕೃತಿ ಮತ್ತು ಆಡಳಿತ ವ್ಯವಸ್ಥೆಗಳೂ ಪರಿಣಾಮ ಬೀರುತ್ತವೆ. ಅದಕ್ಕೆ ಗಟ್ಟಿ ಮನೋಬಲ ಮತ್ತು ತಾಳ್ಮೆ ಬೇಕು.

• ಸಮಾಜದಲ್ಲಿ ಮಾನಸಿಕ ತೊಂದರೆಗಳನ್ನು ಮುಕ್ತವಾಗಿ ಹೇಳಿಕೊಳ್ಳಲು ಧೈರ್ಯ ಮಾಡುವವರು ಕಡಿಮೆ. ಕ್ರೀಡಾವಲಯ ದಲ್ಲಿಯೂ ಇಂತಹದೇ ಹಿಂಜರಿಕೆ ಇದೆಯೇ?

ದೇಹಕ್ಕೆ ಕಾಯಿಲೆಗಳು ಬಂದಾಗ ವೈದ್ಯರ ಬಳಿ ಹೋಗುತ್ತೇವೆ. ಆದರೆ ಮನಸ್ಸಿಗೆ ತೊಂದರೆಯಾದಾಗ ಹಿಂಜರಿಯುತ್ತೇವೆ. ಮಿದುಳು ಕೂಡ ಒಂದು ಅಂಗ ಎಂದು ನಾವು ಪರಿಗಣಿಸಬೇಕು. ನಮ್ಮನ್ನು ನಿಯಂತ್ರಿಸುವ ಪ್ರಮುಖ ಅಂಗ ಇದು. ಯೋಚನೆಗಳು ಹುಟ್ಟುವುದು ಇಲ್ಲಿಯೇ. ಅವುಗಳನ್ನು ಕಾರ್ಯರೂಪಕ್ಕೆ ತರುವ ನಿರ್ಧಾರ ಕೂಡ ಅಲ್ಲಿಯೇ ರೂಪುಗೊಂಡು ದೇಹ ಅದಕ್ಕೆ ಸ್ಪಂದಿಸುತ್ತದೆ. ಆದ್ದರಿಂದ ದೇಹಕ್ಕೂ ಮನಸ್ಸಿನ ಯೋಚನೆಗಳಿಗೂ ನೇರ ಸಂಬಂಧವಿದೆ. ಯಾವುದೇ ಮಾನಸಿಕ ತುಮುಲಗಳು, ಯೋಚನೆಗಳನ್ನು ಕುಟುಂಬದಲ್ಲಿರುವ ಆಪ್ತರೊಂದಿಗೆ ಹೇಳಿಕೊಳ್ಳಬೇಕು. ಕೇಳುವವರು ಕೂಡ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಕ್ರೀಡಾಕ್ಷೇತ್ರದಲ್ಲಿ ಕೋಚ್‌ಗಳು ತಮ್ಮ ಆಟಗಾರರ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಅವರ ಅಹವಾಲುಗಳನ್ನು ಕೇಳಿಸಿಕೊಳ್ಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಗೌಪ್ಯತೆ ಕಾಪಾಡಿಕೊಳ್ಳಬೇಕು. ಸಮಸ್ಯೆ ಗಂಭೀರವೆನಿಸದರೆ ಪರಿಣತರ ನೆರವು ಪಡೆಯಬೇಕು.

• ನಿಮ್ಮ ಬಳಿ ನೆರವು ಪಡೆದ ದೊಡ್ಡ ಅಥ್ಲೀಟ್‌ಗಳು ಯಾರು?

– ನನ್ನ ಬಳಿ ಮಾರ್ಗದರ್ಶನ ಪಡೆಯುವವರು ಒಲಿಂಪಿಯನ್ ಮಟ್ಟದ ಕ್ರೀಡಾಪಟುಗಳು. ಅವರು ತಾವಾಗಿಯೇ ಬಂದು ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಇದುವರೆಗೆ ಬಹಳಷ್ಟು ಮಂದಿಯೊಂದಿಗೆ ಕಾರ್ಯನಿರ್ವಹಿಸಿದ್ದೇನೆ. ಆದರೆ ಅವರ ಹೆಸರುಗಳನ್ನು ಹೇಳುವುದಿಲ್ಲ. ಗೌಪ್ಯತೆ ಕಾಪಾಡುವುದು ನನ್ನ ವೃತ್ತಿಧರ್ಮ. ಮಾರ್ಗದರ್ಶನ ಪಡೆದವರು ತಮ್ಮ ಬಗ್ಗೆ ಹೇಳಿಕೊಂಡರೆ ಅಭ್ಯಂತರವಿಲ್ಲ.

'ಬ್ಲಾಕ್‌ಬಸ್ಟರ್' ಸೆಮಿಫೈನಲ್ ನಿರೀಕ್ಷೆ • ಅಮಿತ್ ಸ್ಥಾನದಲ್ಲಿ ಮನ್‌ಪ್ರೀತ್ ಆಡುವ ನಿರೀಕ್ಷೆ

ಭಾರತಕ್ಕೆ ಇಂದು ಜರ್ಮನಿ ಸವಾಲು

• ಸಿದ್ಧಿ ಕಿರಣ್

ಪ್ಯಾರಿಸ್: ಬ್ರಿಟನ್ ವಿರುದ್ಧ ದೀರ್ಘಕಾಲ ನೆನಪಿಟ್ಟುಕೊಳ್ಳುವಂಥ ವೀರೋಚಿತ ಆಟವಾಡಿದ ಭಾರತ ಹಾಕಿ ತಂಡ ದೇಶದಲ್ಲಿ ಸಂಭ್ರಮದ ಅಲೆಯೆಬ್ಬಿಸಿದೆ. ಭಾರತ ತಂಡ ಈಗ ಮತ್ತೊಂದು ಸಮರಕ್ಕೆ ಬೇಗನೇ ಅಣಿಯಾಗಬೇಕಿದೆ. ಮಂಗಳವಾರ ರಾತ್ರಿ ಒಲಿಂಪಿಕ್ಸ್ ಹಾಕಿ ಸ್ಪರ್ಧೆಯಲ್ಲಿ ಬಲಿಷ್ಠ ಜರ್ಮನಿಯನ್ನು ಎದುರಿಸಲಿದ್ದು ಇವ್ಸ್ ಡಿ ಮ್ಯಾನುವಾ ಕ್ರೀಡಾಂಗಣದಲ್ಲಿ 'ಬ್ಲಾಕ್‌ಬಸ್ಟರ್ ಸೆಮಿಫೈನಲ್' ನಿರೀಕ್ಷಿಸಲಾಗಿದೆ.

ಟೋಕಿಯೊ (2021) ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ವಿಜೇತರಾದ ಭಾರತ ಭಾನುವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದ 42 ನಿಮಿಷಗಳ ದೀರ್ಘ ಅವಧಿಯನ್ನು 10 ಮಂದಿಯೊಡನೆ ಆಡಬೇಕಾಯಿತು. ಅಜಾಗರೂಕತೆಯಿಂದ ಸ್ಟಿಕ್ ಎತ್ತಿದ ಡಿಫೆಂಡರ್ ಅಮಿತ್ ರೋಹಿದಾಸ್ 'ರೆಡ್ ಕಾರ್ಡ್' ದರ್ಶನದಿಂದ ಹೊರನಡೆಯಬೇಕಾಯಿತು. ಇದರ ನಡುವೆಯೂ ಕೆಚ್ಚೆದೆಯಿಂದ ಆಡಿ ಇಂಗ್ಲೆಂಡ್ ತಂಡಕ್ಕೆ ಅದರ ಲಾಭ ಪಡೆಯಲು ಬಿಡಲಿಲ್ಲ. 1-1 ಡ್ರಾ ನಂತರ, ಪೆನಾಲ್ಟಿ ಶೂಟೌಟ್‌ನಲ್ಲಿ ಜಯ ಪಡೆಯಿತು. ನಿಗದಿ ಅವಧಿಯಲ್ಲೂ, ನಂತರವೂ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅಮೋಘ ತಡೆಗಳೊಂದಿಗೆ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕ್ವಾರ್ಟರ್‌ಫೈನಲ್‌ನಲ್ಲಿ ಭಾರತ ತಂಡದ ಶಿಸ್ತುಬದ್ಧ ರಕ್ಷಣೆಯ ಆಟ ತಂಡದ ನೆರವಿಗೆ ಬಂತು. ಪ್ಯಾರಿಸ್‌ಗೆ ಬಂದಿಳಿದ ನಂತರ ತಂಡ ಯೋಜನಾಬದ್ಧ ಆಟವಾಡಿದೆ. ನ್ಯೂಜಿಲೆಂಡ್ ವಿರುದ್ಧ ಗೆಲುವಿಗೆ ಮತ್ತು ಅರ್ಜೆಂಟೀನಾ ವಿರುದ್ಧ 'ಡ್ರಾ'ಕ್ಕೆ ಕೊನೆಯ ಕ್ಷಣಗಳಲ್ಲಿ ಗಳಿಸಿದ ಗೋಲುಗಳು ನೆರವಾದವು. ಭಾರತ ಹೆಚ್ಚು ಗುರಿ ಮತ್ತು ಛಲದಿಂದ ಆಡಿದೆ. ಗ್ರೇಟ್ ಬ್ರಿಟನ್ ವಿರುದ್ಧವೂ ಇಂಥ ಛಲದ ಆಟವೇ ಎದ್ದುಕಂಡಿತ್ತು. ಈಗ ವಿಶ್ವ ಚಾಂಪಿಯನ್ ಜರ್ಮನಿ ವಿರುದ್ಧವೂ ಇಂಥ ಆಟದ ಅಗತ್ಯವಿದೆ.



ಬ್ರಿಟನ್ ವಿರುದ್ಧದ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ ತಂಡದ ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದ್ದ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಅವರನ್ನು ಅಭಿನಂದಿಸಲು ಧಾವಿಸಿದ ಆಟಗಾರರು –ಪಿಟಿಐ ಚಿತ್ರ

ಜರ್ಮನಿ ಒಲಿಂಪಿಕ್ಸ್‌ನಲ್ಲಿ ಐದನೇ ಬಾರಿ ಚಿನ್ನದ ಮೇಲೆ ಕಣ್ಣಿಟ್ಟಿದೆ.

ಅಮಿತ್ ಕೊರತೆ: ಭಾರತಕ್ಕೆ ಇರುವ ದೊಡ್ಡಚಿಂತೆಯೆಂದರೆ ಅಮಿತ್ ರೋಹಿದಾಸ್ ಅವರ ಅಮಾನತು. ಹೀಗಾಗಿ ಕೋಚ್ ಕ್ರೇಗ್ ಫುಲ್ಟನ್ ಅವರು ಮಿಡ್‌ಫೀಲ್ಡ್‌ನ ಒಬ್ಬ ಆಟಗಾರರನ್ನು ಈ ಸ್ಥಾನ ತುಂಬಲು ಬಳಸಬೇಕಾಗಿದೆ. ಮಾಜಿ ನಾಯಕ ಹಾಗೂ ಅನುಭವಿ ಮಿಡ್‌ಫೀಲ್ಡರ್ ಮನ್‌ಪ್ರೀತ್ ಆ ಸ್ಥಾನದಲ್ಲಿ ಆಡುವ ಸಾಧ್ಯತೆ ಬಹಳ. ಬ್ರಿಟನ್ ವಿರುದ್ಧವೂ ಅವರು ಹೆಚ್ಚಿನ ಅವಧಿಗೆ ಆ ಪಾತ್ರವನ್ನು ಪರಿಣಾಮಕಾರಿಯಾಗಿ ನಿಭಾಯಿಸಿದ್ದರು. ಹಿರಿಯ ಆಟಗಾರನಿಗೆ ಇದು ಕಷ್ಟವೇನೂ ಆಗಲಾರದು.

ಜರ್ಮನಿಗೆ ಭಾರತ ಬಳಸುವ ತಂತ್ರದ ಅರಿವು ಇದ್ದೇ ಇದೆ. ಅದನ್ನು ನಿಭಾಯಿಸಲು ಅವರಲ್ಲಿ ಗುಣಮಟ್ಟದ ಪ್ರತಿಭಾನ್ವಿತ ಆಟಗಾರರಿದ್ದಾರೆ. ಆದರೆ ಲಂಡನ್ ಒಲಿಂಪಿಕ್ಸ್ ನಂತರ ಆ ತಂಡ ಒಲಿಂಪಿಕ್ಸ್ ಪ್ರಶಸ್ತಿ ಗೆದ್ದಿಲ್ಲ. ಆದರೆ ತಂಡ ಈಗಲೂ ಪ್ರಬಲವಾಗಿಯೇ ಇದೆ. ಕಳೆದ ವರ್ಷ ಭುವನೇಶ್ವರ–ರೂರ್ಕೆಲಾದಲ್ಲಿ ನಡೆದ ವಿಶ್ವಕಪ್‌ನಲ್ಲಿ ಆ ತಂಡ ಚಾಂಪಿಯನ್ ಆಗಿತ್ತು. ಈಗ ಒಲಿಂಪಿಕ್ಸ್ ಪ್ರಶಸ್ತಿಯನ್ನೂ ಸೇರಿಸಲು ತಂಡ ತುದಿಗಾಲಲ್ಲಿ ನಿಂತಿದೆ.

ಜರ್ಮನಿ 'ಎ' ಗುಂಪಿನ ಎರಡನೇ ಪಂದ್ಯದಲ್ಲಿ ಸ್ಪೇನ್‌ಗೆ 0–2 ರಿಂದ ಸೋತಿದ್ದರೂ, ಉಳಿದಂತೆ ಪ್ರಬಲ ನೆದರ್ಲೆಂಡ್ಸ್ ವಿರುದ್ಧ ಲೀಗ್‌ನಲ್ಲಿ, 2016ರ ಕ್ರೀಡೆಗಳ ಚಾಂಪಿಯನ್ ಅರ್ಜೆಂಟೀನಾ ವಿರುದ್ಧ ಕ್ವಾರ್ಟರ್‌ಫೈನಲ್‌ನಲ್ಲಿ ಜಯಗಳಿಸಿದೆ.

ಭಾರತದ ಮನವಿ ತಿರಸ್ಕೃತ ರೋಹಿದಾಸ್ ಅಮಾನತು

ಭಾರತ ತಂಡ ಮಂಗಳವಾರ ಜರ್ಮನಿ ವಿರುದ್ಧ ನಡೆಯುವ ಪಂದ್ಯದಲ್ಲಿ ಅನುಭವಿ ರಕ್ಷಣೆ ಆಟಗಾರ ಅಮಿತ್ ರೋಹಿದಾಸ್ ಅವರ ಸೇವೆಯಿಲ್ಲದೇ ಆಡಬೇಕಾಗಿದೆ. ಬ್ರಿಟನ್‌ನ ಆಟಗಾರ ವಿಲ್ ಕಲ್ನನ್ ಅವರೆದುರು ಅಪಾಯಕಾರಿ ರೀತಿ ಸ್ಟಿಕ್ ಎತ್ತಿದ ಕಾರಣ ಕಾರಣಕ್ಕೆ ಅವರಿಗೆ ಭಾನುವಾರ ರೆಡ್ ಕಾರ್ಡ್ ತೋರಿಸಲಾಗಿತ್ತು.

ಭಾರತ ಅಮಾನತು ವಿರುದ್ಧ ಮನವಿ ಸಲ್ಲಿಸಿತ್ತು. ಆದರೆ ವಿಶ್ವ ಹಾಕಿ ಫೆಡರೇಷನ್ ಮನವಿ ತಿರಸ್ಕರಿಸಿ ಒಂದು ಪಂದ್ಯಕ್ಕೆ ಅಮಾನತು ಮಾಡಿದೆ. ವಿಡಿಯೊ ಅಂಪೈರ್ ಪಂದ್ಯದ ವೇಳೆ ದೃಶ್ಯಾವಳಿಗಳನ್ನು ಪರಿಶೀಲಿಸಿ ರೆಡ್ ಕಾರ್ಡ್ ನಿರ್ಧಾರ ಸಮ್ಮತಿಸಿದ್ದರು.

ಎದುರಾಳಿ ಫಾರ್ವರ್ಡ್ ಆಟಗಾರ ಕಲ್ನನ್ ಅವರನ್ನು ಮುನ್ನುಗ್ಗದಂತೆ ತಡೆಯುವ ಉದ್ದೇಶದಿಂದ ಅಮಿತ್ ಎತ್ತಿದ ಸ್ಟಿಕ್ ಕಲ್ನನ್ ಮುಖಕ್ಕೆ ತಾಗಿತ್ತು.

ಸಾಮಾನ್ಯ ಸಂದರ್ಭಗಳಲ್ಲಿ ಫುಟ್‌ಬಾಲ್‌ನಲ್ಲಿ ಒಂದು ರೆಡ್‌ಕಾರ್ಡ್ ಅಥವಾ ಎರಡು 'ಎಲ್ಲೊ (ಹಳದಿ) ಕಾರ್ಡ್' ಪಡೆದರೆ ಅಂಥ ಆಟಗಾರ ಒಂದು ಪಂದ್ಯ ಕಳೆದುಕೊಳ್ಳುತ್ತಾನೆ. ಆದರೆ ಹಾಕಿ ಆಟದಲ್ಲಿ ಅಂಪೈರ್ ಅವರು ತಾಂತ್ರಿಕ ನಿಯೋಗಕ್ಕೆ ಸಲ್ಲಿಸುವ ವರದಿಯ ಮೇರೆಗೆ ತಪ್ಪು ಎಸಗಿದ ಆಟಗಾರನ ಅಮಾನತು ಶಿಕ್ಷೆಯ ನಿರ್ಧಾರವಾಗುತ್ತದೆ.

ಭಾರತಕ್ಕೆ ಈಗ ಏರಲು ಪರ್ವತವೇ ಇದೆ. ಆದರೆ ತಂಡದ ವಿಶ್ವಾಸ ಮತ್ತು ಉತ್ಸಾಹ ನೋಡಿದರೆ, ಆಟಗಾರರು ಅದಕ್ಕೆ ಸಜ್ಜಾದಂತಿದೆ

ನೀರಜ್ ಅಭಿಯಾನ ಇಂದಿನಿಂದ

ಎರಡನೇ ಚಿನ್ನ ಜಯಿಸುವರೇ ಜಾವೆಲಿನ್ ಥ್ರೋ ತಾರೆ

ಪ್ರಜಾವಾಣಿ ವಾರ್ತೆ

ಪ್ಯಾರಿಸ್: ಭಾರತದ ಕೆಲವು ವಿಶ್ವದರ್ಜೆಯ ಅಥ್ಲೀಟ್‌ಗಳಲ್ಲಿ ನೀರಜ್ ಚೋಪ್ರಾ ಅವರೂ ಒಬ್ಬರು. ಇದೀಗ ಅವರು ತಮ್ಮ ಫಾರ್ಮ್ ಮತ್ತು ಫಿಟ್‌ನೆಸ್ ಸತ್ವಪರೀಕ್ಷೆ ನೀಡಲು ಸಜ್ಜಾಗಿದ್ದಾರೆ.

ಮಂಗಳವಾರ ಇಲ್ಲಿ ನಡೆಯಲಿರುವ ಪುರುಷರ ಜಾವೆಲಿನ್ ಥ್ರೋ ಅರ್ಹತಾ ಸುತ್ತಿನ ಸ್ಪರ್ಧೆಯಲ್ಲಿ ಕಣಕ್ಕಿಳಿಯಲಿದ್ದಾರೆ. ಮೂರು ವರ್ಷಗಳ ಹಿಂದೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಜಯಿಸಿದ್ದ ಚಿನ್ನದ ಪದಕವನ್ನು ಇಲ್ಲಿಯೂ ಉಳಿಸಿಕೊಳ್ಳುವ ಛಲದಲ್ಲಿ ಅವರಿದ್ದಾರೆ.

ಭಾರತವು ಸ್ವಾತಂತ್ರ್ಯ ಪಡೆದ ನಂತರದ ಒಲಿಂಪಿಕ್ಸ್ ಇತಿಹಾಸದಲ್ಲಿ ವೈಯಕ್ತಿಕ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಭಾರತದ ಎರಡನೇ ಅಥ್ಲೀಟ್ ನೀರಜ್. ಒಲಿಂಪಿಕ್ಸ್ ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಪದಕ ಜಯಿಸಿದ ಭಾರತದ ಮೊದಲ ಕ್ರೀಡಾಪಟುವೆಂಬ ಹೆಗ್ಗಳಿಕೆಯೂ ಅವರದ್ದಾಗಿದೆ. ಟೋಕಿಯೊದಲ್ಲಿ 87.58 ಮೀಟರ್ ಜಾವೆಲಿನ್ ಎಸೆದು ಚಿನ್ನ ಜಯಿಸಿದ್ದರು. ಅಲ್ಲಿಂದ ಇಲ್ಲಿಯವರೆಗೂ ತಮ್ಮ ಸೂಪರ್‌ಸ್ಟಾರ್ ಪಟ್ಟವನ್ನು ಉಳಿಸಿಕೊಂಡು ಬಂದಿದ್ದಾರೆ.

ಹೋದ ವರ್ಷ ಬುಡಾಪೆಸ್ಟ್‌ನಲ್ಲಿ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗಳಿಸಿದ್ದರು. ತಮ್ಮ ಸರಳ ನಡೆನುಡಿಯಿಂದ ದೇಶದ ಕ್ರೀಡಾಪ್ರೇಮಿಗಳ ಮನ ಗೆದ್ದಿದ್ದಾರೆ. 26 ವರ್ಷದ ನೀರಜ್ ಅವರು ಅಪಾರ ಒತ್ತಡದ ಸನ್ನಿವೇಶದಲ್ಲಿಯೂ ಸಮಚಿತ್ತದಿಂದ ಇರುವ ಕಲೆ ಕರಗತ ಮಾಡಿಕೊಂಡಿದ್ದಾರೆ. ಇದು ಅವರ ದೊಡ್ಡ ಸಾಮರ್ಥ್ಯವಾಗಿದೆ.



ಕಿಶೋರ್ ಜೇನಾ ಮತ್ತು ನೀರಜ್ ಚೋಪ್ರಾ –ಪಿಟಿಐ ಚಿತ್ರ

ಆದರೆ ಅವರು ದೊಡ್ಡ ಚಾಂಪಿಯನ್‌ಷಿಪ್‌ಗಳ ಸಂದರ್ಭದಲ್ಲಿ ಕೆಲಕಾಲ ಗೌಪ್ಯವಾಗಿ ಉಳಿದುಬಿಡುವ ಬಗ್ಗೆ ತಿಳಿದುಕೊಳ್ಳುವ ವಿದೇಶಿ ಪತ್ರಕರ್ತರ ಪ್ರಶ್ನೆಗಳಿಗೆ ಪ್ಯಾರಿಸ್‌ನಲ್ಲಿಯೂ ಉತ್ತರ ಸಿಗಲಿಲ್ಲ. ಆದರೆ ನೀರಜ್ ಅವರ ಫಿಟ್‌ನೆಸ್ ಕುರಿತು ಚರ್ಚೆ ನಡೆದಿದೆ.

ಈಚೆಗೆ ಅವರು ತೊಡೆ ಸ್ನಾಯುವಿನ ನೋವಿನಿಂದ ಬಳಲಿದ್ದರು. ಅದರಿಂದಾಗಿ ಅವರು ಕೆಲವು ಪ್ರಮುಖ ಸ್ಪರ್ಧೆಗಳಿಂದ ಹಿಂದೆ ಸರಿದಿದ್ದರು. ಕೇವಲ ಮೂರು ಸ್ಪರ್ಧೆಗಳಲ್ಲಿ (ದೋಹಾ ಡೈಮಂಡ್ ಲೀಗ್, ರಾಷ್ಟ್ರೀಯ ಫೆಡರೇಷನ್ ಕಪ್ ಮತ್ತು ಪಾವೊ ನುರ್ಮಿ ಗೇಮ್ಸ್) ಮಾತ್ರ ಭಾಗವಹಿಸಿದ್ದರು. ಮೇ ತಿಂಗಳಲ್ಲಿ ದೋಹಾದಲ್ಲಿ ನಡೆದಿದ್ ಕೂಟದಲ್ಲಿ ಅವರು 88.36 ಮೀಟರ್ಸ್ ದೂರ ಜಾವೆಲಿನ್ ಎಸೆದಿದ್ದರು.

ಅವರ ಕೋಚ್ ಕ್ಲಾಸ್ ಬಾರ್ಟೋನೀಜ್ ಅವರು ನೀಡಿರುವ ಮಾಹಿತಿಯ ಪ್ರಕಾರ ನೀರಜ್ ಸಂಪೂರ್ಣ ಫಿಟ್ ಇದ್ದಾರೆ.

ನೀರಜ್ ಅವರು ಈಚೆಗೆ ಇಲ್ಲಿಯ ಕ್ರೀಡಾಗ್ರಾಮ ಪ್ರವೇಶಿಸಿದ ನಂತರ ಸಾಮಾಜಿಕ ಜಾಲತಾಣಕ್ಕೆ ಚಿತ್ರ ಹಾಕಿದ್ದರು. ಅದರಲ್ಲಿ ಅವರು ಉಲ್ಲಸಿತರಾಗಿ ಕಂಡಿದ್ದರು.

ಚೋಪ್ರಾ ಅವರಿಗೆ ಪ್ರಮುಖವಾಗಿ ಜೆಕ್ ಗಣರಾಜ್ಯದ ಜೇಕಬ್ ವಾಡ್ಲೇಚಾ, ಮಾಜಿ ವಿಶ್ವ ಚಾಂಪಿಯನ್, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್, ಪಾಕಿಸ್ತಾನದ ಅರ್ಷದ್ ನದೀಂ, ಜರ್ಮನಿಯ ಜೋಡಿ ಜೂಲಿಯನ್ ವೆಬ ರ್‌ಮತ್ತು ಮ್ಯಾಕ್ಸ್ ದೆಹನಿಂಗ್ ನಿಕಟ ಪೈಪೋಟಿ ಎದುರಾಗುವ ಸಾಧ್ಯತೆ ಇದೆ.

ಭಾರತದವರೇ ಆದ ಕಿಶೋರ್ ಜೇನಾ ಕೂಡ ಕಣದಲ್ಲಿದ್ದಾರೆ. ಅವರು ಕೂಡ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಅವರು 87.40 ಮೀ ಥ್ರೋ ಮಾಡಬಲ್ಲ ಸಮರ್ಥರು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	21	17	14	52
ಅಮೆರಿಕ	19	29	28	76
ಆಸ್ಟ್ರೇಲಿಯಾ	13	11	8	32
ಫ್ರಾನ್ಸ್	12	15	18	45
ಬ್ರಿಟನ್	11	13	17	41
ದ.ಕೊರಿಯಾ	11	08	7	26
ಜಪಾನ್	10	5	11	26
ಇಟಲಿ	9	10	6	25
ಜರ್ಮನಿ	6	5	4	15
ಭಾರತ	0	0	3	3

ಪಟ್ಟಿಯಲ್ಲಿ ಭಾರತ 59ನೇ ಸ್ಥಾನದಲ್ಲಿದೆ

ಬಿಎಫ್‌ಸಿಗೆ ಇಂದು ಮೂರನೇ ಪಂದ್ಯ

ಬೆಂಗಳೂರು: ಮಾಜಿ ಚಾಂಪಿಯನ್ ಬೆಂಗಳೂರು ಎಫ್‌ಸಿ ತಂಡ 133ನೇ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ ಮೊಹಮಡನ್ ಎಸ್‌ಸಿ ತಂಡವನ್ನು ಎದುರಿಸಲಿದೆ.

'ಬಿ' ಗುಂಪಿನಲ್ಲಿರುವ ಬಿಎಫ್‌ಸಿ ಈ ಮೊದಲ ಎರಡೂ ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ.

ಲಕ್ಷ್ಯ ಸೇನ್ ಕೈತಪ್ಪಿದ ಕಂಚಿನ ಪದಕ

ಪ್ರಜಾವಾಣಿ ವಾರ್ತೆ

ಪ್ಯಾರಿಸ್: ಭಾರತದ ಲಕ್ಷ್ಯ ಸೇನ್ ಅವರಿಗೆ ಸೋಮವಾರ ಕಂಚಿನ ಪದಕ ಕೈತಪ್ಪಿತು.

ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಲಕ್ಷ್ಯ 21–13, 16–21, 11–21ರಲ್ಲಿ ಮಲೇಷ್ಯಾದ ಝೀ ಜಿಯಾ ಲೀ ವಿರುದ್ಧ ಸೋತರು. ನಾಲ್ಕನೇ ಸ್ಥಾನ ಪಡೆದರು.

ಇಲ್ಲಿ ನಡೆದ 71 ನಿಮಿಷಗಳ ಹಣಾಹಣಿಯ ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿದ್ದ ಲಕ್ಷ್ಯ ಭರವಸೆಯ ಹೆಜ್ಜೆ ಇಟ್ಟಿದ್ದರು.

ತಮ್ಮ ಆಕ್ರಮಣಶೈಲಿಯ ಆಟ ಮತ್ತು ನೆಟ್ ಬಳಿಯ ಚುರುಕಾದ ರಿಟರ್ನ್‌ಗಳ ಮೂಲಕ ಗಮನ ಸೆಳೆದ ಲಕ್ಷ್ಯ ಎದುರಾಳಿಯ ಮೇಲೆ ಒತ್ತಡ ಹಾಕಿದರು.

ತಮ್ಮ ಎದುರಾಳಿಯ ವಿರುದ್ಧ ಅಪಾರ ಆತ್ಮವಿಶ್ವಾಸದಿಂದ ಆಡಿದರು. ಈ ಗೇಮ್‌ನಲ್ಲಿ ಅವರು 11–4ರ ಮುನ್ನಡೆ ಗಳಿಸಿದರು. ನಂತರದ ಹಂತದಲ್ಲಿಯೂ ಹಿಡಿತ ಸಡಿಲಿಸದೇ ಗೆದ್ದರು.

ಎರಡನೇ ಗೇಮ್‌ನಲ್ಲಿಯೂ ಉತ್ತಮ ಆರಂಭ ಮಾಡಿದರು. 6–2ರ ಮುನ್ನಡೆ ಸಾಧಿಸಿದರು. ಇದರಿಂದಾಗಿ ಲಕ್ಷ್ಯ ಜಯಿಸುವುದು ಬಹುತೇಕ ಖಚಿತವೆಂಬ ವಿಶ್ವಾಸ ಮೂಡಿತ್ತು.

ಈ ಹಂತದಿಂದ ಮಲೇಷ್ಯಾ ಆಟಗಾರ ಪುಟಿದೇಳುವ ಪ್ರಯತ್ನ ಆರಂಭಿಸಿದರು. ಇದೇ ಸಂದರ್ಭದಲ್ಲಿ ಲಕ್ಷ್ಯ ಅವರ ಮೊಣಕೈಗೆ ಆದ ಗಾಯದಿಂದ ರಕ್ತಸ್ರಾವವಾಯಿತು.


ನೋವು ಶಮನಕ್ಕಾಗಿ ಎರಡು ಸಲ ಫಿಸಿಯೊ ಕರೆಸಿ ಪ್ರಥಮ ಚಿಕಿತ್ಸೆ ಮತ್ತು ಟೇಪಿಂಗ್ ಕೂಡ ಪಡೆದರು. ಕಾಡುವ ನೋವಿನಲ್ಲಿಯೇ ಆಟ ಮುಂದುವರಿಸಿದರು.

ಝೀ ಜಿಯಾ ಲೀ ಅವರು ತಮ್ಮ ಶಾಂತಚಿತ್ತದ ಆಟದ ಮೂಲಕ ಲಕ್ಷ್ಯ ಮೇಲೆ ಒತ್ತಡ ಹಾಕಿದರು. ದೀರ್ಘ ರ‍್ಯಾಲಿಗಳನ್ನು ಆಡಿದರು. ಜಂಪ್ ಸ್ಮ್ಯಾಷ್ ಮೂಲಕ ಪಾಯಿಂಟ್ಸ್ ಗಿಟ್ಟಿಸಿದರು.

ನಂತರದ ನಿರ್ಣಾಯಕ ಗೇಮ್‌ನಲ್ಲಿ ಲೀ 9–2ರ ಮುನ್ನಡೆ ಪಡೆದರು. ಇಡೀ ಗೇಮ್‌ನಲ್ಲಿ ಪಾರಮ್ಯ ಮೆರೆದರು.

ವಿಕ್ಟರ್‌ಗೆ ಚಿನ್ನ: ಡೆನ್ಮಾರ್ಕಿನ ವಿಕ್ಟರ್ ಆ್ಯಕ್ಸೆಲ್ಸನ್ ಅವರು ಸತತ ಎರಡನೇ ಬಾರಿ ಚಿನ್ನ ಪದಕ ಜಯಿಸಿದರು. ಫೈನಲ್‌ನಲ್ಲಿ ವಿಕ್ಟರ್ 21–11, 21–11ರಿಂದ ವಿಶ್ವ ಚಾಂಪಿಯನ್, ಥಾಯ್ಲೆಂಡ್‌ನ ಕುನ್ಲಾವತ್ ವಿತಿಸಾರ್ನ್ ವಿರುದ್ಧ ಜಯಿಸಿದರು.

ಭಾನುವಾರ ನಡೆದಿದ್ದ ಸೆಮಿಫೈನಲ್ ಪಂದ್ಯದಲ್ಲಿ ಲಕ್ಷ್ಯ ಅವರು ವಿಕ್ಟರ್ ಆ್ಯಕ್ಸೆಲ್ಸನ್ ವಿರುದ್ಧ ಸೋತಿದ್ದರು.



ಬ್ಯಾಡ್ಮಿಂಟನ್ ತರಬೇತುದಾರರಾದ ಪ್ರಕಾಶ್ ಪಡುಕೋಣೆ, ವಿಮಲ್ ಕುಮಾರ್ ಮತ್ತು ಲಕ್ಷ್ಯ ಸೇನ್ –ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್



ಚಿನ್ನ ಗೆದ್ದ ವಿಕ್ಟರ್ ಆ್ಯಕ್ಸೆಲ್ಸನ್

ಕ್ರೀಡಾಪಟುಗಳಿಗೆ ಮಾನಸಿಕ ತರಬೇತಿ ಅಗತ್ಯ: ಪ್ರಕಾಶ್ ಪಡುಕೋಣೆ ಸಲಹೆ

ಪ್ಯಾರಿಸ್ (ಪಿಟಿಐ): ಸಕಲ ಬೆಂಬಲ ಪಡೆದು ಕಣಕ್ಕಿಳಿಯುವ ಆಟಗಾರರೇ ಉತ್ತಮ ಫಲಿತಾಂಶ ನೀಡುವ ಹೊಣೆಗಾರಿಕೆ ತೆಗೆದುಕೊಳ್ಳಲು ಇದು ಸಕಾಲವಾಗಿದೆ. ಅವರು ಒತ್ತಡವನ್ನು ನಿರ್ವಹಿಸುವುದನ್ನು ಕಲಿಯಬೇಕು ಮತ್ತು ಭಾರತದ ಕ್ರೀಡಾಪಟುಗಳಿಗೆ ಕ್ರೀಡಾ ಮನೋವಿಜ್ಞಾನ ಪರಿಣತರಿಂದ ತರಬೇತಿ ಕೊಡಿಸಲು ಆದ್ಯತೆ ನೀಡಬೇಕು ಎಂದು ಬ್ಯಾಡ್ಮಿಂಟನ್ ದಂತಕಥೆ ಪ್ರಕಾಶ್ ಪಡುಕೋಣೆ ಸಲಹೆ ನೀಡಿದ್ದಾರೆ.

ಸೋಮವಾರ ಇಲ್ಲಿ ನಡೆದ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಕಂಚಿನ ಪದಕದ ಪ್ಲೇ ಆಫ್‌ನಲ್ಲಿ ಭಾರತದ ಲಕ್ಷ್ಯ ಸೇನ್ ಅವರು ಸೋತ ನಂತರ ಪ್ರಕಾಶ್ ಮಾಧ್ಯಮದವರೊಂದಿಗೆ ಮಾತನಾಡಿದರು.

'ಒತ್ತಡದ ಪರಿಸ್ಥಿತಿಯನ್ನು ನಿಭಾಯಿಸಲು ಗಟ್ಟಿ ಮನೋಭಾವ ಬೇಕು. ಅದಕ್ಕಾಗಿ ಮಾನಸಿಕ ತಜ್ಞರಿಂದ ತರಬೇತಿ ನೀಡುವುದು ಅಗತ್ಯವಾಗಿದೆ' ಎಂದು ಅವರು ಅಭಿಪ್ರಾಯಪಟ್ಟರು.

'ಒಂದು ವಿಭಾಗದಲ್ಲಿ ಒಬ್ಬ ಆಟಗಾರನ ಮೇಲಷ್ಟೇ ಅವಲಂಬಿತವಾಗಬಾರದು ಎರಡನೇ ಸಾಲಿನ ಆಟಗಾರರನ್ನು ಬೆಳೆಸಬೇಕು. ಕ್ರಿಕೆಟ್‌ನಲ್ಲಿ ಅಂತಹ ಮಾದರಿಯಿದೆ. ಸೀನಿಯರ್ ತಂಡ, ಎ ತಂಡ, 19 ವರ್ಷದೊಳಗಿನವರು, 17 ವರ್ಷದೊಳಗಿನವರ ತಂಡಗಳು ಇವೆ. ಇಂತಹ ವ್ಯವಸ್ಥೆ ಬೇರೆ ಕ್ರೀಡೆಗಳಲ್ಲಿಯೂ ಬರಬೇಕು ಪ್ರತಿಭಾವಂತರಿಗೆ ಕೊರತೆ ಇಲ್ಲ' ಎಂದು ಹೇಳಿದರು.

'ಇದಲ್ಲದೇ ಕ್ರೀಡಾಪಟುಗಳೂ ಜವಾಬ್ದಾರಿ ನಿಭಾಯಿಸಬೇಕು. ಒಮ್ಮೆ ಅವರು ಕೇಳಿದ್ದನ್ನು ಪಡೆದ ನಂತರ ಅದಕ್ಕೆ ತಕ್ಕ ಫಲಿತಾಂಶ ನೀಡುವ ಹೊಣೆಯನ್ನು ಕ್ರೀಡಾಪಟುಗಳೇ ನಿಭಾಯಿಸುವುದನ್ನು ಕಲಿಯಬೇಕು' ಎಂದು ಹೇಳಿದರು.

ಲಕ್ಷ್ಯ ಕುರಿತು ಮಾತನಾಡಿದ ಅವರು, 'ಅವರಿಗೆ ಇನ್ನು ಸ್ವಲ್ಪ ಅಭ್ಯಾಸದ ಅವಶ್ಯಕತೆ ಇದೆ. ಆಟದ ಗತಿಯ ಮೇಲೆ ನಿಯಂತ್ರಣ ಸಾಧಿಸುವುದು ಅವಶ್ಯಕ ವಾಗಿದೆ. ಜೊತೆಗೆ ಒಂದಿಷ್ಟು ಮಾನಸಿಕ ದೃಢತೆಯ ತರಬೇತಿ ಕೂಡ ಬೇಕು' ಎಂದರು. ಲಕ್ಷ್ಯ ಅವರು ಬೆಂಗಳೂರಿನ ಪ್ರಕಾಶ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಪುಣೆ ರೇಸ್

ಡಿಫ್ ಗೆಲ್ಲುವ ನಿರೀಕ್ಷೆ

ವಿನ್‌ಫೇರ್247 ಈವ್ ಚಾಂಪಿಯನ್ ಟ್ರೋಫಿ ಮಂಗಳವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡಿಫ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗಾಡೆಸ್ ಆಫ್ ಡಾನ್ 3, ಎಲೊಕ್ವೆಂಟ್ 4, ಫಿಡಾಟೊ 7
2ನೇ ರೇಸ್: ಪ್ರಿನ್ಸ್ ಓ ವಾರ್ 1, ಫ್ರೀಡಂ 4, ಲಿಯೊ ದಿ ಲಯನ್ 5
3ನೇ ರೇಸ್: ವಿನ್ಸರೊ 1, ಥಂಡರಿಂಗ್ ಫಿನಿಕ್ಸ್ 5, ಸ್ಟಾಲಿನ್ 4
4ನೇ ರೇಸ್: ಮುಮ್ತಾಜ್ 10, ಜೆಂಡಾಯ 14, ಇಂಕ್ವಿಲಾಬ್ 2
5ನೇ ರೇಸ್: ಡಿಫ್ 1, ಜೆಂಡಾಯಿ 2, ಥರ್ಡ್ ಅವೆನ್ಯೂ 4
6ನೇ ರೇಸ್: ಅರ್ಥ್ 1, ಮಜಾಲ್ 8, ವಿಲ್ಲಾನೆಲ್ 3
7ನೇ ರೇಸ್: ದಿ ಪ್ಯಾಂಥರ್ 9, ಎಕ್ಸುಮಾ 2, ರಿಕೊಷೆಟ್ 11

ಉತ್ತಮ ಬೆಟ್: ಮುಮ್ತಾಜ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಇಂಗ್ಲೆಂಡ್ ಮಾಜಿ ಬ್ಯಾಟರ್ ಥೋರ್ಪ್ ನಿಧನ

ಲಂಡನ್ (ಪಿಟಿಐ): ಇಂಗ್ಲೆಂಡ್ ತಂಡದ ಆಕರ್ಷಕ ಬ್ಯಾಟರ್ ಗಳಲ್ಲಿ ಒಬ್ಬರಾಗಿದ್ದ ಗ್ರಹಾಂ ಥೋರ್ಪ್ (55) ಗಂಭೀರ ಅನಾರೋಗ್ಯದಿಂದ ಸೋಮವಾರ ನಿಧನರಾದರು ಎಂದು ಇಂಗ್ಲೆಂಡ್ ಮತ್ತು ಕೌಂಟಿ ಮಂಡಳಿ ಪ್ರಕಟಿಸಿದೆ.

ಮಧ್ಯಮ ಕ್ರಮಾಂಕದಲ್ಲಿ ಅತ್ಯುತ್ತಮ ಬ್ಯಾಟರ್ ಆಗಿದ್ದ ಥೋರ್ಪ್ ಅವರು 2022ರಲ್ಲಿ ಅಫ್ಗಾನಿಸ್ತಾನ ತಂಡದ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದರು. ಆದರೆ ಅನಾರೋಗ್ಯದ ಪರಿಣಾಮ ಆ ಹುದ್ದೆ ವಹಿಸಲಾಗಲಿಲ್ಲ. ಅವರ ಕಾಯಿಲೆಯ ಸ್ವರೂಪವನ್ನು ಬಹಿರಂಗಪಡಿಸಲಾಗಿಲ್ಲ. ಅವರಿಗೆ ಪತ್ನಿ, ನಾಲ್ವರು ಮಕ್ಕಳಿದ್ದಾರೆ.

ಎಡಗೈ ಬ್ಯಾಟರ್ ಥೋರ್ಪ್ ಅವರು 1993ರಲ್ಲಿ ಆ್ಯಷಸ್ ಶತಕದೊಡನೆ ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು. 2000–01ರಲ್ಲಿ ಪಾಕಿಸ್ತಾನ ಮತ್ತು ಶ್ರೀಲಂಕಾ ವಿರುದ್ಧ ಸರಣಿಗಳನ್ನು ಸತತವಾಗಿ ಗೆಲ್ಲುವಲ್ಲಿ ಥೋರ್ಪ್ ಅವರ ಪಾತ್ರ ಪ್ರಮುಖವಾಗಿತ್ತು. 2005ರಲ್ಲಿ ಕೊನೆಯ ಬಾರಿ ಆಡಿದ್ದರು. ಕೌಂಟಿ ಕ್ರಿಕೆಟ್‌ನಲ್ಲಿ ಅವರು ಸರ್ರೆ ತಂಡಕ್ಕೆ 17 ವರ್ಷ ಆಡಿದ್ದು, 20,000ಕ್ಕೂ ಅಧಿಕ ರನ್ ಗಳಿಸಿದ್ದಾರೆ.

ಕ್ರಿಕೆಟ್ ಬದುಕಿನಿಂದ ನಿವೃತ್ತರಾದ ಮೇಲೆ ಅವರು ತರಬೇತಿಗೆ ಇಳಿದರು. ನ್ಯೂಸೌತ್ ವೇಲ್ಸ್ ಕೋಚ್ ಆಗಿದ್ದರು. 2010ರಲ್ಲಿ ಇಂಗ್ಲೆಂಡ್ ತಂಡದ ಬ್ಯಾಟಿಂಗ್ ಕೋಚ್ ಆಗಿ ನೇಮಕಗೊಂಡಿದ್ದರು. ಟ್ರೇವರ್ ಬೇಲಿಸ್ ಕೋಚ್ ಆಗಿದ್ದಾಗ ಅವರು ಅಸಿಸ್ಟೆಂಟ್ ಕೋಚ್ ಆಗಿದ್ದರು. ಆದರೆ 2021–22ರ ಆ್ಯಷಸ್ ಪ್ರವಾಸದಲ್ಲಿ 0–4 ವೈಟ್‌ವಾಷ್ ನಂತರ ಅವರನ್ನು ಕೈಬಿಡಲಾಯಿತು.

ಅಂತರರಾಷ್ಟ್ರೀಯ ಕ್ರಿಕೆಟ್: ಗ್ರಹಾಂ ಥೋರ್ಪ್ ಸಾಧನೆ

ಮಾದರಿ	ಆಡಿದ ಪಂದ್ಯಗಳು	ರನ್‌ಗಳು	ಶತಕ	ಅರ್ಧಶತಕ
ಟೆಸ್ಟ್	100	6744	16	39
ಏಕದಿನ	82	2830	0	21

